ಸಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು
ಜಗದೀಶ ಡಿ.
ನೋಂದಣಿ ಸಂಖ್ಯೆ: ೧೫೦೧೦೮೦೩.೦೦೧೩.



ಮಾರ್ಗದರ್ಶಕರು
ಡಾ. ಸಿ.ಎಸ್. ವಾಸುದೇವನ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
೨೦೧೪-೧೫

ಹಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು
ಜಗದೀಶ ಡಿ.
ನೋಂದಣಿ ಸಂಖ್ಯೆ: ೧೫೦೧೦೮೦೩೦೦೧೩

ಮಾರ್ಗದರ್ಶಕರು
ಡಾ. ಸಿ.ಎಸ್. ವಾಸುದೇವನ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೫-೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಜಗದೀಶ ಡಿ. ಅವರು "ಹಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಸಂಪ್ರಬಂಧವನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಅಧ್ಯಯನದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ಸಿ.ಎಸ್. ವಾಸುದೇವನ್)
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: 30-7-2016

ಡಾ. ಸಿ.ಎಸ್. ವಾಸುದೇವನ್
ಪ್ರಾಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - 583 276.

ಸಂಶೋಧಕರ ಪ್ರಮಾಣ ಪತ್ರ

"ಹಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ **ಡಾ.ಸಿ.ಎಸ್. ವಾಸುದೇವನ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಅಧ್ಯಯನದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Jagadeesha. D

ಸ್ಥಳ: ವಿದ್ಯಾರಣ್ಯ
ದಿನಾಂಕ: 30-7-2016

(ಜಗದೀಶ ಡಿ.)
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು: ಪ್ರಸ್ತಾವನೆ / ೨

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸ್ವರೂಪ

೧.೫. ಅಧ್ಯಯನದ ಸಮೀಕ್ಷೆ

ಅಧ್ಯಾಯ ಎರಡು: ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ / ೧೨

೨.೧. ಭೌಗೋಳಿಕ ಪರಿಸರ

೨.೨. ಐತಿಹ್ಯ, ಸ್ಥಳನಾಮ ಮತ್ತು ಸ್ಥಳ ಪುರಾಣ

೨.೩. ಪ್ರಾಗಿತಿಹಾಸ

೨.೪. ರಾಜಕೀಯ ಇತಿಹಾಸ

ಅಧ್ಯಾಯ ಮೂರು: ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ / ೪೨

೩.೧. ದೇವಾಲಯಗಳು

೩.೨. ಮೂರ್ತಿಶಿಲ್ಪಗಳು

೩.೩. ಶ್ರೀತೇರುಮಲ್ಲೇಶ್ವರ ದೇವಾಲಯದ ಭಿತ್ತಿಚಿತ್ರಗಳು

ಅಧ್ಯಾಯ ನಾಲ್ಕು: ಶಾಸನಗಳು ಮತ್ತು ಸ್ಮಾರಕ ಶಿಲ್ಪಗಳು / ೭೨

೪.೧. ಶಾಸನಗಳು

೪.೨. ಸ್ಮಾರಕ ಶಿಲ್ಪಗಳು

೪.೩. ಸ್ಮಾರಕಗಳು

ಅಧ್ಯಾಯ ಐದು: ನಂಬಿಕೆ ಮತ್ತು ಆಚರಣೆಗಳು / ೮೮

ಅಧ್ಯಾಯ ಆರು: ಸಮಾರೋಪ / ೧೦೫

ಅನುಬಂಧಗಳು

ಗ್ರಂಥಸೂಚಿ


ಕೋಷ್ಟಕ

ವಕ್ತೃ ವಿವರ

ತಲವಿನ್ಯಾಸ


ಛಾಯಾಚಿತ್ರಗಳು

೧. ಕರ್ನಾಟಕ ರಾಜ್ಯದ ನಕ್ಷೆ




ಕೃಪೆ: ಗೂಗಲ್ ಇಮೇಜಸ್

೨. ಚಿತ್ರದುರ್ಗ ಜಿಲ್ಲೆಯ ನಕ್ಷೆ



ಕೃಪೆ: ಗೂಗಲ್ ಇಮೇಜಸ್

೩. ಹಿರಿಯೂರು ತಾಲ್ಲೂಕು



ಕೃಪೆ: ಗೊಗಲ್ ಇಮೇಜಸ್

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಮತ್ತು ಸಮೀಕ್ಷೆ

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸ್ವರೂಪ

೧.೫. ಅಧ್ಯಯನದ ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಮತ್ತು ಸಮೀಕ್ಷೆ

ಪ್ರಸ್ತಾವನೆ

ಮಾನವನು ಪ್ರಾರಂಭದಲ್ಲಿ ಒಂದು ಕಡೆ ನೆಲೆಸದೆ ಅಲೆಮಾರಿಯಾಗಿ ಅನುಕೂಲಕರ ಪ್ರದೇಶದಲ್ಲಿ ಅಲೆದಾಡುತ್ತಾ ಜೀವನ ಕಳೆಯುತ್ತಿದ್ದ. ನಂತರ ಒಂದೆಡೆ ಶಾಶ್ವತವಾಗಿ ನೆಲೆನಿಂತು ತನಗೆ ಬೇಕಾದ ಆಹಾರ ಪದಾರ್ಥಗಳನ್ನು ತಾನೇ ಬೆಳೆದು ತಿನ್ನಲು ಪ್ರಾರಂಭಿಸಿದ. ಇದು ಮಾನವನ ಅಲೆಮಾರಿ ಮತ್ತು ಕೃಷಿ ಸಂಸ್ಕೃತಿಗಳ ವಿಕಾಸವನ್ನು ಸೂಚಿಸುತ್ತದೆ. ಈ ಬೆಳವಣಿಗೆ ನಂತರದಲ್ಲಿ ಗ್ರಾಮ, ನಗರ, ಸಂಸ್ಕೃತಿಯಾಗಿ ಮಾರ್ಪಟ್ಟಿರುವುದನ್ನು ಕಾಣಬಹುದಾಗಿದೆ.

ಚರಿತ್ರೆಯೆಂದರೆ ರಾಜ, ರಾಣಿ, ಅವರ ಅರಮನೆ, ಸಾಮ್ರಾಜ್ಯದ ವರ್ಣನೆ ಎಂದು ಭಾವಿಸಲಾಗಿತ್ತು. ಆದರೆ ಪ್ರತಿಯೊಂದು ಗ್ರಾಮ, ತಾಲೂಕು, ಜಿಲ್ಲೆ ಹಾಗೂ ರಾಜ್ಯಕ್ಕೂ ತನ್ನದೆ ಆದ ಇತಿಹಾಸವಿದೆ. ಕೆಲವು ದಶಕಗಳಿಂದೀಚೆಗೆ ಸ್ಥಳೀಯ ಚರಿತ್ರೆಯಲ್ಲಿ ಗ್ರಾಮ, ಹೋಬಳಿ, ನಗರ, ತಾಲೂಕು ಹಾಗೂ ಜಿಲ್ಲೆಗಳ ಮಟ್ಟದ ಅಧ್ಯಯನಗಳು ನಡೆಯುತ್ತಿವೆ. ಇಂತಹ ಅಧ್ಯಯನಗಳು ಸ್ಥಳೀಯ ಚರಿತ್ರೆಯನ್ನು ತಿಳಿಸುವುದರ ಜೊತೆಗೆ ರಾಜಕೀಯ ಇತಿಹಾಸ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಪುನರ್‌ರೂಪಿಸಲು ಸಹಕಾರಿಯಾಗಿದೆ.

ಆಯಾಯ ಪ್ರದೇಶದಲ್ಲಿ ಬದುಕಿ ಬಾಳಿದ ಮಾನವನ ಜೀವನ ವಿಧಾನ, ಅನುಸರಿಸಿ ಎದುರಿಸಿದ ಸಮಸ್ಯೆ, ಜೀವನ ಮೌಲ್ಯ ಹಾಗೂ ಭೌತಿಕ ಅವಶೇಷ ಮೊದಲಾದವುಗಳ ವಿಶ್ಲೇಷಣೆಯೇ ಅಧ್ಯಯನವಾಗಿದೆ. ಹಾಗಾಗಿ ಸ್ಥಳೀಯ ಚರಿತ್ರೆಯನ್ನು ಕಟ್ಟಲು ಆಕರಗಳು ಬಹಳ ಮುಖ್ಯ. ಅಂತಹ ಆಕರಗಳಲ್ಲಿ ಪ್ರಧಾನವಾಗಿ ಸಾಹಿತ್ಯಿಕ, ಪುರಾತತ್ವ ಮತ್ತು ಮೌಖಿಕ ಆಕರಗಳು ಮುಖ್ಯವಾದವು. ಒಂದು ಪ್ರದೇಶದ ಅಧ್ಯಯನದಲ್ಲಿ ಸಾಹಿತ್ಯ, ಶಾಸನ, ಪುರಾತತ್ವೀಯ ಹಾಗೂ ಮೌಖಿಕ ಆಕರಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದರಿಂದ ಆಯಾಯ ಪ್ರದೇಶದ ಮಾನವನ ಚರಿತ್ರೆ ಹಾಗೂ ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ಕಟ್ಟಿಕೊಡಬಹುದು.

ಪ್ರಸ್ತುತ ಚಿತ್ರದುರ್ಗ ಜಿಲ್ಲೆಯಲ್ಲಿರುವ 'ಹಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನ' ಎಂಬ ಶೀರ್ಷಿಕೆಯ ಅಡಿಯಲ್ಲಿ ಇಡೀ ಹಿರಿಯೂರು ಪಟ್ಟಣದ ಚರಿತ್ರೆ ಮತ್ತು ಸಂಸ್ಕೃತಿಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗುವುದು.

ಕರ್ನಾಟಕದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯು ಪ್ರಾಗೈತಿಹಾಸಿಕವಾಗಿ, ಚಾರಿತ್ರಿಕವಾಗಿ ಮಹತ್ವದ ಸ್ಥಾನ ಪಡೆದಿದೆ. ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವ ದೃಷ್ಟಿಯಿಂದ ವಿಶೇಷವಾಗಿದೆ. ಚಿತ್ರದುರ್ಗ ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಹಿರಿಯೂರು. ಒಂದು ಈ ಪಟ್ಟಣದ ಸುತ್ತಮುತ್ತ ವೇದಾವತಿ ನದಿ, ಅನೇಕ ಕೆರೆಕಟ್ಟೆ ಮತ್ತು ಬಾವಿಗಳಿವೆ. ನೀರಾವರಿಯ ಅನುಕೂಲದಿಂದ ಜನ ಜೀವನಕ್ಕೆ ಯೋಗ್ಯ ಪ್ರದೇಶವೆನಿಸಿದೆ. ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಪಾಂಡ್ಯ, ಸೇವುಣ, ಹೊಯ್ಸಳ, ವಿಜಯನಗರ ಅರಸರು, ಚಿತ್ರದುರ್ಗ ಪಾಳೆಗಾರರು, ಹರತಿಕೋಟೆಯ ಪಾಳೆಗಾರರು ಮತ್ತು ಮೈಸೂರು ಒಡೆಯರ ಕಾಲದ ಪ್ರಾಚೀನ ಕುರುಹುಗಳು ಈ ನಗರದ ಸುತ್ತಮುತ್ತಲಿನ ಭಾಗಗಳಲ್ಲಿ ಗೋಚರಿಸುತ್ತದೆ. ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಸ್ಮಾರಕ, ಕೋಟೆ–ಕೊತ್ತಲು, ಕೆರೆಕಟ್ಟೆ, ಬಾವಿ, ಶಿಲ್ಪಗಳು ಆಮೂಲಾಗ್ರ ಪಾತ್ರವನ್ನು ವಹಿಸುತ್ತವೆ. ಇಲ್ಲಿನ ದೇವಾಲಯ, ಶಾಸನ, ಐತಿಹ್ಯಗಳು ಹಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನದ ಆಕರ ಸಂಪತ್ತಾಗಿದೆ. ಈ ಪ್ರದೇಶ ಹೊಯ್ಸಳ, ವಿಜಯನಗರ, ಚಿತ್ರದುರ್ಗ ಮತ್ತು ಹರ್ತಿಕೋಟೆಯ ಪಾಳೆಗಾರರು ಇತ್ಯಾದಿ ಅರಸರ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣಕ್ಕೆ ಸಹಕಾರಿಯಾಗಿದೆ.

ಇಲ್ಲಿ ಶೈವ, ವೈಷ್ಣವ, ಮುಸ್ಲಿಂ, ಕ್ರೈಸ್ತ ಧರ್ಮ ಮುಂತಾದ ಧಾರ್ಮಿಕ ಪಂಥಗಳ ಪ್ರಾಚೀನ ಕುರುಹುಗಳು ಇಲ್ಲಿನ ದೇವಾಲಯ, ಮಸೀದಿ, ಚರ್ಚ್‌ಗಳು ಉಳಿದಿವೆ. ಮೌಖಿಕ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ಹಿರಿಯೂರು ಪಟ್ಟಣದಲ್ಲಿನ ನಂಬಿಕೆ, ಆಚರಣೆ, ಜಾತ್ರೆ, ಉತ್ಸವಗಳು, ಈ ಪಟ್ಟಣದ ಸಾಂಸ್ಕೃತಿಕ ವೈಶಿಷ್ಟ್ಯತೆಗೆ ಸಾಕ್ಷಿಯಾಗಿ ನಿಂತಿವೆ.

ಅಧ್ಯಯನದ ಉದ್ದೇಶ

ಕರ್ನಾಟಕ ಇತಿಹಾಸದಲ್ಲಿ ಚಿತ್ರದುರ್ಗ ಜಿಲ್ಲೆಯು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಜಿಲ್ಲೆಯ ಮಧ್ಯ ಭಾಗದಲ್ಲಿರುವ ಹಿರಿಯೂರು ಪಟ್ಟಣವು ಚಾರಿತ್ರಿಕವಾಗಿ ಶ್ರೀಮಂತವಾಗಿರುವ ಪ್ರಸ್ತುತ ಹಿರಿಯೂರು ಪ್ರದೇಶದ ಪಟ್ಟಣದಲ್ಲಿ ತೆಂಗು ವಿಶೇಷ ಬೆಳೆಯಾದುದ್ದರಿಂದ ಈ ತಾಲೂಕನ್ನು 'ಕಲ್ಪವೃಕ್ಷ ತಾಲೂಕು' ಎಂಬ ಹೆಸರು ಪಡೆದಿದೆ.

ಸಂಶೋಧನೆಗೆ ಉದ್ದೇಶ ಬಹುಮುಖ್ಯ. ಉದ್ದೇಶವು ಅಧ್ಯಯನಕ್ಕೆ ಗುರಿ ಇದ್ದಂತೆ. ಅಧ್ಯಯನದ ಉದ್ದೇಶವನ್ನು ಸಾಧಿಸಿದರೆ ಗುರಿಯನ್ನು ಸಾಧಿಸಿದಂತೆ ಸಮಸ್ಯೆಯ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಮಾಡುತ್ತದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಅಧ್ಯಯನ ಏನನ್ನು ಶೋಧಿಸಲು ಅಥವಾ ಪರೀಕ್ಷಿಸಲು ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ ಎನ್ನುವುದನ್ನು ಹೇಳುತ್ತದೆ.

ಅಧ್ಯಯನದ ಉದ್ದೇಶಗಳು ಸಂಶೋಧನಾ ಕೆಲಸಕ್ಕೆ ಒಂದು ಮಾರ್ಗ ಸೂಚಿಯಂತೆ ಕೆಲಸ ಮಾಡುತ್ತದೆ. ಆದ್ದರಿಂದ ಸಂಶೋಧನಾ ಅಧ್ಯಯನಕ್ಕೆ ಉದ್ದೇಶವಿರಲೇಬೇಕು. ಕೆಲವೊಂದು

ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನ ಅಥವಾ ಸಂಶೋಧನೆಯನ್ನು ಕೈಗೊಂಡು ಕಾರ್ಯ ನಿರ್ವಹಿಸಿದಾಗ ಅದು ಪರಿಪೂರ್ಣವಾಗುತ್ತದೆ. ಪ್ರಸ್ತುತ ಅಧ್ಯಯನವು "ಹಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನ" ಎಂಬ ಶೀರ್ಷಿಕೆಯನ್ನು ಹೊಂದಿದ್ದು ಹಿರಿಯೂರು ಪಟ್ಟಣದ ಚರಿತ್ರೆ ಮತ್ತು ಸಂಸ್ಕೃತಿಯನ್ನು ಈ ಮೂಲಕ ಬೆಳಕಿಗೆ ತರುವ ಉದ್ದೇಶವನ್ನು ಹೊಂದಲಾಗಿದೆ. ಈ ಪ್ರದೇಶ ನೈಸರ್ಗಿಕ ಗೋಗುಡ್ಡದಲ್ಲಿ ಕಲ್ನಾರು, ಕಬ್ಬಿಣ, ಕಾಲ್ಸೈಟ್, ಚಿನ್ನ ನಿಶಾನಿಗುಡ್ಡದ ಬಳಿ ಸೀಸ ಮುಂತಾದ ಖನಿಜಗಳು ದೊರೆಯುತ್ತವೆ. ಭೌಗೋಳಿಕವಾಗಿ ವಿಶಿಷ್ಟವಾಗಿದೆ. ಈ ಭೌಗೋಳಿಕ ಅಂಶಗಳು ಇಲ್ಲಿನ ಚರಿತ್ರೆ ಮತ್ತು ಸಂಸ್ಕೃತಿಯ ಮೇಲೆ ಬೀರಿರುವ ಪ್ರಭಾವವನ್ನು ವಿವರವಾಗಿ ಚರ್ಚಿಸಲಾಗುವುದು. ಚಾರಿತ್ರಿಕವಾಗಿ ಹೊಯ್ಸಳರು ವಿಜಯನಗರ ಅರಸರು ಹಾಗೂ ಚಿತ್ರದುರ್ಗ ಪಾಳೆಗಾರರು ಮತ್ತು ಮೈಸೂರು ಒಡೆಯರ ಆಳ್ವಿಕೆಯ ಪ್ರಾಚೀನ ಕುರುಹುಗಳನ್ನು ದೊರೆತ ಚಾರಿತ್ರಿಕ ಮತ್ತು ಸಾಹಿತ್ಯಿಕ ಆಧಾರಗಳನ್ನು ಪ್ರಧಾನವಾಗಿಟ್ಟುಕೊಂಡು ವಿಶ್ಲೇಷಿಸಲಾಗುವುದು.

ಭೌಗೋಳಿಕವಾಗಿ ಪಟ್ಟಣ ಪರಿಸರದ ಸುತ್ತಮುತ್ತ ಹಳೇಶಿಲಾಯುಗದಿಂದ ಬೃಹತ್ ಶಿಲಾಯುಗ ಕಾಲದ ಅವಶೇಷಗಳು ಬೆಳಕಿಗೆ ತರುವುದರ ಮುಖೇನ ಇಲ್ಲಿನ ಪ್ರಾಚೀನ ಮಾನವನ ಸಂಸ್ಕೃತಿಯನ್ನು ಕುರಿತು ವಿವೇಚಿಸಲಾಗುವುದು. ನೈಸರ್ಗಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಈ ಪ್ರದೇಶ ವಿಶಿಷ್ಟವಾಗಿದೆ. ಈ ಪರಿಸರದ ವ್ಯಾಪ್ತಿಗೆ ಒಳಪಡುವ ಪ್ರತಿಯೊಂದು ಹಳ್ಳಿಯು ಪ್ರಾಗೈತಿಹಾಸಿಕವಾಗಿ ಮತ್ತು ಐತಿಹಾಸಿಕವಾಗಿ ಮಹತ್ವ ಪಡೆದಿರುವುದು, ಈ ನೆಲೆಗಳಲ್ಲಿ ಕಂಡುಬರುವ ಹಲವಾರು ಕುರುಹುಗಳು ಸ್ಪಷ್ಟೀಕರಿಸುತ್ತವೆ. ಇಂತಹ ಸಂಸ್ಕೃತಿಯನ್ನು ಬಿಂಬಿಸುವ ಪ್ರತಿಯೊಂದು ಚಾರಿತ್ರಿಕ ಅಂಶಗಳನ್ನು ದಾಖಲಿಸುವುದರ ಜೊತೆಗೆ, ಜನರಲ್ಲಿ ಜಾಗೃತಿ ಮೂಡಿಸುವ ಮತ್ತು ಮುಂದಿನ ಪೀಳಿಗೆಗಳಿಗೆ ದಾಖಲೆಯನ್ನು ಒದಗಿಸುವುದು ಈ ಅಧ್ಯಯನದ ಮಹತ್ವದ ಉದ್ದೇಶವಾಗಿದೆ.

ಚಾರಿತ್ರಿಕವಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಇಲ್ಲಿನ ಪ್ರಾಚೀನ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ, ದೇವಾಲಯ, ಸ್ಮಾರಕ ಶಿಲ್ಪಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗುವುದು. ಇಲ್ಲಿನ ದೇವಾಲಯಗಳಲ್ಲಿ ಪ್ರಾಚೀನತೆಯನ್ನು ಹೊಯ್ಸಳರ ಕಾಲದಿಂದ ಚಿತ್ರದುರ್ಗ ಪಾಳೆಗಾರರು, ಹಾಗೂ ವಿಜಯನಗರದ ಅರಸರು ಮತ್ತು ವಿಜಯನಗರೋತ್ತರ ಕಾಲದ ದೇವಾಲಯಗಳನ್ನು ಗುರುತಿಸಿ, ಯಾವ ಮತ್ತು ಯಾರ ಕಾಲಘಟ್ಟಕ್ಕೆ ಸಂಬಂಧಿಸಿದವು ಎಂಬುದನ್ನು ಚರ್ಚಿಸುತ್ತ ಅದರ ಶೈಲಿಯನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ಇಲ್ಲಿನ ಪ್ರಾಚೀನವಾದ ದೇವಾಲಯ ಪ್ರಮುಖವಾದ ಪಾತ್ರವನ್ನು ವಹಿಸಿದ್ದು ಇವುಗಳ ರಚನೆ, ನಿರ್ಮಾಣದ ಉದ್ದೇಶ, ಕಾಲಮಾನ, ಇವುಗಳ ಪ್ರಸ್ತುತ ಸ್ಥಿತಿ ಎಂಬಿತ್ಯಾದಿ ಸಂಗತಿಗಳನ್ನು ಸೋದಹರಣವಾಗಿ ಚರ್ಚಿಸಲಾಗುವುದು.

ವೇದಾವತಿ ನದಿಯು ಬಹುಮುಖ್ಯ ನದಿಯಾಗಿ ತಾಲೂಕಿನ ಪಶ್ಚಿಮ ಭಾಗದಿಂದ ಮಧ್ಯೆ ಈಶಾನ್ಯಾಭಿಮುಖವಾಗಿ, ಪೂರ್ವಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಳ್ಳಕೆರೆ ತಾಲೂಕನ್ನು ಪ್ರವೇಶಿಸುತ್ತದೆ. ಈ ನದಿಗೆ ಮಾರಿಕಣಿವೆಯ ಬಳಿ ಅಣೆಕಟ್ಟೆ ಹಾಕಿ ವಾಣಿವಿಲಾಸ ಸಾಗರವೆಂಬ ಜಲಾಶಯ ನಿರ್ಮಿಸಿದ್ದಾರೆ. ಇದರಿಂದಾಗಿ ಹಿರಿಯೂರು ನೀರಾವರಿ ವ್ಯವಸಾಯಕ್ಕೆ ತುಂಬಾ ಅನುಕೂಲವಾಗಿದೆ. ಅಂದಿನ ಆರ್ಥಿಕ ಜೀವನದ ಬೆನ್ನೆಲುಬಾಗಿದ್ದು ಈ ಭಾಗದಲ್ಲಿ ಉಳಿದುಬಂದಿರುವ ಹೊಯ್ಸಳ ಹಾಗೂ ವಿಜಯನಗರ ಮತ್ತು ಚಿತ್ರದುರ್ಗ ಪಾಳೆಗಾರರ ಕಾಲದ ಕೆರೆ-ಕಟ್ಟೆಗಳನ್ನು ಕುರಿತು ಹಲವು ಆಕರಗಳ ಮೂಲಕ ವಿವರವಾಗಿ ಚರ್ಚಿಸಲಾಗುವುದು. ಇನ್ನೂ ಮೌಖಿಕ ಸಾಹಿತ್ಯದ ಮೂಲಕ ಉಳಿದುಕೊಂಡು ಬಂದಿರುವ ಐತಿಹ್ಯ, ನಂಬಿಕೆ ಮತ್ತು ಆಚರಣೆಗಳು ಸಾಂಸ್ಕೃತಿಕವಾಗಿ ಜಾತ್ರೆ-ಉತ್ಸವಗಳನ್ನು ಕುರಿತು ದಾಖಲೀಕರಿಸಿ, ವಿಶ್ಲೇಷಣೆ ಮಾಡಲಾಗುವುದು.

ಒಟ್ಟಾರೆ ಇಲ್ಲಿನ ಪುರಾತತ್ವೀಯ, ಸಾಹಿತ್ಯಿಕ ಹಾಗೂ ಮೌಖಿಕ ಆಕರಗಳ ಮೂಲಕ ಇಡೀ ಹಿರಿಯೂರು ಪಟ್ಟಣದ ಸಮಗ್ರ ಚಾರಿತ್ರಿಕ ಅಧ್ಯಯನ ನಡೆಸುವ ಉದ್ದೇಶ ಪ್ರಸ್ತುತ ಅಧ್ಯಯನದ್ದು.

ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಗೆ ಚೌಕಟ್ಟು ಬಹಳ ಮುಖ್ಯ. ಅದರಂತೆಯೇ ಒಂದು ಅಧ್ಯಯನಕ್ಕೆ ವ್ಯಾಪ್ತಿ ಇರಬೇಕು. ಈ ಮಿತಿಯಲ್ಲಿ ಅಧ್ಯಯನ ಕೈಗೊಂಡಾಗ ಮಾತ್ರ ಪರಿಪೂರ್ಣವಾಗುತ್ತದೆ. ಈ ಚೌಕಟ್ಟಿನ ಕ್ರಮಬದ್ಧತೆಯಿಂದಾಗಿ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ.

ಅಧ್ಯಯನದ ವ್ಯಾಪ್ತಿಯು ಶೀರ್ಷಿಕೆಯನ್ವಯ 'ಹಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನ' ವಿಷಯವನ್ನು ಒಳಗೊಂಡಿದೆ. ಪ್ರಸ್ತುತ ಅಧ್ಯಯನದಲ್ಲಿ ಭೌಗೋಳಿಕ ವ್ಯಾಪ್ತಿಗೆ ಅನುಗುಣವಾಗಿ ಅಲ್ಲದೆ ಸಂದರ್ಭಾನುಸಾರ ಇತರ ನೆರೆಯ ತಾಲೂಕುಗಳ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು ಪ್ರಾಗೈತಿಹಾಸಿಕ ಕಾಲದಿಂದ ಆಧುನಿಕ ಕಾಲದವರೆಗಿನ ವಿವಿಧ ಆಯಾಮಗಳನ್ನು ಚಾರಿತ್ರಿಕ, ಸಾಂಸ್ಕೃತಿಕ ಸಂಗತಿಗಳ ಮುಖೇನ ಗುರುತಿಸುವ ಪ್ರಯತ್ನವನ್ನು ಮಾಡಲಾಗುವುದು.

ಹಿರಿಯೂರು ಪಟ್ಟಣದಲ್ಲಿರುವ ಐತಿಹಾಸಿಕ ಕುರುಹುಗಳು, ಅಲ್ಲಿನ ಐತಿಹ್ಯ, ನಂಬಿಕೆ ಆಚರಣೆಗಳನ್ನು ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಂಡು ಸಂದರ್ಭಕ್ಕನುಸಾರವಾಗಿ ಅಕ್ಕಪಕ್ಕದ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

ಅಧ್ಯಯನದ ವಿಧಾನ

ಒಂದು ಕಾರ್ಯ ಯಶಸ್ವಿಯಾಗಬೇಕಾದರೆ ಕ್ರಮಬದ್ಧತೆ ಅತಿಮುಖ್ಯ. ಹಾಗಾಗಿ ಸಂಶೋಧನ ಕಾರ್ಯಕ್ಕೂ ವ್ಯವಸ್ಥಿತ ಅಧ್ಯಯನ ಬಹಳ ಅವಶ್ಯಕವಾದದ್ದು. ಅಧ್ಯಯನವನ್ನು ವೈಜ್ಞಾನಿಕವಾಗಿ ಕ್ಷೇತ್ರಕಾರ್ಯವನ್ನು ಕೈಗೊಂಡು ಪೂರೈಸಲಾಗುವುದು.

ಸಂಶೋಧನೆಗಾಗಿ ಹಿರಿಯೂರು ಪಟ್ಟಣವನ್ನು ಆಯ್ದುಕೊಂಡಾಗ ತಾಲೂಕು ಕಛೇರಿಯಲ್ಲಿ, ಪಟ್ಟಣದ ನಕಾಶೆ, ಇತರೆ ಮಾಹಿತಿಯನ್ನು ಪಡೆದು ಸ್ಮಾರಕ, ದೇವಾಲಯ, ಮೂರ್ತಿಶಿಲ್ಪ, ಶಾಸನ ಇತ್ಯಾದಿ ವಿವರ ಸಂಗ್ರಹಿಸಿಕೊಂಡು ಈವರೆಗಿನ ಅಧ್ಯಯನಗಳನ್ನು ಗಮನಿಸಿ ಅಧ್ಯಯನ ಮಾಡಲಾಗಿದೆ. ಅಲ್ಲದೆ ಇವುಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಅಗತ್ಯ ನಕ್ಷೆಗಳನ್ನು ರಚಿಸಿಕೊಳ್ಳಲಾಗುವುದು. ಕೇವಲ ಪಟ್ಟಣದ ಪರಿಸರದಲ್ಲಿ ಇರುವಂತಹ ಪ್ರಾಗೈತಿಹಾಸಿಕ ಕಾಲದ ಮಾನವ ವಾಸದ ನೆಲೆಗಳು ಮತ್ತು ಕುರುಹುಗಳನ್ನು ದಾಖಲಿಸಲಾಗುವುದು. ಸಾಂಸ್ಕೃತಿಕವಾಗಿ ಇಂದಿಗೂ ನಡೆದುಕೊಂಡು ಬರುತ್ತಿರುವ ಜಾತ್ರೆ–ಉತ್ಸವಗಳಿಗೆ ಭೇಟಿ ನೀಡಿ ಛಾಯಾಚಿತ್ರ ಸಂಗ್ರಹಿಸಲಾಗುವುದು.

ಹೀಗೆ ಪಟ್ಟಣದ ಪರಿಸರದ ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ, ಪುರಾತತ್ವೀಯ ಸಾಂಸ್ಕೃತಿಕ ಅಂಶಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿಕೊಳ್ಳಲಾಗುವುದು. ಕ್ಷೇತ್ರಕಾರ್ಯದ ಮಾಹಿತಿಯಿಂದ ಸಂಶೋಧನೆಗೆ ಪ್ರಾಥಮಿಕ ಆಕರ ಸಂಗ್ರಹ ಮಾಡಿ ಇದಕ್ಕೆ ಪೂರಕವಾಗಿ, ಆನುಷಂಗಿಕ ಆಕರಗಳನ್ನು ಕರ್ನಾಟಕದ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ಭೇಟಿ ನೀಡಿ ಸಂಗ್ರಹಿಸಿ, ಜೊತೆಗೆ ವಿದ್ವಾಂಸರುಗಳನ್ನು ಭೇಟಿ ಮಾಡಿ ಮಾಹಿತಿ ಪಡೆದು ಪ್ರಾಥಮಿಕ ಹಾಗೂ ಆನುಷಂಗಿಕ ದತ್ತಾಂಶಗಳನ್ನು ವಿಮರ್ಶೆಗೆ ಒಳಪಡಿಸಿ ವಿಶ್ಲೇಷಿಸಿ ಪ್ರಬಂಧವನ್ನು ರಚಿಸಲಾಗುವುದು.

ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಹಾಗೂ ಸಮೀಕ್ಷೆಗಳನ್ನು ಒಳಗೊಂಡಿದ್ದು ಅಧ್ಯಯನದ ಒಟ್ಟು ರೂಪರೇಷೆಯನ್ನು ಕುರಿತು ಚರ್ಚಿಸುತ್ತದೆ.

ಎರಡನೆಯ ಅಧ್ಯಾಯವು ಭೌಗೋಳಿಕ ಹಾಗೂ ಐತಿಹಾಸಿಕ ಸ್ಥಳನಾಮಗಳ ಹಿನ್ನೆಲೆಯನ್ನು ಒಳಗೊಂಡಿದೆ. ಭೌಗೋಳಿಕ ಹಿನ್ನೆಲೆಯಲ್ಲಿ ಹಿರಿಯೂರು ತಾಲೂಕಿನ ಭೌಗೋಳಿಕ ಸನ್ನಿವೇಶಗಳು ಚಾರಿತ್ರಿಕ ಚರಿತ್ರೆಯ ನಿರ್ಮಾಣದಲ್ಲಿ ಹೇಗೆ ಪೂರಕವಾಗಿವೆ ಎಂಬ ಅಂಶಗಳನ್ನು ಕುರಿತು ಈ ಅಧ್ಯಯನದಲ್ಲಿ ಸವಿವರವಾಗಿ ಚರ್ಚಿಸಲಾಗಿದೆ. ಈ ಪಟ್ಟಣದ ಪರಿಸರದಲ್ಲಿ ಕಂಡುಬರುವ

ಹೊಯ್ಸಳರು, ವಿಜಯನಗರ ಅರಸರು, ಚಿತ್ರದುರ್ಗ ಪಾಳೆಗಾರರು ಹಾಗೂ ಮೈಸೂರು ಒಡೆಯರು ಮತ್ತು ಹರತಿ ಪಾಳೆಗಾರರು ಆಳ್ವಿಕೆ ಒಳಗೊಂಡಂತೆ ಹಲವು ಚಾರಿತ್ರಿಕ ಕುರುಹುಗಳನ್ನು ಚಾರಿತ್ರಿಕ ಹಿನ್ನೆಲೆ ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ಚರ್ಚಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ದಾಖಲೆ, ಶಾಸನ ಹಾಗೂ ಸಮಕಾಲೀನ ಸಾಹಿತ್ಯಕ ಆಕರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಮೂರನೆಯ ಅಧ್ಯಾಯವು ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳ ಕುರಿತಾಗಿದ್ದು, ವಾಸ್ತುಶಿಲ್ಪ ಭಾಗದಲ್ಲಿ ದೇವಾಲಯದ ಉಗಮ, ವಿಕಾಸದ ಬಗ್ಗೆ ಮತ್ತು ಇಲ್ಲಿಯ ಶೈವ, ವೈಷ್ಣವ, ಶಾಕ್ತ ಹಾಗೂ ಜೈನ ಬಸದಿ ದೇವಾಲಯಗಳು ಎಂದು ವಿಂಗಡಿಸಿಕೊಂಡು ವಿಶ್ಲೇಷಿಸಲಾಗುವುದು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಶೈವ ದೇವಾಲಯಗಳು ಬೆಳವಣಿಗೆಯ ಪರಂಪರೆಯನ್ನು ಹೊಯ್ಸಳರ ಕಾಲಘಟ್ಟದಿಂದ ಕ್ರಿ. ಶ. ೧೭ನೇ ಶತಮಾನದಲ್ಲಿ ಈ ಭಾಗದಲ್ಲಿ ಆಳ್ವಿಕೆ ಮಾಡಿದ ಪಾಳೆಗಾರರ ಅವಧಿಯಲ್ಲಿಯೂ ಈ ಶೈವ ದೇವಾಲಯಗಳನ್ನು ನಿರ್ಮಿಸಿ ಪೋಷಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಇದೇ ಪ್ರದೇಶದಲ್ಲಿ ವೈಷ್ಣವ ದೇವಾಲಯಗಳ ನಿರ್ಮಾಣವನ್ನು ಕ್ರಿ. ಶ. ೯ನೇ ಶತಮಾನದಿಂದ ಕ್ರಿ.ಶ. ೨೦ನೇ ಶತಮಾನದವರೆಗೆ ಅಂದರೆ ಹೊಯ್ಸಳರ ಕಾಲಮಾನದಿಂದ ಮೈಸೂರು ಒಡೆಯರ ಕಾಲಮಾನದವರೆಗೆ ಕಾಣಬಹುದಾಗಿದೆ. ಪಟ್ಟಣದಲ್ಲಿ ಪ್ರಮುಖವಾಗಿ ಶ್ರೀತೇರುಮಲ್ಲೇಶ್ವರ, ಶ್ರೀವೀರಭದ್ರಸ್ವಾಮಿ, ಪಟ್ಟಾಭಿರಾಮ, ಉದ್ಭವ ದುರ್ಗಾಂಬಿಕಾ ಪರಮೇಶ್ವರಿ, ಚಿಟಕ ಮಲಪನಗುಡಿ, ಭಗವತಿ ಅಮ್ಮನಗುಡಿ, ರೇವಣಸಿದ್ಧೇಶ್ವರ, ವಸುರಾಂಬ, ಬೀರಲಿಂಗೇಶ್ವರ, ಬಂದನಮ್ಮ, ಕನ್ನಿಕಾಪರಮೇಶ್ವರಿ, ಕೊಲ್ಲಾಪುರದಮ್ಮ, ಬನಶಂಕರಿ, ಮೈಲಾರಗುಡಿ, ಮೋಕ್ಷದ ರಾಣಿ (ಚರ್ಚ್) ಆಲಯ ಮತ್ತು ಆಂಜನೇಯ ದೇವಾಲಯಗಳು ಇಲ್ಲಿ ಕಂಡುಬರುತ್ತವೆ. ಇವುಗಳನ್ನು ದೇವಾಲಯ ವಾಸ್ತು ಲಕ್ಷಣಗಳ ಹಿನ್ನೆಲೆಯಲ್ಲಿ ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ಹಾಗೂ ಈ ಭಾಗದಲ್ಲಿ ಕಂಡುಬರುವ ಶೈವ, ವೈಷ್ಣವ, ಶಾಕ್ತ, ಜೈನ ಮೂರ್ತಿ ಶಿಲ್ಪಗಳನ್ನು ಅವುಗಳಲ್ಲಿನ ಭಿನ್ನತೆ ಮತ್ತು ಲಕ್ಷಣಗಳನ್ನು ಇದೇ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುವುದು.

ನಾಲ್ಕನೆಯ ಅಧ್ಯಾಯವು ಶಾಸನಗಳು ಮತ್ತು ಸ್ಮಾರಕ ಶಿಲ್ಪಗಳ ಕುರಿತು ಅಧ್ಯಯನ ಮಾಡುವುದಾಗಿದೆ. ಪಟ್ಟಣದಲ್ಲಿ ಇದುವರೆಗೆ ಪತ್ತೆಹಚ್ಚಲಾದ ಶಾಸನಗಳು ಮತ್ತು ಅಧ್ಯಯನದಲ್ಲಿ ಕಂಡುಬರುವ ನೂತನ ಶಾಸನಗಳನ್ನು ಗುರುತಿಸಿ ಆ ಶಾಸನಗಳ ಪಾಠದ ಸಹಾಯದಿಂದ ಅವುಗಳ ಸಾರಂಶವನ್ನು ವಿಶ್ಲೇಷಿಸಲಾಗುವುದು. ಹಾಗೂ ಶಾಸನ ಪ್ರಕಾರಗಳಲ್ಲಿ ಒಂದಾದ ಶಾಸನ ಸ್ಮಾರಕ ಶಿಲ್ಪಗಳನ್ನು ಅವುಗಳ ಪ್ರಕಾರಗಳಾದ ವೀರಗಲ್ಲು, ಮಾಸ್ತಿಗಲ್ಲು, ವೀರಮಾಸ್ತಿಗಲ್ಲು ಮತ್ತು ನಿಷಿಧಿಗಲ್ಲುಗಳನ್ನು ಅಧ್ಯಯನ ಕ್ಷೇತ್ರದಲ್ಲಿ ಕಂಡುಬರುವ ಸ್ಮಾರಕ ಶಿಲ್ಪಗಳ ಸಹಾಯದಿಂದ ವಿವರಿಸಲಾಗುವುದು.

ಐದನೇ ಅಧ್ಯಾಯವು ಈ ಅಧ್ಯಾಯವು ನಂಬಿಕೆ ಮತ್ತು ಆಚರಣೆಗೆ ಸಂಬಂಧಿಸಿದಾಗಿದ್ದು, ಅಧ್ಯಯನ ಪ್ರದೇಶದಲ್ಲಿ ಪ್ರಸ್ತುತ ಆಚರಣೆಯಲ್ಲಿರುವ ಹಬ್ಬ ಹರಿದಿನ ಜಾತ್ರೆ ಉತ್ಸವಗಳನ್ನು, ಕುರಿತು ಶಾಸನಗಳು, ಸಾಹಿತ್ಯ ಆಕರಗಳು ಹಾಗೂ ಸ್ಥಳೀಯ ಜನರ ಅಭಿಪ್ರಾಯಗಳ ಆಧಾರದಿಂದ ದಾಖಲಿಸಿಕೊಂಡು ನಂಬಿಕೆ ಆಚರಣೆಗಳನ್ನು ಕುರಿತಂತೆ ವಿಶ್ಲೇಷಿಸಲಾಗುವುದು.

ಆರನೇ ಅಧ್ಯಾಯವು ಸಮಾರೋಪವಾಗಿದ್ದು ಇದು ಇಡೀ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟಾರೆ ಸಂಶೋಧನೆಯ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಕೃತಿ, ಲೇಖನ, ಶಾಸನ ಸಂಪುಟ, ಅಪ್ರಕಟಿತ ಸಂಶೋಧನ, ಪ್ರೌಢ ಪ್ರಬಂಧ ಮುಂತಾದ ವಿವರಗಳನ್ನು ಗ್ರಂಥಋಣದಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಛಾಯಾಚಿತ್ರಗಳು, ಅಗತ್ಯ ನಕ್ಷೆಗಳನ್ನು ಅನುಬಂಧದಲ್ಲಿ ಅಳವಡಿಸಲಾಗಿದೆ.

ಅಧ್ಯಯನಗಳ ಸಮೀಕ್ಷೆ

ಈ ಭಾಗದಲ್ಲಿ ದೊರೆತ ಆಧಾರಗಳು ಎಂದರೆ ದೇವಾಲಯಗಳು ಹಾಗೂ ಶಾಸನಗಳು. ಹಾಗಾಗಿ ಇಡೀ ಅಧ್ಯಯನವು ಕ್ಷೇತ್ರಕಾರ್ಯವನ್ನು ಆಧರಿಸಿ ಸಂಗ್ರಹಗೊಂಡಿದೆ. ಈ ಭಾಗದ ಶಾಸನಗಳು ಪ್ರಕಟಗೊಂಡಿರುವ ಎಫಿಗ್ರಾಫಿಯ ಕರ್ನಾಟಿಕ (ಹಳೆಯ) ಸಂಪುಟ ೧೧, ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್ (೧೯೨೯-೧೯೪೬), ಚಿತ್ರದುರ್ಗ ಜಿಲ್ಲಾ ಗ್ಯಾಜಿಟಿಯರ್ ಹಾಗೂ ಚಿತ್ರದುರ್ಗ ಜಿಲ್ಲಾ ದರ್ಶಿನಿ ಮತ್ತು ಹಿರಿಯೂರು ತಾಲೂಕು ದರ್ಶನವನ್ನು ಪ್ರಮುಖ ಆಕರಗಳನ್ನಾಗಿ ಬಳಸಲಾಗಿದೆ.

ಹಿರಿಯೂರು ಪಟ್ಟಣದಲ್ಲಿ ಈವರೆಗೆ ಕೆಲವು ವಿದ್ವಾಂಸರು ಪುರಾತತ್ವ ಸಂಶೋಧನ ಕಾರ್ಯಗಳನ್ನು ಮಾಡಿದ್ದಾರೆ. ಹಿರಿಯೂರು ತಾಲೂಕಿನ ಪ್ರಾಚೀನತೆ, ರಾಜಕೀಯ ಚರಿತ್ರೆ, ಐತಿಹಾಸಿಕ ಸ್ಥಳಗಳ ಪರಿಚಯ ಮತ್ತು ಜನಪದ ಸಾಹಿತ್ಯ ಮುಂತಾದ ವಿಷಯಗಳನ್ನು ಕುರಿತಂತೆ ಕೆಲವು ಅಧ್ಯಯನಗಳು ನಡೆದಿದ್ದು ಕೆಲವು ಬಿಡಿ ಲೇಖನ, ಪರಿಚಯ ಕೈಪಿಡಿ, ಅರ್ಬನ್ ಬ್ಯಾಂಕಿನ ಸ್ಮರಣ ಸಂಚಿಕೆಗಳು ಪ್ರಕಟಗೊಂಡಿವೆ. ಹಿರಿಯೂರು ಪಟ್ಟಣದ ರಾಜಕೀಯ ಚರಿತ್ರೆಗೆ ಸಂಬಂಧಿಸಿದಂತೆ ಎಂ.ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ ಅವರು 'ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು' ಸಂಪಾದಿತ ಕೃತಿಯಲ್ಲಿ ಚಾರಿತ್ರಿಕ ಸಂಗತಿಗಳನ್ನು ತಿಳಿಯಲು ಸಹಾಯಕವಾಗಿದೆ. ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿರುವ 'ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ-೧'ರಲ್ಲಿ ಸ್ಥಳನಾಮದ ರೂಪಾಂತರವನ್ನು ನೀಡುತ್ತದೆ. ರಾಜಶೇಖರಪ್ಪ ಅವರ ಕೃತಿಗಳಾದ 'ದುರ್ಗಶೋಧನ ಇತಿಹಾಸ ಕಥನ'ಗಳಲ್ಲಿ ಪಟ್ಟಣದಲ್ಲಿರುವ ದೇವಾಲಯಗಳು ಹಾಗೂ ಸ್ಥಳೀಯವಾಗಿ ದೊರೆತಿರುವ ಶಾಸನಗಳನ್ನು

ಕುರಿತು ದಾಖಲಿಸಿದ್ದಾರೆ. ಕೆ.ಬಿ. ಶಿವತಾರಕ್ ಅವರು 'ಕರ್ನಾಟಕ ಪುರಾತತ್ವ ನೆಲೆಗಳ ಶೋಧ' ಎಂಬ ಕೃತಿಯಲ್ಲಿ ಹಿರಿಯೂರು ತಾಲೂಕಿನ ನೆಲೆಯ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಬಿ. ಸುರೇಶ್ ಅವರು 'ಚಿತ್ರದುರ್ಗ ದಾವಣಗೆರೆ ಜಿಲ್ಲೆಯ ದೇವಾಲಯ' ಎಂಬ ಕೃತಿಯಲ್ಲಿ ಹಿರಿಯೂರು ದೇವಾಲಯದ ಬಗ್ಗೆ ತಿಳಿಸಿದ್ದಾರೆ. ಟಿ. ಗಿರಿಜ ಅವರು 'ಚಿತ್ರದುರ್ಗ ಜಿಲ್ಲಾದರ್ಶಿನಿ' ಕೃತಿಯಲ್ಲಿ ಹಿರಿಯೂರು ತಾಲೂಕಿನ ಗ್ರಾಮವಾರು ಮಾಹಿತಿಯನ್ನು ನೀಡಿದ್ದಾರೆ.

ಎಂ.ವಿ. ವಸು ಅವರು 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಎಂಬ ಸಂಪಾದಿತ ಕೃತಿಯು ಹಿರಿಯೂರು ಪಟ್ಟಣದಲ್ಲಿ ಆಳ್ವಿಕೆ ಮಾಡಿದ ಅರಸರುಗಳ ಬಗ್ಗೆ ಪೂರಕ ಮಾಹಿತಿ ನೀಡುತ್ತದೆ. ಆರ್.ಗೋಪಾಲ್ ಅವರ 'ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬ ಸಂಪಾದಿತ ಕೃತಿಯಲ್ಲಿ ಹಿರಿಯೂರು ಪಟ್ಟಣದ ಪ್ರಾಗೈತಿಹಾಸಿಕ ಸಂಬಂಧಿಸಿದ ಲೇಖನಗಳನ್ನು ಒಳಗೊಂಡಿದೆ. ಕೂ.ಸ. ಅಪರ್ಣ ಅವರು 'ದೇವಾಲಯ ಮತ್ತು ವಾಸ್ತುಶಿಲ್ಪ' ಎಂಬ ತಮ್ಮ ಕೃತಿಯಲ್ಲಿ ಹಿರಿಯೂರು ಪಟ್ಟಣದ ಕೆಲವು ದೇವಾಲಯಗಳನ್ನು ಉಲ್ಲೇಖಿಸಿದ್ದಾರೆ. ಇದು ಅಧ್ಯಯನ ಪ್ರದೇಶದ ದೇವಾಲಯಗಳ ವಿಶ್ಲೇಷಣೆಯ ದೃಷ್ಟಿಯಿಂದ ಪೂರಕವಾಗಿದೆ. ಆರ್. ಗೋಪಾಲ್ ಅವರ ಸಂಪಾದಿತ 'ಚಿತ್ರದುರ್ಗ ಇತಿಹಾಸ ಮತ್ತು ಪುರಾತತ್ವ' ಕೃತಿಯಲ್ಲಿ, ವಿ. ಅನುರಾಧ ಅವರ 'ಮೂರ್ತಿಶಿಲ್ಪ ಮತ್ತು ಶಿಲ್ಪಕಲೆ' ಎಂಬ ಲೇಖನವು ಹಿರಿಯೂರು ಶ್ರೀತೇರುಮಲೇಶ್ವರ ದೇವಾಲಯದ ಭಿತ್ತಿಯ ಮೇಲಿರುವ ಶಿಲ್ಪಗಳ ರಚನೆ ಮತ್ತು ಲಕ್ಷಣಗಳನ್ನು ಕುರಿತು ವಿಶ್ಲೇಷಿಸಿದ್ದಾರೆ.

ಲಕ್ಷ್ಮಣ್ ತೆಲಗಾವಿಯವರ ಸಂಪಾದಕತ್ವದ 'ಹರತಿಸಿರಿ' ಎಂಬ ಕೃತಿಯಲ್ಲಿ ಹರ್ತಿಕೋಟೆ ಪಾಳೆಗಾರರ ಆಳ್ವಿಕೆಯನ್ನು ಸಮಗ್ರವಾಗಿ ಚರ್ಚಿಸಿದ್ದಾರೆ ಇದು ಹಿರಿಯೂರು ಪಟ್ಟಣದ ಪಾಳೆಗಾರರ ಚರಿತ್ರೆಯನ್ನು ತಿಳಿಯಲು ಮಹತ್ವದ ಗ್ರಂಥವಾಗಿದೆ. ಇವರ ಮತ್ತೊಂದು ಸಂಪಾದಿತ ಕೃತಿಯಾದ 'ದುರ್ಗಸಿರಿ' ಎಂಬ ಬೃಹತ್ ಕೃತಿಯಲ್ಲಿ ಚಿತ್ರದುರ್ಗವನ್ನಾಳಿದ ಪಾಳೆಗಾರರ ಆಳ್ವಿಕೆ ಸಮಗ್ರ ಮಾಹಿತಿಯನ್ನು ಒಳಗೊಂಡಿದೆ.

ಈ ಕೃತಿಯು ಹಿರಿಯೂರು ಪಟ್ಟಣ ಪ್ರದೇಶದ ಸ್ಥಳ, ಪುರಾಣ, ಐತಿಹ್ಯ ಚಾರಿತ್ರಿಕ ಅಂಶಗಳನ್ನು ತಿಳಿಯಲು ಪೂರಕ ಗ್ರಂಥವಾಗಿದೆ. ಸಿ.ಎಸ್. ಬಸವಲಿಂಗಪ್ಪ ಅವರ 'ಚಿತ್ರದುರ್ಗ ಜಿಲ್ಲೆಯ ನೊಳಂಬರ ಆಳ್ವಿಕೆ' ಎಂಬ ಗ್ರಂಥ ಅಥವಾ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿನ ನೊಳಂಬರ ಆಳ್ವಿಕೆಯನ್ನು ವಿಸ್ತೃತವಾಗಿ ವಿವರಿಸಿದ್ದಾರೆ.

ಕಾಂತರಾಜ್ ಹೆಚ್. ದೊಡ್ಮನೆಯವರು ಹಿರಿಯೂರು ತಾಲೂಕಿನ ಶಾಸನೋಕ್ತ ಸ್ಥಳನಾಮಗಳ ಬಗ್ಗೆ ಇತಿಹಾಸ ದರ್ಶನ ಸಂಪುಟ ೩೦ರಲ್ಲಿ, ಐಮಂಗಳ, ಹೆಮದಳ, ಉಪ್ಪಾರಹಳ್ಳಿ, ಶಿಡ್ಲಯ್ಯನಕೋಟೆ, ತವಂದಿ ಮತ್ತು ಅಬ್ಬಿನ ಹೊಳೆ ಗ್ರಾಮಗಳ ಕುರಿತು

ಲೇಖನಗಳಲ್ಲಿ ವಿವರಿಸಿದ್ದಾರೆ. ಬಿ. ಕೃಷ್ಣ ಅವರು ಹಿರಿಯೂರು ಪ್ರದೇಶದ ಕೆಲವು ವಿಶಿಷ್ಟ ವೀರಗಲ್ಲುಗಳ ಬಗ್ಗೆ ಇತಿಹಾಸ ದರ್ಶನ ಸಂಪುಟ ೩೦ರಲ್ಲಿ ತಮ್ಮ ಲೇಖನದ ಮೂಲಕ ಸ್ಪಷ್ಟಪಡಿಸಿದ್ದಾರೆ ಹಾಗೂ ಇತಿಹಾಸದರ್ಶನ ಸಂಪುಟ ೨೭ರಲ್ಲಿ ಬಿ. ಸುರೇಶ್ ಅವರು ಹಿರಿಯೂರು ತಾಲೂಕಿನ ಸ್ಮಾರಕ ಶಿಲ್ಪಗಳ ಬಗ್ಗೆ ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. ಇಂತಹ ಬಿಡಿ ಬಿಡಿ ಲೇಖನಗಳು ಇದುವರೆಗಿನ ಅಧ್ಯಯನಗಳನ್ನು ಗಮನಿಸಿದರೆ ಹಿರಿಯೂರು ತಾಲೂಕಿನ ರಾಜಕೀಯ ಚರಿತ್ರೆ, ಜನಪದ ಆಚರಣೆ, ಐತಿಹಾಸಿಕ ಸ್ಥಳದ ಪರಿಚಯಾತ್ಮಕ ಅಧ್ಯಯನಗಳು ನಡೆದಿವೆಯೇ ಹೊರತು ಇಡೀ ಹಿರಿಯೂರು ಪಟ್ಟಣ ಪರಿಸರದ ವ್ಯವಸ್ಥಿತವಾದ ಚಾರಿತ್ರಿಕ ಅಧ್ಯಯನ ನಡೆದಿಲ್ಲವೆಂದು ಹೇಳಬಹುದು.

ಆದುದರಿಂದ ಪ್ರಸ್ತುತ ಅಧ್ಯಯನದ ಮುಖೇನ ಹಿರಿಯೂರು ಪಟ್ಟಣದ ಚಾರಿತ್ರಿಕ ಸಾಂಸ್ಕೃತಿಕ ಸಂಗತಿಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗುವುದು.

❑❑❑

ಅಧ್ಯಾಯ ಎರಡು

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧. ಭೌಗೋಳಿಕ ಪರಿಸರ

೨.೨. ಐತಿಹ್ಯ, ಸ್ಥಳನಾಮ ಮತ್ತು ಸ್ಥಳ ಪುರಾಣ

೨.೩. ಪ್ರಾಗಿತಿಹಾಸ

೨.೪. ರಾಜಕೀಯ ಇತಿಹಾಸ

ಅಧ್ಯಾಯ ಎರಡು

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧ ಭೌಗೋಳಿಕತೆ ಮತ್ತು ಇತಿಹಾಸ

ಮನುಷ್ಯ ಸೃಷ್ಟಿಯ ಅತ್ಯಂತ ಬುದ್ಧಿವಂತ ಪ್ರಾಣಿ. ಜೊತೆಗೆ ಪೃಥ್ವಿಗೆ ಸಂಬಂಧಿಸಿದ ಎಲ್ಲಾ ಸಂಗತಿಗಳ ಜ್ಞಾನ ಪಡೆಯಲು ಮತ್ತು ಅವುಗಳು ರಹಸ್ಯ ತಿಳಿದುಕೊಳ್ಳಲು ಸದಾ ಕಾಲ ಪ್ರಯತ್ನಿಸಿರುತ್ತಾನೆ. ಪರಿಸರವು ಆತನ ಚಟುವಟಿಕೆಗಳನ್ನಷ್ಟೆ ಅಲ್ಲದೆ, ಸ್ವಭಾವ ಮತ್ತು ರೂಢಿಗಳ ಮೇಲೆಯೂ ಪ್ರಭಾವ ಬೀರುತ್ತದೆ. ಭೂಗೋಳಶಾಸ್ತ್ರವು ಭೂಮಿಯ ಮೇಲೆ ಹರಡಿರುವ ನಿಸರ್ಗ ನಿರ್ಮಿತವಾದ ಬೆಟ್ಟಗುಡ್ಡ, ಗವಿ, ಖನಿಜ, ನದಿ, ಹಳ್ಳ, ಕಾಡು, ಫಲವತ್ತಾದ ಮಣ್ಣು, ಪ್ರಾಣಿ ಮತ್ತು ಮನುಷ್ಯ ಸಂಕುಲ ಮೊದಲಾದ ವಸ್ತುಗಳನ್ನು ವಿವರಿಸುತ್ತದೆ. ಹಾಗಾಗಿಯೇ ಜರ್ಮನ್ ತತ್ವಜ್ಞಾನಿ ಮತ್ತು ಖಗೋಳಶಾಸ್ತ್ರಜ್ಞ ಇಮ್ಯಾನುಯಲ್ ಕಾಂಟ್ ಭೂಗೋಳಶಾಸ್ತ್ರವನ್ನು "ಪೃಥ್ವಿಯ ಮೇಲೆ ಸಂಭವಿಸುವ ಘಟನೆಗಳ ವರದಿ" ಎಂದು ಹೇಳಿದ್ದಾನೆ.[೧] ಯಾವುದೇ ಒಂದು ಪ್ರದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಬೌದ್ಧಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಹಿನ್ನೆಡೆ, ಮುನ್ನಡೆಗೆ ಭೌಗೋಳಿಕ ಪರಿಸರವೇ ಪ್ರಧಾನವಾಗಿದೆ. ಭೌಗೋಳಿಕ ಪರಿಸರದ ಅಧ್ಯಯನ ಆ ಭಾಗದ ವಾಸ್ತವ ಸ್ಥಿತಿಯನ್ನು ತಿಳಿಯುವ ಪ್ರಮುಖ ಆಕರವಾಗಿರುತ್ತದೆ.

ಭೌಗೋಳಿಕ ಹಿನ್ನೆಲೆ

ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಹಿರಿಯೂರು ತಾಲೂಕು ಒಂದಾಗಿದ್ದು, ತಾಲೂಕಿನ ಆಡಳಿತ ಕೇಂದ್ರವಾಗಿ, ಚಿತ್ರದುರ್ಗ ಉಪವಿಭಾಗಕ್ಕೆ ಸೇರಿದ್ದು, ಉತ್ತರದಲ್ಲಿ ಚಳ್ಳಕೆರೆ, ದಕ್ಷಿಣದಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ವಾಯವ್ಯದಲ್ಲಿ ಚಿತ್ರದುರ್ಗ ತಾಲೂಕು ಪಶ್ಚಿಮದಲ್ಲಿ ಹೊಸದುರ್ಗ-ಹೊಳಲ್ಕೆರೆ ತಾಲೂಕುಗಳು ಈಶಾನ್ಯದಲ್ಲಿ ಆಂಧ್ರ ಪೂರ್ವದಲ್ಲಿ ಶಿರಾ ತಾಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ಈ ತಾಲೂಕಿನ ಜನಸಂಖ್ಯೆ ೧೯೮೧ರ ಜನಗಣತಿಯ ಪ್ರಕಾರ ೧೯,೬೨೩ ಸಾವಿರ ಇದ್ದು ಈಗ ೨೦೦೧ರ ಜನಗಣತಿಯ ಪ್ರಕಾರ ಹಿರಿಯೂರು ತಾಲೂಕಿನ ಒಟ್ಟು ಜನಸಂಖ್ಯೆ ೨,೬೪,೧೭೯

ಇದ್ದು, ೨೦೧೧ರ ಜನಗಣತಿಯ ಪ್ರಕಾರ ತಾಲೂಕಿನ ಒಟ್ಟು ಜನಸಂಖ್ಯೆ ೨,೮೬,೪೯೪ರಷ್ಟಿದೆ.[೨] ಅಕ್ಷಾಂಶ ೧೪°.೧೪' ಮತ್ತು ರೇಖಾಂಶ ೭೬°.೨೬' ಡಿಗ್ರಿ ಇದ್ದು ಹಾಗೂ ಹಿರಿಯೂರು ತಾಲೂಕು ಸಮುದ್ರ ಮಟ್ಟದಿಂದ ೭೩೩.೦೪ ಮೀಟರ್ ಎತ್ತರ ಇದೆ.[೩]

ಜವಗೊಂಡನಹಳ್ಳಿ, ಧರ್ಮಪುರ, ಹಿರಿಯೂರು, ಐಮಂಗಲ ಈ ತಾಲೂಕಿನ ನಾಲ್ಕು ಹೋಬಳಿಗಳಾಗಿದ್ದು, ೧೫೭ ಹಳ್ಳಿಗಳಿಂದ ಕೂಡಿದೆ. ತಾಲೂಕಿನ ವಿಸ್ತೀರ್ಣ ೧.೭೦೩.೯ ಚದುರ ಕಿಲೋಮೀಟರ್. ಸರಾಸರಿ ಮಳೆ ೪೭೦.೩೧ ಮಿಲಿಮೀಟರ್. ಉತ್ತಮ ಹವಾಗುಣವಿದೆ.[೪] ಮಾರಿಕಣಿವೆ ಬೆಟ್ಟದ ಸಾಲುಗಳು ಹಿರಿಯೂರು ತಾಲೂಕಿನ ಪಶ್ಚಿಮದಿಂದ ಚಿತ್ರದುರ್ಗದವರೆಗೂ ಹಬ್ಬಿ ಹರಡಿವೆ. ಹಿಂಡಸ್ಕಟ್ಟೆ ಸಾಲಿನ ಹಾಗೂ ಉತ್ತರ ಭಾಗದಲ್ಲಿರುವ ಬೆಟ್ಟಗಳು ಎತ್ತರವಾಗಿದ್ದು ಪ್ರಮುಖವೆನ್ನಿಸಿವೆ.

ವೇದಾವತಿ ನದಿ ಮುಖ್ಯ ನದಿಯಾಗಿ ತಾಲೂಕಿನ ಪಶ್ಚಿಮ ಭಾಗದಿಂದ ಮಧ್ಯೆ ಈಶಾನ್ಯಾಭಿಮುಖವಾಗಿ, ಪೂರ್ವಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಳ್ಳಕೆರೆ ತಾಲೂಕನ್ನು ಪ್ರವೇಶಿಸುತ್ತದೆ. ಈ ನದಿಗೆ ಮಾರಿಕಣಿವೆಯ ಬಳಿ ಅಣೆಕಟ್ಟೆ ಹಾಕಿ ವಾಣಿವಿಲಾಸ ಸಾಗರವೆಂಬ ಜಲಾಶಯ ನಿರ್ಮಿಸಿದ್ದಾರೆ. ಇದರಿಂದ ಹಿರಿಯೂರು ತಾಲೂಕಿನ ನೀರಾವರಿ ವ್ಯವಸಾಯಕ್ಕೆ ತುಂಬಾ ಅನುಕೂಲವಾಗಿದೆ. ತೊರೆ–ಕೆರೆ–ಬಾವಿ ವಾಣಿವಿಲಾಸ ಸಾಗರದ ಎಡ–ಬಲ ನಾಲೆಗಳಿಂದ, ಗಾಯತ್ರಿ ಜಲಾಶಯದಿಂದ ವ್ಯವಸಾಯಕ್ಕೆ ಸಾಕಷ್ಟು ನೀರು ದೊರೆಯುತ್ತದೆ. ಪಶುಪಾಲನೆ ಮತ್ತು ಮತ್ಸ್ಯೋದ್ಯಮಕ್ಕೆ ಅನುಕೂಲವಿದೆ. ತೆಂಗು ವಿಶೇಷ ಬೆಳೆಯಾದ್ದರಿಂದ ಈ ತಾಲೂಕನ್ನು ಕಲ್ಪವೃಕ್ಷ ತಾಲೂಕೆಂದು ಕರೆಯಲ್ಪಟ್ಟಿದೆ.

ಮಳೆ ಮತ್ತು ಹವಾಮಾನ

ಹಿರಿಯೂರು ತಾಲೂಕಿನ ಮಳೆ ಪ್ರಮಾಣ ತುಂಬಾ ಕಡಿಮೆ. ಬಯಲುಸೀಮೆಯ ಪ್ರದೇಶವಾಗಿದ್ದು, ಇಲ್ಲಿನ ವಾಡಿಕೆಯಂತೆ ಮಳೆ ಪ್ರಮಾಣ ೫೩೩.೬ ಮಿಲಿಮೀಟರ್.[೫] ವಾಸ್ತವಿಕ ಮಳೆಯ ಪ್ರಮಾಣ ೪೮೪.೬ ಮಿ.ಮೀ. ಇಲ್ಲಿ ಬೇಸಿಗೆ ಕಾಲವು ಜನವರಿ ಅಂತ್ಯದಿಂದ ಫೆಬ್ರವರಿ, ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳ ಕೊನೆಯವರೆಗೂ ಇರುತ್ತದೆ. ಈ ಅವಧಿಯಲ್ಲಿ ೩೫° ಡಿಗ್ರಿ ಸೆಂಟಿಗ್ರೇಡ್‌ನಿಂದ ೪೦° ಡಿಗ್ರಿ ಸೆಂಟಿಗ್ರೇಡ್‌ನವರೆಗೂ ಉಷ್ಣಾಂಶವು ಅತೀ ಹೆಚ್ಚಾಗಿರುತ್ತದೆ.[೬] ಬಿಸಿಲಿನ ಪ್ರಭಾವದಿಂದ ತುಂಬಾ ಸೆಕೆ ಇರುತ್ತದೆ. ಈ ತಾಲೂಕಿನಲ್ಲಿ ವೃಷ್ಟಿಮಾಪಕ ಕೇಂದ್ರಗಳು ಕೆಲಸ ಮಾಡುತ್ತವೆ. ಇಲ್ಲಿನ ಹವಾಗುಣ ಉತ್ತಮವಾಗಿರುತ್ತದೆ.

ಬೆಟ್ಟಗುಡ್ಡಗಳು

ಹಿರಿಯೂರು ತಾಲೂಕಿನ ಪಶ್ಚಿಮದಲ್ಲಿ ಮಾರಿಕಣಿವೆ ಬೆಟ್ಟ ಸಾಲುಗಳಿವೆ. ಇವು ಉತ್ತರದ ಕಡೆಗೆ ಚಿತ್ರದುರ್ಗದವರೆಗೂ ಹಬ್ಬಿ ಹರಡಿವೆ. ಹಿಂಡಸ್ಕಟ್ಟೆ ಸಾಲಿನ ಬೆಟ್ಟಗಳು ಹಾಗೂ ಉತ್ತರ ಭಾಗದಲ್ಲಿರುವ ಬೆಟ್ಟಗಳು ಹೆಚ್ಚು ಎತ್ತರವಾಗಿದ್ದು ಪ್ರಮುಖವೆನಿಸಿವೆ.

ಖನಿಜ ಸಂಪತ್ತು

ಹಿಂದಿನಿಂದಲೂ ಈ ತಾಲೂಕಿನಲ್ಲಿ ಗುಡ್ಡದ ಬಳಿ ಕಲ್ನಾರು ಗೌನಹಳ್ಳಿ ಬಳಿ ಕಾಲ್ಸೈಟ್ ದೊರೆಯುತ್ತದೆ. ಅಲ್ಪ ಸ್ವಲ್ಪ ಕಬ್ಬಿಣದ ಅದಿರು ದೊರೆಯುತ್ತದೆ. ಜವಗೊಂಡನಹಳ್ಳಿ, ಆನೆಸಿದ್ರಿ ಮತ್ತು ದಿಂಡಾವರಗಳಲ್ಲಿ ಪ್ರಾಚೀನ ಕಾಲದಲ್ಲಿ ಚಿನ್ನ ತೆಗೆಯುತ್ತಿದ್ದ ಬಗ್ಗೆ ಸೂಚನೆಗಳಿವೆ.[೭] ನಿಶಾನಿ ಗುಡ್ಡದ ಬಳಿ ಸೀಸದ ಅದಿರು ಇದೆ. ಖನಿಜ ಸಂಪತ್ತು ಈ ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಲಾಭ ತರುವಂತಹ ಆರ್ಥಿಕ ಸಂಪತ್ತಾಗಿ ದೊರೆತಿಲ್ಲ. ಆದರೆ ಇತ್ತೀಚೆಗೆ ಕರಿಯಾಲದ ಹತ್ತಿರ ಬಂಗಾರ ಇರುವುದು ಕಂಡುಬಂದಿದೆ.

೨.೨ ಐತಿಹ್ಯ, ಸ್ಥಳನಾಮ ಮತ್ತು ಸ್ಥಳ ಪುರಾಣ

ಅಲೆಮಾರಿ ಜೀವನದಿಂದ ಆರಂಭವಾದ ಮಾನವನ ಬದುಕು ಕ್ರಮೇಣ ಒಂದೆಡೆ ನಿಲ್ಲುವಂತಾಯಿತು. ಅಲೆಮಾರಿ ಸಮುದಾಯಗಳು ಭೌಗೋಳಿಕ ಪರಿಸರದ ಕಲ್ಲಿನ ಆಸರೆ, ಬೆಟ್ಟದ ಅಂಚಿನಲ್ಲಿ ತಂಗುತ್ತಿದ್ದು, ಕಾಲಕ್ರಮೇಣ ನಾಗರಿಕರಾದರು. ಅಲೆಮಾರಿತನವನ್ನು ತೊರೆದು ಒಂದೆಡೆ ನೆಲೆಸಲು ಆರಂಭಿಸಿದರು. ಈ ನೆಲೆಸುವಿಕೆಯು ಪ್ರಾಥಮಿಕವಾಗಿ ಒಂದೊಂದು ಗುಂಪಿನ ಮಾದರಿಯಾಗಿತ್ತು. ತದನಂತರ ಹಲವು ಗುಂಪುಗಳಾಗಿ ಒಟ್ಟಿಗೆ ಬದುಕುವುದನ್ನು ಆರಂಭಿಸಿದರು. ಈ ಅಗತ್ಯವೆ ನೆಲೆಗಳಿಗೆ ಹೆಸರಿಸುವ, ಗ್ರಾಮ ಸ್ಥಳನಾಮಗಳ ಆರಂಭವಾದುದರ ಕುರುಹು ಎನ್ನಬಹುದು. ಆಯಾ ಪ್ರಾದೇಶಿಕ ಮಟ್ಟದಲ್ಲಿ ನೆಲೆಸುವ ಸಮುದಾಯಗಳು ಆರಂಭದಲ್ಲಿ ಪ್ರಾಕೃತಿಕ ಚಹರೆಯಾಗಿ ತಮ್ಮ ನೆಲೆಗಳಿಗೆ ಹೆಸರನ್ನಿಟ್ಟುಕೊಂಡರು. ಬೆಟ್ಟ, ಗುಡ್ಡ, ಗಿಡ, ಮರ, ಕಲ್ಲು, ಮಣ್ಣು ಇವುಗಳ ಗಾಢ ಸಂಬಂಧವು ಹೆಸರುಗಳಿಗೆ ಪ್ರೇರೇಪಿಸಿರಬೇಕು.

ಹೆಚ್ಚಾಗಿ ಸಮುದಾಯಗಳು ವಾಸಿಸುತ್ತಿದ್ದುದು ಬೆಟ್ಟದ ಅಂಚಿನ ದಿನ್ನೆ ಪ್ರದೇಶ ಮತ್ತು ತಮಗೆ ಅಗತ್ಯವಾಗಿ ಬೇಕಾದಂತಹ ನೀರಿನ ಅನುಕೂಲತೆ ಇರುವಲ್ಲಿ ಜಗತ್ತಿನ ಬಹುತೇಕ ಪ್ರಾಚೀನ ನಾಗರಿಕತೆಗಳು ಆರಂಭವಾದದ್ದು ನದಿದಂಡೆಯ ಮೇಲೆ ಎಂಬುದನ್ನು ಗಮನಿಸಿದರೆ ಸಮುದಾಯಗಳ ನೆಲೆಸುವಿಕೆಯ ಆಯ್ಕೆಯು ಸ್ಪಷ್ಟವಾಗಿ ಗೋಚರಿಸುತ್ತದೆ. ಜನಸಾಮಾನ್ಯರ ನೋವು, ನಲಿವು, ಆಚಾರ-ವಿಚಾರ, ರೂಢಿ ಸಂಪ್ರದಾಯಗಳಂತಹ ಸಾಂಸ್ಕೃತಿಕ ಅಂಶಗಳ ಕುರಿತು ಸೂಕ್ಷ್ಮತರವಾದ ವಿಚಾರಗಳು ದಾಖಲಾಗಿರುವುದು ಆ ಪರಿಸರದ ಜನರಿಂದ ಹೆಸರಿಸಲ್ಪಟ್ಟ ಸ್ಥಳಗಳಿಂದ ಎಂಬುದು ವೇದ್ಯವಾಗುತ್ತದೆ.

ಆಯಾಯ ಕಾಲಘಟ್ಟದಲ್ಲಿ ಹೆಸರಿಸಲ್ಪಟ್ಟ ಗ್ರಾಮನಾಮಗಳಲ್ಲಿಯ ಆ ಸ್ಥಳಗಳ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅಧ್ಯಯನಕ್ಕೆ ಆಕರವಾಗುವುದರಲ್ಲಿ ಸಂಶಯವಿಲ್ಲ. ಈ ಹಿನ್ನೆಲೆಯಲ್ಲಿ ಸ್ಥಳನಾಮಗಳ ಚಾರಿತ್ರಿಕ ಅಧ್ಯಯನ ಅವಶ್ಯಕವಾಗಿದೆ. ಸ್ಥಳನಾಮಗಳ ಕುರಿತ ಅಧ್ಯಯನ ಮೇಲ್ನೋಟಕ್ಕೆ ಸಾಮಾನ್ಯ ವಿಷಯವಾಗಿದೆ. ಆದರೆ ಅದರಲ್ಲಿ ಎಷ್ಟೊಂದು ಮಹತ್ವಪೂರ್ಣವಾದ ಸಂಗತಿಗಳು ಹುದುಗಿಕೊಂಡಿರುವುದಲ್ಲದೆ ಅದೆಷ್ಟೋ ಅಜ್ಞಾತ ವಿಷಯಗಳು ಬೆಳಕಿಗೆ ಬಂದಿವೆ. ಸೂಕ್ಷ್ಮವಾಗಿ ವಿಮರ್ಶಿಸಿದಷ್ಟು ಹಿಂದೆ ಆಗಿ ಹೋದ ಅನೇಕ ಪ್ರಾಚೀನ ಐತಿಹಾಸಿಕ ಘಟನೆಗಳಿಗೆ ಶಾಸನಗಳಲ್ಲಿ ದೊರೆಯದ ಆಧಾರಗಳು ಸ್ಥಳನಾಮದಲ್ಲಿ ಸಿಕ್ಕುತ್ತಿವೆ. ಇದು ಸ್ಥಳೀಯ ವಸ್ತು, ವ್ಯಕ್ತಿ ಅಥವಾ ಘಟನೆಯ ವಿಶಿಷ್ಟ ಗುಣ ಸ್ವಭಾವಗಳನ್ನು ವಿವರಿಸುವುದಾಗಿರುತ್ತದೆ. ಸ್ಥಳೀಯ ಸಂಪ್ರದಾಯ ಅಥವಾ ಪರಂಪರೆಯನ್ನು ಕುರಿತು ಈ ಬಗೆಯ ಐತಿಹ್ಯಗಳು ಹೇಳುತ್ತವೆ.

ಹಿರಿಯೂರಿನ ಹೆಸರು

ಬಹು ಹಿಂದೆ ಹಿರಿಯೂರನ್ನು "ಘನಪುರಿ" ಎಂದು ಕರೆಯುತ್ತಿದ್ದರು. ಇದನ್ನು ಪ್ರಮಾಣಿಸಿದವನು ಹಿರಿಯೂರಿನ ಕವಿ ಬಬ್ಬೂರು ರಂಗ. ತನ್ನ 'ಅಂಭಿಕಾವಿಜಯ' ಕಾವ್ಯದಲ್ಲಿ ಘನಪುರಿ(ದೊಡ್ಡ ಊರು) ಹೆಸರನ್ನು ಉಲ್ಲೇಖಿಸಿದ್ದಾನೆ. ಕ್ರಿ.ಶ.೧೭೨೧ರ ಹೊತ್ತಿಗೆ ಹಿರೇಮದಕರಿನಾಯಕನ ಕಾಲದಲ್ಲಿ ಹಿರಿಯೂರು ಧರೆಯೊಳು ಪೆಸರಾಗಿತ್ತು ಎಂದು ತಿಳಿದುಬರುತ್ತದೆ. ಅಂದರೆ ಆ ಸಮಯಕ್ಕಾಗಲೇ "ಘನಪುರಿ" ಎಂಬ ಹೆಸರನ್ನು ಕಳಚಿ 'ಹಿರಿಯೂರು' ಎಂಬ ಹೆಸರು ಬಳಕೆಗೆ ಬಂದಿತೆಂದು ತಿಳಿದುಬರುತ್ತದೆ. ಘನಪುರಿ ಎಂಬ ಹೆಸರು ಕಾಲಾಂತರದಲ್ಲಿ ಬದಲಾವಣೆ ಹೊಂದಿ "ಹೊನ್ನ ಹಿರಿಯೂರು" ಎಂಬ ಹೆಸರು ಬಳಕೆಗೆ ಬಂದಿತು. ಇದಕ್ಕೆ ಕಾರಣ ಆ ಕಾಲದಲ್ಲಿ ಹಿರಿಯೂರಿನ ಸುತ್ತಮುತ್ತಲಿನ ಪ್ರದೇಶದ ನೆಲವನ್ನು ಅಗೆದರೆ ಬಂಗಾರ ಸಿಕ್ಕುತ್ತಿದ್ದು ಹೀಗೆ ಹೊನ್ನು ಸಿಗುತ್ತಿದ್ದ ಕಾರಣಕ್ಕಾಗಿ 'ಹೊನ್ನ ಹಿರಿಯೂರು' ಎಂಬ ಹೆಸರು ಬಂದಿರಬೇಕು. (ವಾಸ್ತವವಾಗಿ ಇದೊಂದು ಜನಪದ ನಂಬಿಕೆಯಿರಬೇಕು) ನಂತರದ ದಿನಗಳಲ್ಲಿ ಆ ಹೆಸರು ನಶಿಸಿ, ಆಡುಮಾತಿನ ಅನುಕೂಲಕ್ಕಾಗಿ ಜನರ ಬಾಯಲ್ಲಿ 'ಹೊನ್ನ' ಕಳೆದುಕೊಂಡು ಬರೀ "ಹಿರಿಯೂರು" ಎಂದು ಕರೆಯಲ್ಪಟ್ಟಿತು. ಬಬ್ಬೂರು ರಂಗನ "ಘನಪುರಿ" ಮತ್ತು ಈಗಿನ "ಹಿರಿಯೂರು" ಹೆಸರುಗಳ ನಡುವೆ ಅರ್ಥಸಾಮಾನ್ಯವನ್ನು ಗುರುತಿಸಬಹುದಾಗಿದೆ.

ಸ್ಥಳನಾಮಗಳು

ವಸ್ತು, ವ್ಯಕ್ತಿ, ಪ್ರಾಣಿ-ಪಕ್ಷಿಗಳ ಹೆಸರನ್ನು ಸೂಚಿಸುವ ಪದಕ್ಕೆ ನಾಮಪದ ಎನ್ನುತ್ತೇವೆ. ಇದರಲ್ಲಿ ರೂಢನಾಮ, ಅಂಕಿತನಾಮ, ಅನ್ವರ್ಥನಾಮ ಎಂಬ ಅನೇಕ ಪ್ರಭೇದಗಳಿವೆ. ಅಂಕಿತನಾಮ ವ್ಯಕ್ತಿ, ಪ್ರಾಣಿ-ಪಕ್ಷಿಗಳ ಸ್ಥಳಗಳು ಬಹುಸಂಖ್ಯೆಯಲ್ಲಿದ್ದಾಗ ಅಥವಾ ಅತಿ

ಬಳಕೆಯಲ್ಲಿದ್ದಾಗ ಅಂತಹ ಅಂಕಿತನಾಮಗಳು ಸಾಮಾನ್ಯವಾದ ಮಟ್ಟಕ್ಕಿಳಿಯುತ್ತವೆ. ಸ್ಥಳನಾಮಗಳು ಸಾಮಾನ್ಯವಾಗಿ ಅಂಕಿತನಾಮಗಳಾಗುತ್ತವೆ.[೬]

ಸ್ಥಳನಾಮಗಳ ವರ್ಗೀಕರಣ

೧. ಪ್ರಾಕೃತಿಕ ಸ್ಥಳನಾಮ

೨. ಸಾಂಸ್ಕೃತಿಕ ಸ್ಥಳನಾಮ

ಮಾನವ ಪ್ರಕೃತಿಯೊಂದಿಗೆ ಸಹಜವಾಗಿ ಬದುಕುತ್ತಿರುವ ಸಂದರ್ಭದಲ್ಲಿ ಕಲ್ಲು, ಬೆಟ್ಟ, ಗುಡ್ಡ, ಗಿರಿಗಳಲ್ಲಿ ನೆಲೆ ಮಾಡಿಕೊಂಡಿದ್ದ. ಆಸರೆಗಳನ್ನು ಗುರುತಿಸುವ ಸಂದರ್ಭದಲ್ಲಿ ಆ ಕಲ್ಲು ಗುಡ್ಡಗಳಿಂದಲೇ ಹೆಸರಿಸಲು ಪ್ರಾರಂಭಿಸಿದರು.

೧. ಪ್ರಾಕೃತಿಕ ಸ್ಥಳನಾಮ

ಪ್ರಾಕೃತಿಕ ಸ್ಥಳನಾಮಗಳನ್ನು ಜಲವಾಚಕ, ಶಿಲಾವಾಚಕ, ಭೂವಾಚಕ, ಪ್ರಾಣಿ ಪಕ್ಷಿವಾಚಕ, ಸಸ್ಯವಾಚಕ, ಪ್ರಮಾಣವಾಚಕ, ದಿಕ್ಕುವಾಚಕ, ಖನಿಜವಾಚಕ ಎಂಬುದಾಗಿ ವಿಭಾಗಿಸಿ ಅಧ್ಯಯನ ಮಾಡಲಾಗಿದೆ.[೭]

ಜಲವಾಚಕ

ಆದಿಮಾನವ ತನ್ನ ಜೀವನವನ್ನು ಪ್ರಾರಂಭಿಸಿದುದು ನೀರಿನ ತಾಣಗಳಲ್ಲೆ. ಅಲ್ಲಿಯೇ ಮಾನವನ ಸಂಸ್ಕೃತಿಗಳು ಪ್ರಸಿದ್ಧಿಗೆ ಬಂದಿರುವುದು. ನದಿ, ಪರಿಸರ, ಕೆರೆ, ಹಳ್ಳ, ಕೊಳ್ಳ, ಕುಂಟೆಗಳಂತಹ ಜಲಚರ ಜಲಸಂಗ್ರಾಹಕಗಳನ್ನು ನಿರ್ಮಿಸಿಕೊಂಡು ಗ್ರಾಮಗಳನ್ನು ನಿರ್ಮಿಸಿಕೊಂಡರು.

ಏರಿ–ಜಲವಾಚಿ ಪದ

ಉದಾ: ಏರಿ+ಊರು = ಏರೂರು

ಈ ಪರಿಸರದಲ್ಲಿ ಕಂಡುಬರುವ ಜಲವಾಚಿ ಸ್ಥಳನಾಮಗಳೆಂದರೆ ಅಬ್ಬಿನಹೊಳೆ, ಅಪ್ಪಸಮುದ್ರ, ಕಟ್ಟೆಹೊಳೆ ಮತ್ತು ಸಮುದ್ರದಹಳ್ಳಿ.

ಭೂಸ್ಥಿತಿವಾಚಕ

ಮಾನವನು ತಾನು ಜೀವಿಸಲು ನೆಲೆನಿಂತು ತನ್ನ ಸುತ್ತಲಿನ ಪ್ರದೇಶವನ್ನಲ್ಲದೆ, ಭೌಗೋಳಿಕ ವೈಶಿಷ್ಟ್ಯಗಳಾದ ಗುಡ್ಡ, ಬೆಟ್ಟ, ಕಾಡು, ತಗ್ಗು, ದಿಬ್ಬ, ಕೋಟೆ, ದುರ್ಗ, ಇಳಿಜಾರು ಮುಂತಾದವುಗಳಿಂದ ಗುರುತಿಸಿದವು. ಈ ಭೂಸ್ಥಿತಿ ಹೊಂದಿದ ಕೆಲವು ಸ್ಥಳನಾಮಗಳು ಹೀಗೆ ಕಂಡುಬರುತ್ತವೆ.

ಗುತ್ತಿ: ಗುತ್ತಿಕಟ್ಟೆ, ಗುತ್ತಿ ಎಂದರೆ ಎತ್ತರ ಭೂಮಿ.[೮]

ಗುಡ್ಡ: ಗುಡ್ಡದ ನೇರುಕೆರೆ

ದುರ್ಗ: ದುರ್ಗಾವರು ಭೌಗೋಳಿಕವಾಗಿ, ಬೆಟ್ಟ-ಗುಡ್ಡಗಳಿಂದ ಕೂಡಿರುವುದು.

ಪ್ರಾಣಿ-ಪಕ್ಷಿ ವಾಚಕ

ಪ್ರಾಣಿ-ಪಕ್ಷಿಗಳು ಪ್ರಕೃತಿಯಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿವೆ. ಮಾನವ ತನ್ನ ಜೀವನದೊಂದಿಗೆ ಬದುಕುವ ಅಥವಾ ತಮಗೆ ಅತಿಮಾನುಷವೆಂದು ತೋರುವ ಪ್ರಾಣಪಕ್ಷಿಗಳ ಹೆಸರನ್ನು ತಮ್ಮ ವಾಸದ ನೆಲೆಗಳಿಗೆ ನಿರ್ದೇಸಿಸುತ್ತಾರೆ. ಈ ಪರಿಸರದಲ್ಲಿ ಕಂಡುಬರುವ ಸ್ಥಳನಾಮಗಳೆಂದರೆ ಆನೆಸಿದ್ರಿ, ಹಂದಿನನಾಡು, ಹುಲಿತೊಟ್ಟಲು, ಮುಂಗುಸವಳ್ಳಿ ಇತ್ಯಾದಿ.

ಸಸ್ಯ ವಾಚಕ

ಪ್ರಾಚೀನ ಕಾಲದಿಂದಲೂ ಪ್ರಾಕೃತಿಕ ಸಂಪತ್ತುಗಳ ಮಧ್ಯೆ ಬದುಕುತ್ತಿರುವ ಮಾನವನು ಗಿಡ-ಮರಗಳ ಬಗ್ಗೆ ಒಂದು ರೀತಿಯ ಆರಾಧನಾ ಮನೋಭಾವನೆ ಬೆಳೆಸಿಕೊಂಡು ಬಂದಿದ್ದಾನೆ. ಈ ಪರಿಸರದಲ್ಲಿ ಸಾಮಾನ್ಯವಾಗಿ ಬೆಳೆಯುತ್ತಿದ್ದ ಮರ, ಗಿಡ, ದವಸ-ಧಾನ್ಯ ಮುಂತಾದವುಗಳ ಹೆಸರಿನಲ್ಲಿ ಸ್ಥಳನಾಮಗಳು ಕಂಡುಬರುತ್ತವೆ.

ಹಿರಿಯೂರು ಪಟ್ಟಣದ ಹಿಂದೆ ಒಂದು ಬೀದಿಯಲ್ಲಿ ತರಕಾರಿ ಮಾರಾಟ ಮಾಡುವುದಕ್ಕೆ ಸೊಪ್ಪಿನ ಕೇರಿ ಎಂದು ಕರೆಯುತ್ತಿದ್ದರು. ಈಗಲೂ ಸಹ ಆ ಕೇರಿಯನ್ನು ಸೊಪ್ಪಿನಕೇರಿ ಎನ್ನುವರು. ಅದರಲ್ಲಿ ಅರಳಿಕಟ್ಟೆ.

ಪ್ರಮಾಣ ವಾಚಕ

ಒಂದೇ ಹೆಸರಿನ ಹಲವಾರು ಸ್ಥಳಗಳು ಇರುವ ಕಡೆ ಆ ಪ್ರದೇಶವನ್ನು ಗುರುತಿಸಲು ಹಿರಿದು, ಕಿರಿದು, ಚಿಕ್ಕದು, ದೊಡ್ಡದು, ಮೇಲೆ-ಕೆಳಗೆ ಎಂಬ ಪ್ರಮಾಣಗಳನ್ನು ಬಳಸಿಕೊಂಡಿದ್ದು. ಅದರಲ್ಲಿ ಕೆಲವು ದೊಡ್ಡ ಘಟ್ಟ, ಗಿಡ್ಡೋಬನಹಳ್ಳಿ ಮತ್ತು ಚಿಕ್ಕಸಿದ್ದವ್ವನಹಳ್ಳಿ.

ದಿಕ್ಕು ಸೂಚಕ

ಒಂದು ಪ್ರದೇಶದ ಸ್ಥಳಗಳನ್ನು ಗುರುತಿಸುವಲ್ಲಿ ದಿಕ್ಕು, ರಸ್ತೆ, ಗುಡಿ, ಮುಂತಾದ ವರ್ಗಗಳನ್ನು ಒಳಗೊಂಡ ಸ್ಥಳನಾಮಗಳು ಕಂಡುಬರುತ್ತವೆ. ಗಡಿಯಪ್ಪನ ಹಟ್ಟಿ ಇದಕ್ಕೆ ಉತ್ತಮ ಉದಾಹರಣೆ. ಕೋಟೆ: ನಿರ್ಮಾಣವಾಚಿ, ಸೇನೆಯ ರಕ್ಷಣೆಗೆ ಕಟ್ಟಿದ ಪ್ರಕಾರ, ಬದಲಾಗಿ ಗೋಡೆಯ ಆವರಣ, ದುಗ್ಗ, ಗಡ, ಕಿಲ್ಲೆ. ತೆಲುಗಿನಲ್ಲಿ ಕೋಟ-ಗೋಟ ಎಂದು ಬಳಕೆಯಲ್ಲಿದೆ. ಹಿರಿಯೂರು ಪಟ್ಟಣದ ಪರಿಸರದಲ್ಲಿ ಕೋಟೆ ಇದ್ದು ಹಿರಿಯಕೆರೆ ಎಂದು ಬಂದಿರಬಹುದು.[೯]

೨. ಸಾಂಸ್ಕೃತಿಕ ಸ್ಥಳನಾಮ

ಬಹಳಷ್ಟು ಸ್ಥಳನಾಮಗಳು ವ್ಯಕ್ತಿವಾಚಿಯಾಗಿ ಜಾತಿಯನ್ನು ಸೂಚಿಸುತ್ತಾ ದೇವರನ್ನು ಸೂಚಿಸುವ ಸ್ಥಳನಾಮಗಳು ಸೇರಿವೆ. ಪುರುಷ ಹೆಸರಿನ ಸ್ಥಳನಾಮಗಳು ಹಾಗೂ ಸ್ಥಿತಿ ಹೆಸರಿನ ಸ್ಥಳನಾಮಗಳು ಕಂಡುಬರುವುದು ವಿಶಿಷ್ಟ.[೧೦]

ಜಾತಿ ವಾಚಕ ಸ್ಥಳನಾಮ

ಸ್ಥಳನಾಮಗಳಲ್ಲಿ ಜಾತಿಗೆ ಸಂಬಂಧಿಸಿದ ಅಂಶಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಜನಾಂಗೀಯ ಅಧ್ಯಯನಕ್ಕೆ ಈ ಬಗೆಯ ಹೆಸರುಗಳು ಮಹತ್ವದ ಆಕರಗಳಾಗಿವೆ. ಹಿರಿಯೂರಿನಲ್ಲಿ ಜಾತಿಗೊಂದು ಕೇರಿಗಳಿರುವವು. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ. ಅಜಾದ್ ನಗರ, ತೇರುಬೀದಿ (ಬ್ರಾಹ್ಮಣರು), ಮಿರ್ಜಾಬಡಾವಣೆ. ಜೋಸೆಫ್‌ನಗರ (ಕ್ರಿಶ್ಚಿಯನ್ನರು), ಬಿಲಾಲ್ (ಮುಸ್ಲಿಂರು), ಬಾಬುಜಗಜೀವನ್‌ರಾಮ್ ಬಡಾವಣೆ (ಜೈನರು ಮತ್ತು ಶೆಟ್ಟರು), ತಿರುವಳ್ಳವರ್‌ರಸ್ತೆ (ತಮಿಳರು), ವಾಣಿವಿಲಾಸ (ಯಾದವರು) ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೇರಿಗಳು ಇವೆ.

೨.೩ ಪ್ರಾಗಿತಿಹಾಸ

ಪ್ರಕೃತಿ ಮಾನವನಿಗೆ ಮೊದಲು ನೀಡಿದ ಕೊಡುಗೆಗಳಲ್ಲಿ ಶಿಲೆಯೂ ಒಂದಾಗಿದೆ. ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವನಿಗೆ ಗಡ್ಡೆಗೆಣಸುಗಳನ್ನು ಅಗೆದು ತೆಗೆಯಲು, ಗಿಡಗಳನ್ನು ಕಡಿಯಲು, ಬೇಟೆಯಾಡಲು, ಬೇಟೆಯಾಡಿದ ಪ್ರಾಣಿ ಮಾಂಸವನ್ನು ತುಂಡು ಮಾಡಲು ಆಯುಧಗಳನ್ನು ತಯಾರಿಸಲು ಶಿಲೆ ಮಾನವನಿಗೆ ನೆರವಾಗಿದೆ.[೧೨] ಒಟ್ಟಿನಲ್ಲಿ ಅಂದು ಮಾನವನ ಜೀವನದ ಒಂದು ಭಾಗವಾಗಿ ಶಿಲೆ ಬಳಕೆಯಾಗುತ್ತಿತ್ತು. ಈ ಕಾಲಾವಧಿಯನ್ನು ಶಿಲಾಯುಗ (ಸ್ಟೋನೇಜ್) ಎಂದು ಕರೆಯುತ್ತಾರೆ. ಅತ್ಯಂತ ದೀರ್ಘವಾದ ಈ ಯುಗವನ್ನು ಕ್ರಮವಾಗಿ ೧.ಹಳೆಶಿಲಾಯುಗ, ೨.ಸೂಕ್ಷ್ಮ ಶಿಲಾಯುಗ, ೩.ನವ ಶಿಲಾಯುಗ, ೪.ಬೃಹತ್ ಶಿಲಾಯುಗ ಎಂದು ನಾಲ್ಕು ಹಂತಗಳಾಗಿ ವಿಭಾಗಿಸಲಾಗಿದೆ.[೧೩]

೧. ಹಳೆಶಿಲಾಯುಗ

ಹಳೆಶಿಲಾಯುಗದ ಇತಿಹಾಸದ ಬಗ್ಗೆ ಕರ್ನಾಟಕದಲ್ಲಿ ವಿಸ್ತೃತವಾದ ಅಧ್ಯಯನಗಳು ನಡೆದಿವೆ. ಕೃಷ್ಣ, ಕಾವೇರಿ, ತುಂಗಭದ್ರಾ ಮತ್ತು ಅವುಗಳ ಉಪನದಿಗಳ ಪ್ರದೇಶದಲ್ಲಿ ಹಳೆಶಿಲಾಯುಗದ ಮಾನವನ ಬದುಕು ರೂಪಗೊಂಡಿತ್ತು. ಆದಿ ಹಳೆಶಿಲಾಯುಗದ ಅವಶೇಷಗಳು ಅನೇಕ ಸ್ಥಳಗಳಲ್ಲಿ ಕಂಡುಬಂದಿವೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ತಾಳ್ಯ, ಹೊಸದುರ್ಗ ತಾಲೂಕಿನ ಜಾನಕಲ್ಲು ಈ ಹಂತಕ್ಕೆ ಸೇರಿದ ಪ್ರಮುಖ ಸ್ಥಳಗಳು ಎಂದು ರಾಬರ್ಟ್‌ಬ್ರೂಸ್ ಫೂಟ್ ಅವರು ಪತ್ತೆ ಹಚ್ಚಿದ್ದಾರೆ.

ಹಿರಿಯೂರು ಪಟ್ಟಣದಲ್ಲಿ ಹಳೆಶಿಲಾಯುಗಕ್ಕೆ ಸಂಬಂಧಿಸಿದಂತೆ ಕುರುಹುಗಳು ಮತ್ತು ನೆಲೆಗಳು ಕಂಡುಬಂದಿಲ್ಲ. ಆದರೆ ಹಿರಿಯೂರು ತಾಲೂಕು ಪರಿಸರದಲ್ಲಿ ಹಳೆಶಿಲಾಯುಗಕ್ಕೆ ಸಂಬಂಧಿಸಿದಂತೆ ಅವಶೇಷಗಳು ಮತ್ತು ನೆಲೆಗಳು ಕಂಡುಬಂದಿವೆ. ಮುಖ್ಯವಾಗಿ ಮರಡಿಹಳ್ಳಿ ಗ್ರಾಮದಲ್ಲಿರುವ ಪಿಲ್ಲೋಲಾವಾ (ಶಿಲಾದಿಂಬು) ಶಿಲೆಗೆ ಹೆಸರಾದ ಬೆಟ್ಟವಿದೆ. 'ಅದೇ ಮರಡಿಹಳ್ಳಿ ಬೆಟ್ಟ' (ಮರಡಿಹಳ್ಳಿ ಗುಡ್ಡ). ಭಾರತ ಮತ್ತು ಜಪಾನಿನ ಭೂಗರ್ಭಶಾಸ್ತ್ರಜ್ಞರ ಪ್ರಕಾರ ೨೭೦ ಕೋಟಿ ವರ್ಷಗಳ ಹಿಂದಿನದೆಂದು. ಇಲ್ಲಿ ಕಾಣಸಿಗುವ ದಿಂಬಿನಾಕಾರ ಶಿಲಾ ಪ್ರವಾಹ ಪ್ರಾಕೃತಿಕ ವಿಸ್ಮಯಗಳಲ್ಲಿ ಒಂದಾಗಿದೆಯೆಂದು ಹಿಂದೊಮ್ಮೆ ಈ ಭೂಭಾಗ ಸಮುದ್ರವಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ.[೧೫] ಈ ಭೂ ಪ್ರದೇಶವು ವೇದಾವತಿ ನದಿಗೆ ಹರಿದುಹೋಗುವ ಹಳ್ಳ ದಂಡೆಯ ಮೇಲಿದ್ದು ಇಲ್ಲಿ ಸಿಗುವ ಸಿಸ್ಟ್, ಕ್ವಾರ್ಟ್ರ್‌ಜೈಟ್, ಸುಣ್ಣಕಲ್ಲು, ಕಬ್ಬಿಣಯುಕ್ತ ಶಿಲಾಪದರುಗಳು, ಡೋಲೋರೈಟ್, ನುಗು ಶಿಲೆಗಳೂ ಇದ್ದು ಸ್ಥಳೀಯವಾಗಿ ಸಿಗುವ ಕಲ್ಲನ್ನೇ ಬಳಸಿಕೊಂಡು ಶಿಲಾಯುಗದ ಮಾನವನು ಈ ಭೂಪ್ರದೇಶದಲ್ಲಿ ವ್ಯವಸ್ಥಿತವಾದ ಜೀವನ ಸಾಗಿಸಿರುವುದು ಕಂಡುಬರುತ್ತದೆ.

೨. ಸೂಕ್ಷ್ಮ ಶಿಲಾಯುಗ

ಹಳೆಯ ಶಿಲಾಯುಗ ಮತ್ತು ನೂತನ ಶಿಲಾಯುಗದ ನಡುವಿನ ಸಾಂಸ್ಕೃತಿಕ ಹಂತವನ್ನು ಮಧ್ಯ ಶಿಲಾಯುಗವೆಂದು ಕರೆಯಲಾಗಿದೆ. ಕರ್ನಾಟಕದಲ್ಲಿ ಸೂಕ್ಷ್ಮ ಶಿಲಾಯುಗದ ನಿವೇಶನಗಳು ೧೯೨೬ರ ವೇಳೆಗೆ ಬೆಳಕಿಗೆ ಬಂದಿವೆ. ಬ್ರಹ್ಮಗಿರಿ ಉತ್ಖನನದಲ್ಲಿ (ವೀಲ್ಹರ್:೧೯೪೭) ಈ ಹಂತದ ಉಪಕರಣಗಳು ಗಮನಾರ್ಹ ಪ್ರಮಾಣದಲ್ಲಿ ದೊರಕಿದ್ದರೂ ಅವುಗಳನ್ನು ನಿರ್ದಿಷ್ಟ ಹಾಗೂ ಪ್ರತ್ಯೇಕ ಸ್ತರದಲ್ಲಿದ್ದುದನ್ನು ಗುರುತಿಸಿ, ನೂತನ ಶಿಲಾಯುಗಕ್ಕೆ ಸೇರಿದವೆಂದು ಭಾವಿಸಲಾಗಿತ್ತು. ಕರ್ನಾಟಕದ ಅನೇಕ ಕಡೆಗಳಲ್ಲಿ ಈ ಹಂತದ ಉಪಕರಣಗಳು ಮತ್ತು ಗವಿವರ್ಣ ಚಿತ್ರಗಳು ಕಂಡುಬಂದಿವೆ. ಹಿರಿಯೂರು ಪಟ್ಟಣದಲ್ಲಿ ನೆಲೆಗಳು ದೊರೆಯದೆ ಇದ್ದರು ಹಿರಿಯೂರು ತಾಲೂಕು ಪರಿಸರದಲ್ಲಿ ಸೂಕ್ಷ್ಮಶಿಲಾಯುಗದ ಸಂಸ್ಕೃತಿಗೆ ಸಂಬಂಧಿಸಿದಂತೆ ಅವಶೇಷಗಳು ಮತ್ತು ನೆಲೆಗಳು ಕಂಡುಬಂದಿವೆ. ಆದರೆ ಸಂಗನಕಲ್ಲು ಆಯುಧಗಳನ್ನು ಹೋಲುವಂತಹ ಉಪಕರಣಗಳು ಕಂದಿಕೆರೆ ಹಾಗೂ ಎಂ.ಡಿ.ಕೋಟೆ ಗ್ರಾಮಗಳಲ್ಲಿ ಕಂಡುಬಂದಿವೆ.[೧೬] ಈ ನೆಲೆಯಲ್ಲಿ ಪ್ರಮುಖವಾಗಿ ಚಕ್ಕೆಗಳು, ಉದ್ದನೆಯ ಚಕ್ಕೆಗಳು, ಮೊನೆ, ಅರ್ಧಚಂದ್ರಾಕೃತ, ಕೊರೆಯುಳಿ ಆಯುಧ, ಹರಿತವಲ್ಲದ ಬ್ಲೇಡುಗಳು ಮುಂತಾದ ಅವಶೇಷಗಳು ಪತ್ತೆ ಹಚ್ಚಲಾಗಿದೆ. ಇವುಗಳನ್ನು ಜಾಸ್ಪರ್, ಅಗೇಟ್, ಫ್ಲಿಂಟ್, ಕ್ರಿಸ್ಟಲ್, ಚಾಲ್ಸಿಡೋನಿ ಶಿಲೆಯಿಂದ ಮಾಡಲ್ಪಟ್ಟಿವೆ.

೩. ನೂತನ ಶಿಲಾಯುಗ

ಕೃಷಿ ಆಧಾರಿತ ಬದುಕನ್ನು ರೂಪಿಸಿಕೊಂಡು ಹಾಗೂ ಪ್ರಾಣಿಗಳನ್ನು ಪಳಗಿಸಿಕೊಂಡು ಒಂದೆಡೆ ನೆಲೆಯಾಗಿ ನಿಂತು ಗ್ರಾಮೀಣ ಬದುಕನ್ನು ಕಟ್ಟಿಕೊಂಡ ಈ ಹಂತದ ಬೆಳವಣಿಗೆಯನ್ನು

ಗೋರ್ಡನ್ ಚೈಲ್ಡ್ 'ನೂತನ ಶಿಲಾಯುಗ ಕ್ರಾಂತಿ' ಎಂದು ಕರೆದ. ಇಂದಿನ ಗ್ರಾಮೀಣ ಬದುಕಿಗೆ ಇದೇ ಮೂಲ ಕಾರಣ ಹಾಗೂ ಪ್ರೇರಣೆಯಾಗಿದೆ ಎನ್ನಬಹುದು. ಈ ಹಂತದ ಉಪಕರಣಗಳನ್ನು ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಕೆತ್ತುಳಿ, ಅರೆಯುವ ಕಲ್ಲು, ಉಂಗುರಕಲ್ಲು, ಕವಣೆಕಲ್ಲು, ಮೊದಲಾದ ಉಪಕರಣಗಳನ್ನು ಸಿದ್ಧಗೊಳಿಸಲಾಗಿತ್ತೆಂದು ತಿಳಿಯುತ್ತದೆ.[೧೭] ಮಣ್ಣಿನ ಮಡಿಕೆಗಳು ಆರಂಭ ಹಂತದಲ್ಲಿ ಕೈಯಲ್ಲಿ ರೂಪಿಸಲಾಗುತ್ತಿತ್ತು. ನಂತರದಲ್ಲಿ ತಿರುಗಿಸಲ್ಪಡುವ ತಿಗರಿ (ಚಕ್ರ)ಗಳಲ್ಲಿ ತಯಾರಿಸಲಾಗುತ್ತಿತ್ತು. ಹೆಚ್ಚು ತೆಳ್ಳನೆಯ ಮೃತ್‌ಪಾತ್ರೆಯಲ್ಲಿ ಕಂಡುಬರುತ್ತದೆ. ಈ ಸಂಸ್ಕೃತಿಗೆ ಸಂಬಂಧಿಸಿದಂತೆ ಬ್ರಹ್ಮಗಿರಿ, ಮಸ್ಕಿ, ಪಿಕ್ಲಿಹಾಳ್, ತೆಕ್ಕಲಕೋಟೆ, ಕಪ್ಪಗಲ್, ಹಳ್ಳೂರು, ಟಿ.ನರಸಿಪುರ, ಕೊಡೇಕಲ್, ಹೆಮ್ಮಿಗೆ, ಬನಹಳ್ಳಿ ಮುಂತಾದ ನೆಲೆಗಳಲ್ಲಿ ಕಂಡುಬಂದಿದೆ. ಈ ನೂತನ ಶಿಲಾಯುಗಕ್ಕೆ ಸಂಬಂಧಿಸಿದಂತೆ ನನ್ನ ಅಧ್ಯಯನ ಕ್ಷೇತ್ರವಾದ ಹಿರಿಯೂರು ಪಟ್ಟಣದಲ್ಲಿ ನೂತನ ಶಿಲಾಯುಗದ ಅವಶೇಷಗಳು ಕಂಡುಬರದೆ ಇದ್ದರು, ಹಿರಿಯೂರು ತಾಲೂಕಿನ ಸುತ್ತಮುತ್ತಲಿನ ಪರಿಸರದಲ್ಲಿ ನವಶಿಲಾಯುಗಕ್ಕೆ ಸಂಬಂಧಿಸಿದಂತೆ ಆ ಕಾಲಘಟ್ಟದ ಮಾನವನು ಬಳಸಿ ಬಿಟ್ಟು ಹೋದ ಕುರುಹುಗಳಾದ ಅರೆಯುವ ಕಲ್ಲುಗಳು, ಕುಟ್ಟು ಕಲ್ಲುಗಳು, ಕಲ್ಲಿನ ಕೊಡಲಿ, ಗೃಹಬಳಕೆಗೆ ಬಳಸುವ ವಿವಿಧ ನಮೂನೆಯ ಕಲ್ಲಿನ ಬಿಲ್ಲೆ, ನಯವಾದ ಒರಟಾದ ಬೂದುಬಣ್ಣದ ಮಡಕೆ ಚೂರುಗಳು, ಕೆಂಪುಬಣ್ಣ ಲೇಪಿತ ಮಡಕೆ ಚೂರುಗಳು ಇತ್ಯಾದಿ ಅವಶೇಷಗಳನ್ನು ಹಿರಿಯೂರು ತಾಲೂಕು ಕೇಂದ್ರದಿಂದ ಹುಳಿಯಾರು ರಸ್ತೆಯ ಬಳಿ ಇರುವ ಸೋಮೇರಹಳ್ಳಿ ಎಂಬ ಗ್ರಾಮದಲ್ಲಿ ರಂಗನಾಥ ದೇವಾಲಯ ಗುಡ್ಡದ ಬಳಿ ೧೦ ಸೆಂ.ಮೀ. ಎತ್ತರ ಮತ್ತು ೬ ಸೆಂ.ಮೀ. ಅಗಲದ ಕರಿಯ ಕಲ್ಲಿನ ತ್ರಿಕೋನಕಾರದ ನವಶಿಲಾಯುಗಕ್ಕೆ (ಕ್ರಿಪೂ. ಸುಮಾರು ೨೦೦-೮೦೦) ಸೇರಿದ ಕೈಗೊಡಲಿಯೊಂದು ಪತ್ತೆಯಾಗಿದೆ. ಸಮೀಪದ ಮುಳ್ಳಪನ ಗುಡ್ಡದ ಪರಿಸರದಲ್ಲಿ ನವಶಿಲಾಯುಗದ ಕಾಲ ವಿಪುಲವಾದ ಬಯಲು ಬಂಡೆ ರೇಖಾಚಿತ್ರಗಳ ಮತ್ತು ಶಿಲೋಪಕರಣಗಳು ಲಭ್ಯವಾಗಿವೆ. ಸೋಮೇರಹಳ್ಳಿ, ಐಮಂಗಳ, ಮರಡಿಹಳ್ಳಿ, ಬಸಪ್ಪನ ಮಾಳಿಗೆ, ಎಂ.ಡಿ.ಕೋಟೆ ಮುಂತಾದ ಸ್ಥಳಗಳಲ್ಲಿ ದೊರೆತಿವೆ.[೧೮] ಈ ನೆಲೆಯಲ್ಲಿ ದೊರಕಿರುವ ಅವಶೇಷಗಳು ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯಲ್ಲಿ ಸಿಕ್ಕಿರುವ ಅವಶೇಷಗಳನ್ನು ಹೋಲುತ್ತವೆ.

೪. ಬೃಹತ್ ಶಿಲಾಯುಗ

ಸತ್ತವರಿಗಾಗಿ ದೊಡ್ಡ ದೊಡ್ಡ ಕಲ್ಲುಗಳನ್ನು ನಿಲ್ಲಿಸಿ ಗೋರಿಗಳನ್ನು ನಿರ್ಮಾಣ ಕಾರ್ಯ ನಡೆಸಿದ್ದರಿಂದ ಅದನ್ನು ಬೃಹತ್ ಶಿಲಾಯುಗವೆಂದು ಕರೆಯಲಾಗಿದೆ. ವಿಶಿಷ್ಟ ಬಗೆಯ ಸಂಪ್ರದಾಯದಿಂದ ಕೂಡಿದ ಈ ಮಾನವನು ಮುಖ್ಯವಾಗಿ ಕಬ್ಬಿಣದ ಬಳಕೆಯನ್ನು ರೂಢಿಸಿಕೊಂಡಿದ್ದು ಹಾಗೂ ತನ್ನದೇ ಆದ ರೀತಿಯಲ್ಲಿ ಮಡಕೆ ಮಾದರಿಗಳನ್ನು ರೂಪಿಸಿಕೊಂಡಿದ್ದನು. ಈ ಸಂಸ್ಕೃತಿಯ ಹಂತದಲ್ಲಿ ಒಂದು ವಾಸ್ತವ್ಯ ನೆಲೆಯಾದರೆ ಮತ್ತೊಂದು

ಗೋರಿ ನೆಲೆಯಾಗಿದೆ. ಶವಸಂಸ್ಕಾರಕ್ಕಾಗಿ ವಿವಿಧ ಸ್ಥಳಗಳಲ್ಲಿ ಕಂಡುಬಂದಿರುವ ನೂರಾರು ಕಲ್ಲಿನ ಗೋರಿಗಳು ಈ ಸಂಸ್ಕೃತಿಯ ವೈಶಿಷ್ಟ್ಯವನ್ನು ಹೆಚ್ಚಿಸಿವೆ.

ಹಿರಿಯೂರು ಪಟ್ಟಣ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ನೆಲೆಯು ಕಂಡುಬರದೆ ಇದ್ದರು ಹಿರಿಯೂರು ತಾಲೂಕು ಪರಿಸರದಲ್ಲಿ ಕಂಡುಬರುವ ಪ್ರಮುಖ ಬೃಹತ್ ಶಿಲಾಯುಗ ನೆಲೆಯೆಂದರೆ ಇದ್ದಲ ನಾಗೇನಹಳ್ಳಿ ಮತ್ತು ಮರಡಿಹಳ್ಳಿ ನೆಲೆ ಇಲ್ಲಿ ಸಮಾಧಿ ನೆಲೆಗಳು ಪತ್ತೆಯಾಗಿವೆ. ನೆಲೆಯ ನೆಲೆಯ ಭೂ ಭಾಗದಲ್ಲಿ ಕೆಂಪು, ಕಪ್ಪು ಬಣ್ಣದ ಮಡಕೆ ಚೂರುಗಳೂ, ದಪ್ಪ ಮಡಕೆ ಚೂರುಗಳು ಹಾಗೂ ವಿವಿಧ ನಮೂನೆಯ ಗೃಹಬಳಕೆಯ ಮಡಿಕೆ ಭಾಗಗಳು ದೊರಕಿವೆ.[೧೯] ಇದೇ ಗ್ರಾಮದ ರಾಮಕೃಷ್ಣರೆಡ್ಡಿ ಅವರ ಜಮೀನಿನಲ್ಲಿ ಐದು "ಕಲ್ಲು ವೃತ್ತ ಸಮಾಧಿಗಳು" ಸುಸ್ಥಿತಿಯಲ್ಲಿರುವವು. ಅದೇ ರೀತಿ ಪಾಲವನಹಳ್ಳಿ ಗುಡ್ಡದಲ್ಲಿ ಬೃಹತ್ ಗಾತ್ರದ ದೊಡ್ಡ ದೊಡ್ಡ ಗ್ರಾನೈಟ್ ಗುಂಡುಗಳನ್ನು ಬಳಸಿ ಕಲ್ಲು ವೃತ್ತ ಸಮಾಧಿಗಳನ್ನು ನಿರ್ಮಿಸಿದ್ದಾರೆ. ಈ ಕಲ್ಲು ವೃತ್ತ ಸಮಾಧಿಗಳನ್ನು ಸ್ಥಳೀಯರು ಪಾಂಡವರ ಗುಚ್ಚ, ಕಲ್ಲುಗುಚ್ಚ ಎಂದು ಕರೆಯುತ್ತಾರೆ.[೨೦] ಇಲ್ಲಿಯ ಸಮಾಧಿಗಳು ತಮಿಳುನಾಡಿನಲ್ಲಿರುವ ಚಂಗಲ್‌ಪಟ್ ಮತ್ತು ಕರ್ನಾಟಕದ ಬ್ರಹ್ಮಗಿರಿ ನೆಲೆಗಳ ಸಮಾಧಿಗಳಿಗೆ ಹೋಲಿಕೆಯಿದೆ.

ಇತಿಹಾಸ

ಮಾನವನ ವಿಕಸನ ಹಂತದಲ್ಲಿ ಅಕ್ಷರಗಳ ಆವಿಷ್ಕಾರ ಬಹುಮುಖ್ಯವಾದ ಅಂಶವಾಗಿದೆ. ಅಕ್ಷರಗಳ ಆವಿಷ್ಕಾರದ ನಂತರದ ಹಂತವನ್ನು ಅಂದರೆ ಬರವಣಿಗೆಯು ಗೊತ್ತಾದ ಅವಧಿಯನ್ನು ಇತಿಹಾಸ ಕಾಲವೆಂದು ಕರೆಯಬಹುದು. ಈ ಪ್ರದೇಶದಲ್ಲಿ ಶಾಸನಗಳು ದೊರೆಯುವ ಕಾಲದಿಂದ ಅಂದರೆ ಮೌರ್ಯರಿಂದ ಹಿಡಿದು ಚಿತ್ರದುರ್ಗ ಪಾಳೆಗಾರರ ಕಾಲದವರೆಗೂ ಆಳ್ವಿಕೆ ನಡೆಸಿದ ವಿವಿಧ ರಾಜವಂಶಗಳ ಪರಿಚಯವನ್ನು ಇಲ್ಲಿ ತಿಳಿಯಬಹುದು. ವಿವಿಧ ಕಾಲಘಟ್ಟಗಳಲ್ಲಿ ಕರ್ನಾಟಕವನ್ನಾಳಿದ ಪ್ರಮುಖ ರಾಜಮನೆತನಗಳ ಸಾಮ್ರಾಜ್ಯದೊಳಗೆ ಈ ಭಾಗವು ಸೇರಿತು. ಕೆಲವು ಆಡಳಿತ ವಿಭಾಗಗಳಿಂದಲೂ ಈ ವಿಷಯ ದೃಢಪಡುತ್ತದೆ. ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಈ ಪರಿಸರದಲ್ಲಿ ಹೊಯ್ಸಳರು, ವಿಜಯನಗರದ ಅರಸರು ಮತ್ತು ಹರತಿ ಪಾಳೆಗಾರರು ಹಾಗೂ ಚಿತ್ರದುರ್ಗ ಪಾಳೆಗಾರರು ಮತ್ತು ಮೈಸೂರು ಒಡೆಯರು ಆಳ್ವಿಕೆಯನ್ನು ನಡೆಸಿದ್ದಕ್ಕೆ ಆಧಾರಗಳು ಸಿಗುತ್ತವೆ. ಇವರಲ್ಲಿ ಚಿತ್ರದುರ್ಗ ಪಾಳೆಗಾರರು ಪ್ರಮುಖರಾಗಿದ್ದಾರೆ.

೨.೪ ರಾಜಕೀಯ ಇತಿಹಾಸ

ಮೌರ್ಯ

ಉತ್ತರ ಭಾರತದಲ್ಲಿ ಪ್ರಪ್ರಥಮವಾಗಿ ಐತಿಹಾಸಿಕ ಸಾಮ್ರಾಜ್ಯಕ್ಕೆ ಅಡಿಗಲ್ಲು ಹಾಕಿದ ಮೌರ್ಯರು ತಮ್ಮ ಸಾಮ್ರಾಜ್ಯವನ್ನು ಕುಂತಲ ಸೀಮೆಯ ಭೀಮಾ ಮತ್ತು ವೇದಾವತಿ

ನದಿಗಳು ಮಧ್ಯದಲ್ಲಿದ್ದು ಘಟ್ಟಗಳನ್ನು ಸರಹದ್ದುಗಳನ್ನಾಗಿ ಹೊಂದಿದ್ದಿತು. ಇದರಲ್ಲಿ ಚಿತ್ರದುರ್ಗ ಜಿಲ್ಲೆಯ ಪ್ರದೇಶವು ಸೇರಿತ್ತೆಂಬುದಕ್ಕೆ ನಮಗೆ ಮೊಳಕಾಲ್ಮೂರು ತಾಲೂಕಿನಲ್ಲಿ ದೊರೆತ ಅಶೋಕನ ಶಾಸನಗಳು ಆಧಾರಗಳಾಗಿವೆ.[೨೨] ಕುಂತಲ ದೇಶವನ್ನು ಆಳಿದವರಲ್ಲಿ ನಂದರು ಮೊದಲಿಗರೆಂಬ ಅಭಿಪ್ರಾಯವಿದೆ. ಚಿತ್ರದುರ್ಗ ಅದರ ಸುತ್ತಲೂ ಇದ್ದ ಪ್ರದೇಶಗಳು ಕ್ರಿ.ಪೂ.೬ ನೆಯ ಶತಮಾನದಿಂದಲೂ ಔತ್ತರೇಯರ ಆಳ್ವಿಕೆಗೆ ಒಳಪಟ್ಟಿದ್ದವೆಂದು ಹೇಳಬಹುದು. ನಂದರು, ಮೌರ್ಯರು ಅನುಕ್ರಮವಾಗಿ ಈ ಭಾಗದ ಒಡೆಯರಾದರು.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನಲ್ಲಿ ದೊರೆತಿರುವ ಅಶೋಕನ ಶಾಸನಗಳು ಮೌರ್ಯರ ಆಳ್ವಿಕೆಯನ್ನು ಅಧಿಕೃತವಾಗಿ ಸ್ಪಷ್ಟಪಡಿಸುವ ಆಧಾರಗಳಾಗಿವೆ. ಅಶೋಕನ ಎರಡು ಮತ್ತು ಹದಿಮೂರನೆಯ ಶಾಸನಗಳು ದಕ್ಷಿಣ ರಾಜ್ಯಗಳ ಹೆಸರುಗಳನ್ನು ತಿಳಿಸುತ್ತವೆ. ಅವು ಬ್ರಹ್ಮಗಿರಿಯ ಸಿದ್ಧಾಪುರ, ಜಟಿಂಗ ರಾಮೇಶ್ವರದಲ್ಲಿ ಮೌರ್ಯ ಸಾಮ್ರಾಜ್ಯದ ಗಡಿಗಳನ್ನು ಸೂಚಿಸುವ ಗುರುತುಗಳಾಗಿವೆ ಎನ್ನುವುದು ಚರಿತ್ರೆಕಾರರಾದ ಅ.ಸುಂದರ ಅವರ ಅಭಿಪ್ರಾಯ.[೨೩] ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ಮೌರ್ಯ ಸಾಮ್ರಾಜ್ಯವು ಮೊಳಕಾಲ್ಮೂರು ತಾಲೂಕಿನ ಕೆಲವು ಭಾಗಗಳಲ್ಲದೆ ಜಿಲ್ಲೆಯ ಪೂರ್ಣಭಾಗವನ್ನು ಒಳಗೊಂಡಿದ್ದಾಗಿ ತಿಳಿದುಕೊಳ್ಳಬಹುದು.

ಇದರಿಂದ ಪ್ರಸ್ತುತ ಅಧ್ಯಯನ ಪ್ರದೇಶವಾದ ಹಿರಿಯೂರು ಪಟ್ಟಣ ಸಹ ಮೌರ್ಯ ಸಾಮ್ರಾಜ್ಯದಲ್ಲಿತ್ತು ಎಂದು ಹೇಳಬಹುದು. ಬ್ರಹ್ಮಗಿರಿಯ ಸಮೀಪದಲ್ಲಿ ಇಟ್ಟಿಗೆಯ ಕಟ್ಟಡ, ಚೈತ್ಯಾಲಯ ಮತ್ತು ಮೌರ್ಯರ ಕಾಲದ ಅನೇಕ ಅವಶೇಷಗಳು ದೊರೆತಿವೆ. ಇಸಿಲ ನಗರವು ಇಲ್ಲೇ ಇದ್ದ ನಗರವೆಂಬುದಕ್ಕೆ ಪ್ರಮುಖ ಆಧಾರಗಳು. ಈ ಪ್ರದೇಶದಲ್ಲಿ ದೊರೆತ ಅವಶೇಷಗಳು ಅಶೋಕನ ಕಾಲಕ್ಕೆ ಸೇರಿದ್ದವು ಎನ್ನುವುದು ಎಂ.ಹೆಚ್.ಕೃಷ್ಣ, ಮಾರ್ಟಿಮರ್ ವೀಲ್ಹರ್, ಮೊದಲಾದ ಪ್ರಾಕ್ತನಶಾಸ್ತ್ರಜ್ಞರ ಅಭಿಪ್ರಾಯ. ಹಾಗೆಯೇ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಪ್ರದೇಶವು ಸಹ ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದು ಅದರ ದಕ್ಷ ಆಡಳಿತ ಪದ್ಧತಿ ಮೌರ್ಯರ ಸಾಂಸ್ಕೃತಿಕ ಪರಂಪರೆಯ ವ್ಯಾಪ್ತಿಗೆ ಒಳಪಟ್ಟಿತ್ತು.

ಶಾತವಾಹನ

ಕರ್ನಾಟಕದ ಚಾರಿತ್ರಿಕ ಯುಗದಲ್ಲಿ ಮೊಟ್ಟಮೊದಲಿಗೆ ಅಸ್ತಿತ್ವಕ್ಕೆ ಬಂದ ರಾಜ್ಯ ಮತ್ತು ಸಾಮ್ರಾಜ್ಯಗಳಲ್ಲಿ ಶಾತವಾಹನ ಸಾಮ್ರಾಜ್ಯ ಪ್ರಮುಖವಾದುದು. ಶಾತವಾಹನರು ಮೊದಲಿಗೆ ಮೌರ್ಯರ ಸಾಮಂತರಾಗಿದ್ದು ಅವರ ನಂತರ ದಕ್ಷಿಣ ಭಾರತದಲ್ಲಿ ಸ್ವತಂತ್ರರಾದರು. ಅವರ ಸಾಮ್ರಾಜ್ಯಗಳಲ್ಲಿ ಕರ್ನಾಟಕವು ಮೊದಲ ಭಾಗವಾಗಿದ್ದು ಅವರು ದಖ್ಖನ್ನಿನಲ್ಲಿ ಮಾತ್ರವಲ್ಲದೆ ಉತ್ತರ ಭಾರತದ ಹಲವು ಪ್ರದೇಶಗಳ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿ ಉತ್ತರ ಭಾರತ

ಮತ್ತು ದಕ್ಷಿಣ ಭಾರತವನ್ನು ಒಂದುಗೂಡಿಸಲು ಪ್ರಯತ್ನಿಸಿದರು. ಶಾತವಾಹನರು ಕ್ರಿ.ಪೂ.೨೩೫ ರಿಂದ ಕ್ರಿ.ಶ.೨೧೫ ವರೆಗೆ ಸುಮಾರು ೪೫೦ ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದರೆಂದು ಹೇಳಲಾಗುತ್ತಿದೆ.

ಅವರ ಸಾಮ್ರಾಜ್ಯ ಉತ್ತರದಲ್ಲಿ ಸಾಂಚಿಯಿಂದ ಹಿಡಿದು ದಕ್ಷಿಣದಲ್ಲಿ ಕೊಂಕಣದವರೆಗೆ ಮತ್ತು ಪೂರ್ವ ಪಶ್ಚಿಮಗಳ ಸಮುದ್ರದವರೆಗೂ ವಿಸ್ತರಿಸಿತ್ತು ಎನ್ನಲಾಗಿದೆ. ಶಾತವಾಹನ ಸಂತತಿಯಲ್ಲಿ ಗೌತಮಿಪುತ್ರ ಶಾತಕರ್ಣಿ, ವಸಿಷ್ಠಪುತ್ರ, ಯಜ್ಞಶ್ರೀ ಶಾತಕರ್ಣಿ ಮುಂತಾದವರು ಪ್ರಖ್ಯಾತ ದೊರೆಗಳು. ಸಾಮ್ರಾಜ್ಯದ ಪ್ರಗತಿ ಮತ್ತು ವಿಖ್ಯಾತಿಗೆ ಕಾರಣರಾದವರು. ಇವರ ಆಳ್ವಿಕೆಯ ಕಾಲದಲ್ಲಿ ಪಾಶ್ಚಿಮಾತ್ಯ ರಾಜ್ಯಗಳೊಂದಿಗೆ ವ್ಯಾಪಾರ ಮತ್ತು ವಾಣಿಜ್ಯ ಅಭಿವೃದ್ಧಿ ಪಡೆದು ದೇಶವು ಸಂಪದ್ಭರಿತವಾಗಿತ್ತು.

ಕರ್ನಾಟಕದ ಪ್ರಮುಖ ರಾಜವಂಶದವರಾದ ಶಾತವಾಹನರು ತಮ್ಮನ್ನು ಕುಂತಲ ಸ್ವಾಮಿಗಳೆಂದು ಕರೆದುಕೊಂಡಿದ್ದುಂಟು. ಈ ರಾಜವಂಶದ ೩೦ ಮಂದಿ ದೊರೆಗಳ ಬಗೆಗೆ ದೊರೆತಿರುವ ಶಾಸನಗಳು ೨೦ಕ್ಕಿಂತಲೂ ಹೆಚ್ಚಿರಬಹುದು. ಚಿತ್ರದುರ್ಗ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ದೊರೆತ ಉತ್ತಮ ಜಾತಿಯ ಜಾಸ್ಪರ್, ಕಾರ್ನೆಲಿಯಸ್, ಆಗೇಟ್ ಮುಂತಾದ ಶಿಲೆಗಳು, ಮಣಿಗಳು, ದಂತ, ಶಂಖ, ಸುಟ್ಟಮಣ್ಣಿನ, ಗಾಜಿನ ನಾನಾ ಬಗೆಯ ಮಣಿಗಳು ಶಾತವಾಹನರ ಸಾಮಾಜಿಕ ಸಂಸ್ಕೃತಿಗೆ ಹಿಡಿದ ಕನ್ನಡಿಯಂತಿವೆ. ಆ ಕಾಲದಲ್ಲಿ ವ್ಯಾಪಾರ ವಾಣಿಜ್ಯಗಳಲ್ಲಿ ನಾಣ್ಯ ಚಲಾವಣೆಯಲ್ಲಿತ್ತೆನ್ನುವುದು ಸ್ಪಷ್ಟವಾಗಿದೆ. ಎಂ.ಹೆಚ್.ಕೃಷ್ಣ ಅವರಿಗೆ ಬೆಳ್ಳಿ, ಸೀಸದ ಮೂವ್ವತ್ತಕ್ಕೂ ಹೆಚ್ಚು ನಾಣ್ಯಗಳು ದೊರೆತಿವೆ. ಬೆಳ್ಳಿ, ಸೀಸ, ತಾಮ್ರ, ತವರ ಮತ್ತು ಮಿಶ್ರಿತ ಲೋಹ ಮುಂತಾದವುಗಳಲ್ಲಿ ಟಂಕಿಸಿದ ನಾಣ್ಯಗಳು ಈ ಭಾಗದಲ್ಲಿ ಆಳ್ವಿಕೆ ಮಾಡಿದ ಶಾತವಾಹನರ ಆರ್ಥಿಕ ಸ್ಥಿತಿಗತಿಯನ್ನು ಸೂಚಿಸುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಚಿತ್ರದುರ್ಗ ಜಿಲ್ಲೆಯ ಹಾಗೂ ಪ್ರಸ್ತುತ ಅಧ್ಯಯನ ಪ್ರದೇಶದ ಸುತ್ತಮುತ್ತಲಿನ ಶಾತವಾಹನರ ಆಳ್ವಿಕೆ ಇದ್ದಿತ್ತೆಂದು ಹೇಳಬಹುದು. ಕ್ರಿ.ಶ. ಸುಮಾರು ೯೦೦ರ ತರುವಾಯ ಶಾತವಾಹನರ ಸಾಂಸ್ಕೃತಿಕ ಅವಶೇಷಗಳು ದೊರೆತಿರುವುದರಿಂದ ಬಹುಶಃ ಚಂದ್ರವಳ್ಳಿ ಅವರ ರಾಜಧಾನಿಗಳಲ್ಲಿ ಒಂದಾಗಿತ್ತೆಂದು ಹೇಳಬಹುದು.[೨೪] ಹಾಗೆಯೇ ಪ್ರಸ್ತುತ ಅಧ್ಯಯನ ಪ್ರದೇಶವಾದ ಹಿರಿಯೂರು ಪಟ್ಟಣದ ಪರಿಸರದಲ್ಲಿ ಶಾತವಾಹನರ ಶಾಸನಗಳು ಅಥವಾ ಯಾವುದೇ ತರಹದ ಕುರುಹುಗಳು ಸಿಗದೇ ಇದ್ದರೂ ಚಿತ್ರದುರ್ಗ ಸುತ್ತಮುತ್ತಲಿನಲ್ಲಿ ಇವರ ಕುರುಹುಗಳು ದೊರೆತಿರುವುದರಿಂದ ಪ್ರಾಯಶಃ ಈ ಪ್ರದೇಶವೂ ಇವರ ಆಳ್ವಿಕೆಗೆ ಒಳಪಟ್ಟಿರಬಹುದೆಂದು ಹೇಳಬಹುದು.

ಕದಂಬ

ಶಾತವಾಹನ ಹಾಗೂ ಚುಟು ಅರಸರ ನಂತರ ಈ ಪರಿಸರ ಕದಂಬರ ಆಳ್ವಿಕೆಗೆ ಒಳಪಟ್ಟಿದ್ದನ್ನು ಕಾಣುತ್ತೇವೆ. ಶಾತವಾಹನರ ಪತನದ ನಂತರ ಅವರ ಸಾಮ್ರಾಜ್ಯವು ಅನೇಕ ಚಿಕ್ಕಪುಟ್ಟ ಆಡಳಿತ ವಿಭಾಗದಲ್ಲಿ ಹರಿದುಹೋಯಿತು. ವಾಯವ್ಯದಲ್ಲಿ ಆಭೀರರು ಮತ್ತು ತ್ರೈಕೂಟರು, ಪೂರ್ವದಲ್ಲಿ ರಾಷ್ಟ್ರಕೂಟರು, ಚುಟುಗಳು ಹಾಗೂ ನಾಗರಸರು, ದಕ್ಷಿಣದಲ್ಲೂ ಕದಂಬರು ಮತ್ತು ಪಲ್ಲವರು ಏಳಿಗೆಗೆ ಬಂದರು. ಹೀಗೆ ಶಾತವಾಹನರ ನಂತರ ಪ್ರಸ್ತುತ ಅಧ್ಯಯನ ಪ್ರದೇಶವು ಸಹ ಕದಂಬರ ಆಳ್ವಿಕೆಗೆ ಒಳಪಟ್ಟಿದ್ದನ್ನು ನೋಡಬಹುದು. ವೈಜಯಂತಿಪುರ ಅಥವಾ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಕದಂಬರು ಉತ್ತರ ಕನ್ನಡ, ಧಾರವಾಡ, ಹಾವೇರಿ, ಬೆಳಗಾವಿ, ದಾವಣಗೆರೆ ಹಾಗೂ ಚಿತ್ರದುರ್ಗದ ಸುತ್ತಮುತ್ತಲಿನ ಭೂ ಪ್ರದೇಶವನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಂಡಿದ್ದರು. ಹಿರಿಯೂರು ಪರಿಸರದಲ್ಲಿ ಕದಂಬರಿಗೆ ಸಂಬಂಧಿಸಿದಂತಹ ಶಾಸನಗಳು ದೊರೆಯದೇ ಇದ್ದರೂ ಅವರ ಕಾಲದ ಪ್ರಮುಖ ಸಂಗತಿಗಳನ್ನು ತಿಳಿಸುವ ಕುರುಹುಗಳೂ ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಕೆಲವೇ ಶಾಸನಗಳಿಂದ ತಿಳಿಯಬಹುದಾಗಿದೆ.

ಕದಂಬರ ರಾಜ್ಯ ಸ್ಥಾಪಕನಾದ ಮಯೂರಶರ್ಮನ ಏಕೈಕ ಶಿಲಾಶಾಸನ ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ದೊರೆತಿದೆ. ಈ ಶಾಸನವನ್ನು ಕುರಿತು ಅಧ್ಯಯನ ನಡೆಸಿದ ಎಂ.ಹೆಚ್.ಕೃಷ್ಣ ಅವರು ಶಾಸನದ ಭಾಷೆ ಪ್ರಾಕೃತ ಎಂದು. ಇದರ ಕಾಲಮಾನ ಕ್ರಿ.ಶ.೨೫೮ ಎಂದು ನಿರ್ಧರಿಸಿದ್ದಾರೆ.[೨೫] ಮೂರು ಸಾಲುಗಳಲ್ಲಿರುವ ಈ ಶಾಸನವು ಈ ಪ್ರದೇಶದಲ್ಲಿ ಒಂದು ಕೆರೆಯನ್ನು ನಿರ್ಮಿಸಿದ್ದು ಹಾಗೂ ಅನೇಕ ದಿಗ್ವಿಜಯಗಳನ್ನು ತಿಳಿಸುತ್ತಾರೆ. ತ್ರೈಕೂಟ, ಆಭೀರ, ಪಲ್ಲವ, ಪಾರಿಯಾತ್ರಿಕ, ಶಕಸ್ತಾನ, ಶೈಯಂದಕ ಹಾಗೂ ಮೋಕರೀಣ ಹೀಗೆ ಪಶ್ಚಿಮ ಭಾರತದ ಅನೇಕ ಪ್ರದೇಶಗಳನ್ನು ವಶಪಡಿಕೊಂಡಿದ್ದನೆಂದು ಎಂ.ಹೆಚ್.ಕೃಷ್ಣ ಅವರು ಅಭಿಪ್ರಾಯಪಟ್ಟಿದ್ದಾರೆ. ನಂತರ ಈ ಶಾಸನದ ಕಾಲ, ಭಾಷೆ ಮತ್ತು ಇದರ ವಸ್ತು ವಿಷಯವನ್ನು ಕುರಿತಂತೆ ಅನೇಕ ವಿದ್ವಾಂಸರು ಅಧ್ಯಯನ ನಡೆಸಿ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ರೀತಿಯಾಗಿ ಪ್ರಸ್ತುತ ಶಾಸನದ ಮರುಪರಿಶೀಲನೆಯಿಂದ ಬಿ.ರಾಜಶೇಖರಪ್ಪನವರು ಅಧ್ಯಯನ ನಡೆಸಿ ಮಯೂರಶರ್ಮನು ಈ ಕಾಲಕ್ಕೆ ಮಯೂರವರ್ಮನಾಗಿರಲಿಲ್ಲವೆಂದು ಶಾಸನದ ಭಾಷೆ, ಪ್ರೌಢ ಸಂಸ್ಕೃತಿ ಹಾಗೂ ಶಾಸನದ ಮೂಲ ಉದ್ದೇಶ ಇಲ್ಲಿನ ಕೆರೆಯನ್ನು ಮತ್ತಷ್ಟು ಬಲಪಡಿಸಿದುದು ಎಂದು ಅಭಿಪ್ರಾಯಪಟ್ಟಿದ್ದಾರೆ.[೨೬] ಮಯೂರಶರ್ಮನು ಅಲ್ಲೇ ಇದ್ದ ಕೆರೆಯೊಂದನ್ನು ದುರಸ್ತಿಪಡಿಸಿ ಬಲಪಡಿಸಿದ್ದನ್ನು ಹಾಗೂ ಇಲ್ಲಿನ ಕಾಡಿನ ವಾಸದ ನೆಲೆಯೊಂದನ್ನು ಮಾಡಿಕೊಂಡಿದ್ದುದಾಗಿ ತಿಳಿಸಿದ್ದಾರೆ.

ಈ ಪ್ರದೇಶದ ಸುತ್ತಮುತ್ತಲಿನ ಮೂಲ ಕದಂಬರಿಗೆ ಸಂಬಂಧಿಸಿದ ವಿವರಗಳನ್ನು ತಿಳಿಸುವ ಶಾಸನಗಳು ವಿರಳವಾದರೂ ಅವರ ಶಾಖೆಗಳನ್ನು ಕುರಿತಂತೆ ವಿವರ ನೀಡುವ ಮತ್ತಷ್ಟು ಶಾಸನಗಳು ಕಂಡುಬಂದಿವೆ.

ಬಾದಾಮಿ ಚಲುಕ್ಯ

ಈ ಪ್ರದೇಶದಲ್ಲಿ ನೇರವಾಗಿ ಬಾದಾಮಿ ಚಲುಕ್ಯರಿಗೆ ಸಂಬಂಧಿಸಿದ ಶಾಸನಗಳು ದೊರೆಯದೇ ಹೋದರೂ ಪರೋಕ್ಷವಾಗಿ ಅವರ ರಾಜಕೀಯ ಪ್ರಭಾವ ಈ ಪ್ರದೇಶದ ಮೇಲಿದ್ದಿತು. ಇದರಿಂದಾಗಿ ಈ ಪ್ರದೇಶವು ಕದಂಬ ಚಾಲುಕ್ಯರ ಸಾಂಸ್ಕೃತಿಕ ಪ್ರದೇಶವಾಗಿತ್ತು ಎಂದು ಹೇಳಬಹುದು. ಕ್ರಿ.ಶ. ೬ನೇ ಶತಮಾನದ ಆದಿಭಾಗದಿಂದ ಕ್ರಿ.ಶ.೭೫೭ ರವರೆಗೆ ಆಳ್ವಿಕೆ ನಡೆಸಿದ ಇವರು ಕರ್ನಾಟಕ ಇತಿಹಾಸಕ್ಕೆ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ತರವಾದ ಕಾಣಿಕೆಗಳನ್ನು ನೀಡಿದ್ದಾರೆ. ಇದೇ ಸಂದರ್ಭದಲ್ಲಿ ದಕ್ಷಿಣದಲ್ಲೂ ಏಳಿಗೆಗೆ ಬಂದ ಕಂಚಿಯ ಪಲ್ಲವರಿಗೂ, ಮಧುರೆಯ ಪಾಂಡ್ಯರಿಗೂ, ಬಾದಾಮಿ ಚಲುಕ್ಯರಿಗೂ ಆಗಾಗ ಘರ್ಷಣೆಗಳು ಸಂಭವಿಸಿದ್ದು, ಪಲ್ಲವರಿಗೂ ಮತ್ತು ಬಾದಾಮಿ ಚಲುಕ್ಯರಿಗೂ ಗಡಿಭಾಗದಲ್ಲಿದ್ದ ಈ ಪ್ರದೇಶವು ಅವರೀರ್ವರ ಕಾಳಗದ ಭೂ ಪ್ರದೇಶವಾಗಿತ್ತು. ಕಾಲಘಟ್ಟದ ರಾಜಕೀಯ ಪರಿಸ್ಥಿತಿಯಲ್ಲಿ ಹಿರಿಯೂರು ತಾಲೂಕು ಧರ್ಮಪುರ ಪರಿಸರದಲ್ಲಿ ಹೆಂಜೇರುವಿನ ನೊಳಂಬರು, ಉಚ್ಚಂಗಿಯ ಪಾಂಡ್ಯರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಈ ಕಾಲದ ಕೆಲವು ಶಾಸನಗಳಲ್ಲಿ ಕದಂಬಾಳಿಗೆ, ನೊಣಂಬಾಳಿಗೆ ಎಂದು ಈ ಪ್ರದೇಶವನ್ನು ಹೆಸರಿಡಲಾಗಿದೆ.[೨೭]

ಇಮ್ಮಡಿ ಪುಲಿಕೇಶಿಯ ಕಾಲಕ್ಕೆ ಈ ಭಾಗವು ಆತನ ನೇರ ಆಳ್ವಿಕೆಗೆ ಒಳಪಟ್ಟಿತ್ತು ಎನ್ನುವುದರ ಬಗ್ಗೆ ದಾವಣಗೆರೆ ತಾಲೂಕಿನ ನಲ್ಕುಂದ ಗ್ರಾಮದಲ್ಲಿ ದೊರೆತಿರುವ ತಾಮ್ರದ ಶಾಸನವೊಂದು ಬೆಳಕು ಚೆಲ್ಲುತ್ತದೆ.[೨೮] ಅಭಿನವಾದಿತ್ಯನ ಶಾಸನವೆಂದೇ ಪ್ರಸಿದ್ಧವಾದ ಈ ಶಾಸನದಲ್ಲಿ ನಲ್ಕುಂದ ಗ್ರಾಮವನ್ನು ನಲ್ಲಿಕುಡಿ ಎಂದು ಹೆಸರಿಸಲಾಗಿದೆ. ಉಚ್ಚಂಗಿ ಪರಿಸರದಲ್ಲಿರುವ ಈ ಶಾಸನವು ದಾನಶಾಸನವಾಗಿದ್ದು ಇಲ್ಲಿನ ಕುಪ್ಪಶರ್ಮನೆಂಬ ಬ್ರಾಹ್ಮಣನಿಗೆ ದಾನ ನೀಡಿದ ವಿವರಗಳನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಅಭಿನವಾದಿತ್ಯನು ತನ್ನನ್ನು ಸತ್ಯಾಶ್ರಯ ಮತ್ತು ಪರಮೇಶ್ವರ ಎಂಬುದಾಗಿ ಪೃಥ್ವಿವಲ್ಲಭ, ಮಹಾರಾಜಾಧಿರಾಜ ಎಂದು ಕರೆದುಕೊಂಡಿದ್ದಾನೆ. ಇದರಿಂದಾಗಿ ಈತನು ಪುಲಿಕೇಶಿಯ ನಂತರ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದಂತೆ ತೋರುತ್ತದೆ.

ರಾಷ್ಟ್ರಕೂಟ

ಬಾದಾಮಿ ಚಲುಕ್ಯರ ನಂತರ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ರಾಷ್ಟ್ರಕೂಟರು ಬಲಿಷ್ಠ ರಾಜಮನೆತನದವರಾಗಿದ್ದರು. ಸುಮಾರು ೨ನೇ ಶತಮಾನಗಳ ಕಾಲ ವಿಶಾಲ ಸಾಮ್ರಾಜ್ಯವನ್ನಾಳಿದ

ರಾಷ್ಟ್ರಕೂಟರು ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ಇವರ ಸಾಮ್ರಾಜ್ಯ ಎತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಮತ್ತು ಮಾಳವದಿಂದ ಪೂರ್ವದಲ್ಲಿ ಆಂಧ್ರಪ್ರದೇಶ, ವಾರಂಗಲ್ ಮತ್ತು ಕಡಪ ಜಿಲ್ಲೆಗಳವರೆಗೂ ವಿಸ್ತರಿಸಿಕೊಂಡಿತ್ತು. ಇಂತಹ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಿ ಕನ್ನಡ ಸಂಸ್ಕೃತಿ, ನಾಡುನುಡಿಗಳಿಗೆ ರಾಷ್ಟ್ರಕೂಟರು ನೀಡಿದ ಕೊಡುಗೆ ಅಮೋಘವಾದುದು. ಇವರು ಸಹ ಚಾಲುಕ್ಯರಂತೆ ಉತ್ತಮ ಹಾಗೂ ನೊಳಂಬರೊಂದಿಗೆ ವೈವಾಹಿಕ ಸಂಬಂಧಗಳನ್ನು ಹೊಂದಿದ್ದು, ಕರ್ನಾಟಕ ಸಂಸ್ಕೃತಿಗೆ ಪ್ರಮುಖ ಕೊಡುಗೆಗಳನ್ನು ನೀಡಿದ್ದಾರೆ. ಪ್ರಸ್ತುತ ಪ್ರದೇಶದಲ್ಲಿ ಇವರ ಅನೇಕ ಶಾಸನಗಳು, ವೀರಗಲ್ಲುಗಳು ಹಾಗೂ ಇನ್ನಿತರ ಅವಶೇಷಗಳು ದೊರೆಯುತ್ತಿವೆ. ಎಪಿಗ್ರಾಫಿಯ, ಕರ್ನಾಟಿಕ ಸಂಪುಟ ಹನ್ನೊಂದರಲ್ಲಿ ಇವರ ಕಾಲದ ಅನೇಕ ಶಾಸನಗಳು ಪ್ರಕಟಗೊಂಡಿವೆ. ಇವುಗಳಲ್ಲಿ ಎರಡನೇ ಗೋವಿಂದ, ಎರಡನೇ ಕೃಷ್ಣ, ಎರಡನೇ ಅಮೋಘವರ್ಷ, ಮೂರನೇ ಕೃಷ್ಣ ಹಾಗೂ ಮೂರನೇ ಕರ್ಕನ ಶಾಸನಗಳು ಪ್ರಮುಖವು. ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳಲ್ಲಿ ಮೊದಲನೆಯದು ಎರಡನೇ ಗೋವಿಂದನಿಗೆ ಸಂಬಂಧಿಸಿದ್ದು, ಈತನನ್ನು ಜಗತ್ತುಂಗ, ಪ್ರಭೂತವರ್ಷ, ಪ್ರತಾಪಲೋಕ ಮತ್ತು ಶ್ರೀವಲ್ಲಭ ಎಂಬುದಾಗಿ ಹೊಗಳಲಾಗಿದೆ.

ಚಿತ್ರದುರ್ಗ ತಾಲೂಕು ಇಸಾಮುದ್ರ ಗ್ರಾಮದಲ್ಲಿ ದೊರೆತಿರುವ ಶಾಸನವು ಕ್ರಿ.ಶ.೯೩೩ ರಲ್ಲಿ ರಚನೆಗೊಂಡಿದ್ದು, ರಾಷ್ಟ್ರಕೂಟರ ವಂಶಾವಳಿಯನ್ನು ನೀಡುತ್ತದೆ. ಇಸಾಮುದ್ರದಲ್ಲಿರುವ ಮತ್ತೆರಡು ಶಾಸನಗಳು ರಾಷ್ಟ್ರಕೂಟ ಅರಸರ ಎರಡನೇ ಅಮೋಘವರ್ಷನಿಗೆ ಸೇರಿದ್ದಾಗಿದೆ. ಈ ಪ್ರದೇಶದಲ್ಲಿ ಕನ್ನರ್ಯ್ಯ ಎಂಬ ಅರಸನು ಆಳ್ವಿಕೆ ನಡೆಸುತ್ತಿದ್ದನು ಎನ್ನುವ ವಿಷಯ ಪ್ರಸ್ತಾಪವಾಗುತ್ತದೆ. ಹಾಗೆಯೇ ಈ ಪ್ರದೇಶದಲ್ಲಿ ಅಣ್ಣಿಗ ಅಣ್ಣಯ್ಯನು ಆಳುತ್ತಿದ್ದನು. ಈತನಿಗೆ ಬೀರನೊಳಂಬ ಎನ್ನುವ ಬಿರುದು ಇದ್ದಿತು. ರಾಷ್ಟ್ರಕೂಟ ಮೂರನೇ ಕೃಷ್ಣನ ಅನೇಕ ಶಾಸನಗಳು ಈ ಪ್ರದೇಶಕ್ಕೆ ಹೊಂದಿಕೊಂಡಂತೆ ದೊರೆಯುತ್ತವೆ. ಹೀಗೆ ರಾಷ್ಟ್ರಕೂಟ ಅರಸರಿಗೆ ಸಂಬಂಧಿಸಿದ ಅನೇಕ ಶಾಸನಗಳು ಹಿರಿಯೂರು ಪರಿಸರದಲ್ಲಿ ದೊರೆಯದೇ ಇದ್ದರೂ ಇದರ ಸುತ್ತಮುತ್ತಲಿನ ಪ್ರದೇಶದಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದ ಶಾಸನಗಳು ದೊರೆತಿವೆ.[೩೦]

ಕಲ್ಯಾಣ ಚಾಲುಕ್ಯರು

ಕಲ್ಯಾಣದ ಚಾಲುಕ್ಯರು ಸುಮಾರು ಕ್ರಿ.ಶ. ೧೦ನೇ ಶತಮಾನದಿಂದ ೧೨ನೇ ಶತಮಾನದವರೆಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ವಿಶೇಷವಾಗಿ ಕರ್ನಾಟಕ ಇತಿಹಾಸದಲ್ಲಿ ಮಹತ್ತರವಾದ ಪಾತ್ರ ವಹಿಸಿದ್ದಾರೆ. ಕರ್ನಾಟಕದುದ್ದಕ್ಕೂ ಆಳ್ವಿಕೆ ನಡೆಸಿ ಹಲವಾರು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ ದಾನದತ್ತಿಗಳನ್ನು ಯುದ್ಧದ ಸನ್ನಿವೇಶಗಳನ್ನು ವಿವರಿಸುವಂತಹ ಅನೇಕ ಶಾಸನಗಳನ್ನು ರಚಿಸಿದ್ದಾರೆ. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ

ತಾಲೂಕಿನಲ್ಲಿರುವ ಬಾಗಳಿ ಕಲ್ಲೇಶ್ವರ ದೇವಾಲಯ, ನೀಲಗುಂದ ಭೀಮೇಶ್ವರ, ನಂದಿ ತಾವರೆಯ ಅಮೃತಮಾಣಿಕೇಶ್ವರ ದೇವಾಲಯ, ಇತ್ಯಾದಿ ದೇವಾಲಯಗಳು ಇವರ ಕಾಲಾವಧಿಯಲ್ಲಿ ನಿರ್ಮಾಣವಾಗಿರುವುದನ್ನು ನೋಡುತ್ತೇವೆ.

ಕಲ್ಯಾಣದ ಚಾಲುಕ್ಯರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದ ಅರಸರುಗಳೆಂದರೆ ಎರಡನೇ ಜಯಸಿಂಹ, ಸೋಮೇಶ್ವರ, ವಿಕ್ರಮಾದಿತ್ಯ, ಇತ್ಯಾದಿ ಅರಸರು ಕಲ್ಯಾಣದ ಚಾಲುಕ್ಯರಿಗೆ ಸಂಬಂಧಿಸಿದ ಶಾಸನಗಳು ಮತ್ತು ವೀರಗಲ್ಲುಗಳು ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿ ವಿರಳವಾಗಿದ್ದರೂ ಇವರಿಗೆ ಸಂಬಂಧಿಸಿದ ಕೆಲವೇ ಶಾಸನಗಳು, ವೀರಗಲ್ಲುಗಳಿಂದ ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿ ಇವರ ಆಳ್ವಿಕೆಯ ನಂಟು ಇದ್ದುದು ಸ್ಪಷ್ಟವಾಗುತ್ತದೆ.

ಕಲ್ಯಾಣ ಚಾಲುಕ್ಯರ ಶಾಸನಗಳು, ವೀರಗಲ್ಲುಗಳು ಪ್ರಸ್ತುತ ಪ್ರದೇಶದಲ್ಲಿ ನೇರವಾಗಿ ದೊರೆಯದಿದ್ದರೂ ಅವರ ಸಾಮಂತರಾಗಿ ನೊಳಂಬ, ಪಲ್ಲವ ಮತ್ತು ಪಾಂಡ್ಯರು ಈ ಭಾಗದಲ್ಲಿ ಆಳ್ವಿಕೆ ನಡೆಸಿದ್ದಾರೆ ಎನ್ನುವ ವಿವರಗಳು ದೊರೆಯುತ್ತವೆ.[೩೧] ಪ್ರಸ್ತುತ ಭಾಗದಲ್ಲಿ ದೊರೆತಿರುವ ಪ್ರಾರಂಭದ ದೇವಾಲಯಗಳು ಈ ಕಾಲಮಾನದಲ್ಲೇ ರಚನೆಗೊಂಡಿರುವುದರಿಂದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಈ ಅರಸರು ಹೆಚ್ಚು ಪ್ರಾಮುಖ್ಯತೆ ನೀಡಿರುವುದು ತಿಳಿದುಬರುತ್ತದೆ.

ನೊಳಂಬ

ಕರ್ನಾಟಕದಲ್ಲಿ ಕ್ರಿ.ಶ.೮ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಆಡಳಿತ ನಡೆಸಿದ ನೊಳಂಬರು ದಕ್ಷಿಣ ಭಾರತದ ಇತಿಹಾಸದಲ್ಲಿ ಬಹುಮುಖ್ಯ ಪಾತ್ರವಹಿಸಿದ್ದರು. ಇವರ ರಾಜಧಾನಿ ಪ್ರಸ್ತುತ ಅಧ್ಯಯನ ಪರಿಸರದ ಗಡಿಪ್ರದೇಶವಾದ ಈಗಿನ ಆಂಧ್ರಪ್ರದೇಶದ ಮಡಕಶಿರ ತಾಲೂಕಿನ ಹೆಂಜೇರು ಅಥವಾ ಹೇಮಾವತಿಯಾಗಿತ್ತು. ಆ ನಂತರ ಕ್ರಿ.ಶ. ೧೧ನೇ ಶತಮಾನದಲ್ಲಿ ಇವರು ತಮ್ಮ ರಾಜಧಾನಿಯನ್ನು ತುಂಗಭದ್ರಾ ತೀರದಲ್ಲಿರುವ ಕಂಪಲಿಗೆ ವರ್ಗಾಯಿಸಿಕೊಂಡರು. ಪ್ರಾರಂಭದಲ್ಲಿ ನೊಳಂಬಾಳಿಗೆ ಸಾಸಿರವೆಂಬ ಸಣ್ಣ ಪ್ರಾಂತ್ಯದ ಮೇಲೆ ಆಡಳಿತ ನಡೆಸಿದ್ದರು. ಈ ಪ್ರಾಂತ್ಯವು ಈಗಿನ ಚಿತ್ರದುರ್ಗ ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನೊಳಗೊಂಡಿತ್ತು. ಕಾಲಕ್ರಮೇಣ ಅಂದರೆ ಕ್ರಿ.ಶ.೯-೧೦ನೇ ಶತಮಾನದಲ್ಲಿ ಇವರ ಪ್ರಾಬಲ್ಯವು ವೃದ್ಧಿಸಿ ಇವರ ರಾಜ್ಯವೂ ವಿಸ್ತಾರಗೊಂಡು ನೊಳಂಬವಾಡಿ ೨೯೦೦ ಎಂದು ವಿಸ್ತಾರವಾದ ಪ್ರಾಂತ್ಯವಾಯಿತು. ಈ ಪ್ರಾಂತ್ಯವು ಕರ್ನಾಟಕದ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಅದಕ್ಕೆ ಸೇರಿದಂತಿರುವ ಸುತ್ತಮುತ್ತಲಿನ ಪ್ರದೇಶಗಳು ವ್ಯಾಪಿಸಿತು.[೩೨]

ತಲಕಾಡಿನ ಗಂಗರ ಕೈಕೆಳಗೆ ಆಡಳಿತವನ್ನು ಪ್ರಾರಂಭಿಸಿದ ನೊಳಂಬರು ಕಾಲಕ್ರಮೇಣ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಮಾಂಡಲಿಕರಾಗಿ ಆಳ್ವಿಕೆ ನಡೆಸಿದರು. ಚೋಳರು, ಬಾಣರು, ವೈಡುಂಬರನ್ನು ಸೆದೆಬಡಿದರು. ಗಂಗರು, ಚೋಳರು, ಪಲ್ಲವರು ಮತ್ತು ವೇಂಗಿಯ

ಚಾಲುಕ್ಯರ ವಿರುದ್ಧ ಅನೇಕ ಯುದ್ಧಗಳನ್ನು ಮಾಡಿ ವೀರರು ಎನಿಸಿಕೊಂಡವರು. ಬನವಾಸಿ ಕದಂಬರು ಹಾಗೂ ಕಲ್ಯಾಣ ಚಾಲುಕ್ಯರ ವಂಶದೊಂದಿಗೆ ವಿವಾಹ ಸಂಬಂಧ ಸಹ. ಇಷ್ಟೆಲ್ಲಾ ಕಾರ್ಯ ಚಟುವಟಿಕೆಗಳನ್ನು ನಡೆಸಿ ಭವ್ಯ ಇತಿಹಾಸದ ಭದ್ರ ಬುನಾದಿಯನ್ನು ಹಾಕಿದವರಲ್ಲೊಬ್ಬರಾಗಿದ್ದಾರೆ.

ನೊಳಂಬರು ರಾಜಕೀಯ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದಂತೆ ಹಾಗೆಯೇ ಕರ್ನಾಟಕದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಬೆಳಗಿಸಿದರು. ಇವರ ಕಾಲದಲ್ಲಿ ವಾಸ್ತುಶಿಲ್ಪ ಕಲೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಇವರ ರಾಜಧಾನಿಯಾದ ಹೇಮಾವತಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಇವರ ಕಾಲದ ಅವಶೇಷಗಳು ಈ ಪ್ರದೇಶದಲ್ಲಿ ಇಂದಿಗೂ ಅಳಿವಿನ ಅಂಚಿನಲ್ಲಿರುವುದನ್ನು ಕಾಣಬಹುದು. ಹಿರಿಯೂರು ಪರಿಸರದಲ್ಲಿಯೂ ಇವರ ಕಾಲದಲ್ಲಿ ನಿರ್ಮಿಸಿದ ದೇವಾಲಯಗಳನ್ನು ಕಾಣಬಹುದು.

ನೊಳಂಬ ಪದವು ಅವರ ವಂಶದ ಹೆಸರಾಗಿತ್ತೆಂದು ಖಚಿತವಾಗಿ ಹೇಳಬಹುದು. ಚಾಮರಾಜನಗರದ ಒಂದು ಶಾಸನದಲ್ಲಿ ರಾಜಕುಮಾರಿಯೊಬ್ಬಳು ತಾನು ನೊಳಂಬ ಮತ್ತು ಪಲ್ಲವ ಕುಲದವಳೆಂದು ಹೇಳಲ್ಪಟ್ಟಿದ್ದಾಳೆ.[೩೩] ಹಾಗೆಯೇ ಗಂಗ ಮಾರಸಿಂಹನು "ನೊಳಂಬ ಕುಲಾಂತಕ" ಎಂದು ಆತನು ನೊಳಂಬರೆಲ್ಲರನ್ನು ಕೊಂದನೆಂದು ಶಾಸನಗಳಲ್ಲಿ ವರ್ಣಿತನಾಗಿದ್ದಾನೆ. ನೊಳಂಬ ವಂಶವು ಹೇಮಾವತಿಯ ಸ್ತಂಭ ಶಾಸನದಲ್ಲಿ ಉಕ್ತವಾಗಿರುವ ಹಾಗೆ ನೊಳಂಬರ ಮೊದಲನೇ ರಾಜನಾದ ಮಂಗಳನು ಈಶ್ವರ ವಂಶಜನಾದ ಹಾಗೂ ಕಂಚಿಪತಿಯಾದ ತ್ರಿನಯಪಲ್ಲವನ ಕುಲದಲ್ಲಿ ಹುಟ್ಟಿದವನೆಂದು ಹೇಳುತ್ತದೆ. ನೊಳಂಬರ ಬಿರುದುಗಳಿಂದ ಪಲ್ಲವ ಮಲ್ಲ, ಪಲ್ಲವ ಭಯ, ಪಲ್ಲವ ಕುಲತಿಲಕ, ಪಲ್ಲವರಾಜ ಇತ್ಯಾದಿಗಳು ಮೂಲ ಪಲ್ಲವ ವಂಶದಿಂದ ಬಂದವರೆಂದು ತಿಳಿಯುತ್ತದೆ.

ಹೇಮಾವತಿಯ ಸ್ತಂಭಶಾಸನದಿಂದ ನೊಳಂಬರ ವಂಶಾವಳಿಯ ಮೊದಲ ಭಾಗವನ್ನು ಈ ರೀತಿ ತಿಳಿಯಬಹುದು. ಈಶ್ವರ ವಂಶದವನಾದ ತ್ರಿಣಯನನ ವಂಶದಲ್ಲಿ ಮಂಗಳ ನೊಳಂಬವಾಡಿ ರಾಜನು ಹುಟ್ಟಿದನು. ಈತನ ಮಗ ಸಿಂಹಪೋತ. ಇವನ ಮಗ ಚಾರುಪ್ಪೊನ್ನೆರ ಈತನ ಮಕ್ಕಳು ಅಣ್ಣಿಗನೊಳಂಬ ಮತ್ತು ಇರಿವನೊಳಂಬ. ದಿಲೀಪ ಕೊನೆಯ ಅರಸ. ದಿಲೀಪನು ಈ ಶಾಸನವನ್ನು ಕ್ರಿ.ಶ.೯೪೨ ರಲ್ಲಿ ಸ್ಥಾಪಿಸಿದನು.[೩೪] ಚಿತ್ತೂರು ಜಿಲ್ಲೆಯ ನೆಲಪಲ್ಲಿಯ ಶಾಸನದಿಂದ ಇರಿವನೊಳಂಬನ ನಂತರ ಅವನ ಮಗ ನನ್ನಿನೊಳಂಬ ಘಟಿಯಂಕಕಾರ ಪಲ್ಲವಾದಿತ್ಯನು ಆಳಿದವರೆಂದು ತಿಳಿಯುತ್ತದೆ. ಕೊನೆಯ ಅರಸನಾದ ಇರಿವನೊಳಂಬ ಘಟೆಯಂಕಕಾರ ಕಾಲಕ್ಕೆ ನೊಳಂಬರು ತಮ್ಮ ನಿಷ್ಠೆಯನ್ನು ಸಂಪೂರ್ಣವಾಗಿ ಕಲ್ಯಾಣ ಚಾಲುಕ್ಯರಿಗೆ ಮುಡಿಪಾಗಿಸಿಟ್ಟಿದರು. ಆದುದರಿಂದಾಗಿ ಇವರ ಹೆಸರುಗಳು ಅವರ ಸಮಕಾಲೀನ ಚಾಲುಕ್ಯ ರಾಜನ ಹೆಸರನ್ನೊಳಗೊಂಡಿರುತ್ತದೆ. ಬಳ್ಳಾರಿ ಜಿಲ್ಲೆಯ ಮೋರಿಗೇರಿ

ಶಾಸನದಿಂದ ಇರಿವನೊಳಂಬ ಘಟೆಯಂಕಕಾರನ ನಂತರ ಆಳಿದ ನೊಳಂಬ ದೊರೆಗಳ ಬಗ್ಗೆ ತಿಳಿಯಬಹುದು. ಇರಿವನೊಳಂಬ ಘಟೆಯಂಕಕಾರನ ಮಗ ಜಗದೇಕಮಲ್ಲ ಇರ್ಮಡಿನೊಳಂಬ ಅವನ ತಮ್ಮ ತ್ರೈಲೋಕ್ಯಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಕಡೆಯ ರಾಜನ ಕೊನೆಯ ಕಾಲ.

ಕ್ರಿ.ಶ.೧೦೫೬ ಜಯಸಿಂಘದೇವನ ರಾಜನು ಚಾಲುಕ್ಯರ ಕೈಕೆಳಗೆ ಆಳ್ವಿಕೆ ಮಾಡಿದನು. ಶಾಸನದಲ್ಲಿ ಈತನು ಸೋಮೇಶ್ವರನ ಪುತ್ರನು ಹಾಗೂ ೬ನೇ ವಿಕ್ರಮಾದಿತ್ಯನ ತಮ್ಮನೆಂದು ಹೇಳಲ್ಪಟ್ಟಿದೆ. ಈತನಿಗೂ ಮತ್ತು ಮೂಲ ನೊಳಂಬ ವಂಶಕ್ಕೂ ಯಾವ ರೀತಿಯ ಸಂಬಂಧವಿದ್ದಿತೆಂಬುದನ್ನು ಹೇಳಲು ಅಸಾಧ್ಯ. ಆದುದರಿಂದ ಕ್ರಿ.ಶ.೧೦೫೫ರಲ್ಲಿ ತ್ರೈಲೋಕ್ಯಮಲ್ಲನೊಂದಿಗೆ ಮೂಲ ನೊಳಂಬ ಸಂತತಿಯು ಮುಕ್ತಾಯವಾಯಿತು ಎಂದು ಹೇಳಬಹುದು.

ನೊಳಂಬ ಕಾಲದ ನಂತರದ ಶಾಸನಗಳಲ್ಲಿ ಅನೇಕ ನೊಳಂಬರ ಹೆಸರುಗಳುಳ್ಳ ಅಧಿಕಾರಿಗಳು ಕಲ್ಯಾಣ ಚಾಲುಕ್ಯರ, ಹೊಯ್ಸಳರ, ಚೋಳ, ವಿಜಯನಗರ ಅರಸರ ಕೈಕೆಳಗೆ ಯುದ್ಧಗಳಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಕಾಣುತ್ತೇವೆ. ಇವರ ಮೂಲಗಳನ್ನು ಹುಡುಕಿ ಅವರಿಗೂ ಮೂಲ ನೊಳಂಬ ರಾಜವಂಶಕ್ಕೆ ಇದ್ದ ಸಂಬಂಧವನ್ನು ಹೇಳುವುದಕ್ಕೆ ಆಗುವುದಿಲ್ಲ. ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ನೊಳಂಬರ ರಾಜವಂಶಕ್ಕೆ ಸಂಬಂಧವನ್ನು ಹೊಂದಿದ್ದು ನೊಳಂಬರ ಪತನದ ನಂತರ ಚದುರಿ ಹೋಗಿ ಇತರ ರಾಜರ ಆಶ್ರಯದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದರು ಎಂದು ಹೇಳಬಹುದು. ಮೇಲೆ ತಿಳಿಸಲಾದ ನೊಳಂಬ ರಾಜರ ಹೆಸರುಗಳಲ್ಲದೆ ಅವರ ವಂಶದ ಇತರ ರಾಜಕುಮಾರರ ಹೆಸರುಗಳನ್ನು ಶಾಸನಗಳಲ್ಲಿ ಕಾಣುತ್ತೇವೆ. ಅವರೆಂದರೆ ಮಯ್ದು ನೊಳಂಬ, ಅಂಕನಾನ, ಇರುಳಚೋರ, ಅಯ್ಯಪ್ಪದೇವಗನ್ನರ ಇತ್ಯಾದಿ ನೊಳಂಬರ ಪೂರ್ವ ಇತಿಹಾಸದ ಬಗ್ಗೆ ಹೆಚ್ಚಿನ ಮಾಹಿತಿಗಳು ನಮಗೆ ದೊರೆತಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಹಿರಿಯೂರು, ಚಳ್ಳಕೆರೆ ತಾಲೂಕುಗಳಲ್ಲಿ ಕ್ರಿ.ಶ.೮೧೫ ನೊಳಂಬರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದಾರೆ. ಚಿಕ್ಕಮಧುರೆಯ ಶಾಸನವು ಸಿಂಹಪೋತನ ಮಗ ಪಲ್ಲವಾದಿ ರಾಜ ಮತ್ತು ಅವನ ಮಗ ಪಲ್ಲವಮಲ್ಲ ರಾಷ್ಟ್ರಕೂಟರ ಸಾಮಂತರಾಗಿ ಆಡಳಿತ ನಡೆಸುತ್ತಿದ್ದುದು ತಿಳಿಸುತ್ತದೆ.

ಪ್ರಸ್ತುತ ಅಧ್ಯಯನ ಪ್ರದೇಶದ ಸುತ್ತಮುತ್ತಲಿನಲ್ಲಿ ನೊಳಂಬರಿಗೆ ಸಂಬಂಧಿಸಿದ ಶಾಸನಗಳು, ದೇವಾಲಯಗಳು, ವೀರಗಲ್ಲುಗಳು ದೊರೆತಿದ್ದು ಇವರು ಈ ಪ್ರದೇಶದಲ್ಲಿ ತಮ್ಮ ರಾಜಕೀಯ ಪ್ರಾಬಲ್ಯ ಮೆರೆದರು ಎಂದು ಹೇಳಬಹುದು. ಅಂದರೆ ಕ್ರಿ.ಶ.೯೫ರ ನೊಳಂಬರ ಆಳ್ವಿಕೆ ಕುರಿತು ಶಾಸನವು ಇದನ್ನು ಹಿರಿಯೂರು ಮರಡಿಪುರಗಳ ಶಾಸನದಲ್ಲಿ (ಕ್ರಿ.ಶ. ೧೦೬೦–

೧೧೫೦) ಹಾಗೂ ಕವಿ ಬಬ್ಬೂರರಂಗನು ತನ್ನ ಕಾವ್ಯದಲ್ಲಿ 'ಘನಪುರಿ' ಎಂದೆ ಉಲ್ಲೇಖಿಸಿದ್ದಾರೆ. ಸುತ್ತಮುತ್ತ ಹೊನ್ನು ದೊರೆಯುತ್ತಿದ್ದುದರಿಂದ 'ಹೊನ್ನ ಹಿರಿಯೂರು' ಎಂದು ಹೆಸರಾಗಿತ್ತು ಹಾಗೂ 'ಹಿರಿಯ ಕೆರೆ' ಎಂದು ಮುಂದೆ ಶಾಶ್ವತವಾಗಿ ಹಿರಿಯೂರು ಎಂದು ಹೆಸರು ಉಳಿಯಿತು. ಹಾಗಾಗಿ ಇಲ್ಲಿನ ಪರಿಸರದ ಆಳ್ವಿಕೆಗೆ ಪುಷ್ಠಿ ನೀಡುತ್ತದೆ.[೩೫] ಚಿತ್ರದುರ್ಗ ಜಿಲ್ಲೆಯಲ್ಲಿ ಹಲವು ಶತಮಾನಗಳವರೆಗೆ ವೈಭವದಿಂದ ಆಳಿದ ನೊಳಂಬರು ಕರ್ನಾಟಕದ ಸಾಮಂತ ರಾಜಮನೆತನಗಳಲ್ಲಿ ಮಹತ್ವದ ಸ್ಥಾನ ಪಡೆದಿದ್ದರು. ಇವರ ಆಳ್ವಿಕೆ ಪ್ರಸ್ತುತ ಪ್ರದೇಶಕ್ಕೆ ಸೀಮಿತವಾಗಿರದೇ ಸುತ್ತಮುತ್ತಲಿನ ಜಿಲ್ಲೆಗಳಿಗೂ ವಿಸ್ತರಿಸಿದ್ದಿತು. ಇವರ ಆಳ್ವಿಕೆ ಪ್ರಸ್ತುತ ಪ್ರದೇಶಕ್ಕೆ ಸೀಮಿತವಾಗಿರದೇ ಸುತ್ತಮುತ್ತಲಿನ ಜಿಲ್ಲೆಗಳಿಗೂ ವಿಸ್ತರಿಸಿದ್ದಿತು ಎನ್ನುವ ಸಂಗತಿ ದೊರೆತಿರುವ ಶಾಸನಗಳ ಆಧಾರಗಳಿಂದ ತಿಳಿದುಕೊಳ್ಳಬಹುದಾಗಿದೆ. ನೊಳಂಬರು ಬಹುತೇಕ ಶಾಸನಗಳನ್ನು ಕನ್ನಡದಲ್ಲಿಯೇ ರಚಿಸಿ ಕನ್ನಡ ನಾಡು, ನುಡಿ, ಸಂಸ್ಕೃತಿ ಬೆಳವಣಿಗೆಗೆ ಶ್ರಮಿಸಿದ ನೊಳಂಬರ ಸ್ಥಾನ ಕರ್ನಾಟಕದ ಇತಿಹಾಸದಲ್ಲಿ ಅದ್ವಿತೀಯವಾಗಿದೆ.

ಈ ರೀತಿಯಾಗಿ ನೊಳಂಬರು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದು ಯಥೇಚ್ಛವಾಗಿ ನೊಳಂಬರಿಗೆ ಸಂಬಂಧಿಸಿದಂತೆ ಶಾಸನಗಳು ಈ ಪ್ರದೇಶದಲ್ಲಿ ದೊರೆಯುತ್ತವೆ. ಇವರು ಉತ್ತಮವಾದ ಆಳ್ವಿಕೆ ನಡೆಸಿದ್ದರೆನ್ನುವುದು ಸಹ ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.[೩೬]

ಹೊಯ್ಸಳರು

ಕರ್ನಾಟಕ ರಾಜಮನೆತನಗಳಲ್ಲಿ ಹೊಯ್ಸಳರ ಸ್ಥಾನ ಮಹತ್ತರವಾದದು. ಸುಮಾರು ಕ್ರಿ.ಶ.೧೨ ನೇ ಶತಮಾನದಲ್ಲಿ ಆದಿಭಾಗದಿಂದ ಕ್ರಿ.ಶ. ೧೪ನೇ ಶತಮಾನದ ಮಧ್ಯಭಾಗದವರೆಗೆ ಆಳ್ವಿಕೆ ನಡೆಸಿದ ಇವರು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಿಕ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದರ ಮೂಲಕ ವಿಶಿಷ್ಟ ರೀತಿಯ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆಯನ್ನು ತಿಳಿಯಲು ಸುಮಾರು ಐವತ್ತಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಅವುಗಳ ಆಧಾರದಿಂದ ಹೊಯ್ಸಳರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಇಡೀ ಜಿಲ್ಲೆಯನ್ನು ಆಕ್ರಮಿಸಿಕೊಂಡಿದ್ದು ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಕೆರೆ, ಕಾಲುವೆ, ದೇವಾಲಯ, ಅಗ್ರಹಾರ, ಇತ್ಯಾದಿಗಳನ್ನು ಕುರಿತಾಗಿ ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳು ವಿವರಣೆ ನೀಡುತ್ತವೆ.[೩೭]

ಹೊಯ್ಸಳ ಪ್ರಭು ಇಮ್ಮಡಿ ಬಲ್ಲಾಳನ ಶಾಸನವು ಈ ಜಿಲ್ಲೆಯಲ್ಲಿ ದೊರೆತ ಹೊಯ್ಸಳ ಮನೆತನದ ಪ್ರಥಮ ಶಾಸನವಾಗಿದೆ. ಇಮ್ಮಡಿಬಲ್ಲಾಳನ ಕಾಲದ ಈ ಪ್ರದೇಶದಲ್ಲಿ ಎರಡು ಶಾಸನಗಳು (ಹಿರಿಯೂರು-೭೦, ಹೊಳಲ್ಕೆರೆ-೨೮) ದೊರೆತಿವೆ. ಈ ಶಾಸನಗಳು ಅವನ

ಕಾಲದ ರಾಜಕೀಯ, ಸಾಮಾಜಿಕ ಮತ್ತಿತರ ಸಂಗತಿಗಳನ್ನು ಕುರಿತು ವಿವರಣೆ ನೀಡುತ್ತದೆ. ಪ್ರಸ್ತುತ ಪ್ರದೇಶದಲ್ಲಿ ಅಂದರೆ ಹಿರಿಯೂರು ಪಟ್ಟಣದ ಕ್ರಿ.ಶ.೧೨೯೧–೧೩೪೨ರವರೆಗೆ ಹೊಯ್ಸಳರ ಆಳ್ವಿಕೆ ಒಳಪಟ್ಟಿದ್ದು, ಮುಮ್ಮಡಿ ಬಲ್ಲಾಳನ ಕಾಲದಲ್ಲಿ ತುಂಬಾ ಪ್ರಖ್ಯಾತವಾಗಿತ್ತು. ಹಾಗಾಗಿ ಈ ಪ್ರದೇಶವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು.[೩೮]

ಸೇವುಣರು

ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಕದಂಬ, ಚಾಲುಕ್ಯರು, ರಾಷ್ಟ್ರಕೂಟರ ಮನೆತನಗಳಂತೆ ದೇವಗಿರಿಯ ಸೇವುಣರು ಕೆಲವು ಕಾಲ ಇಲ್ಲಿ ಆಳ್ವಿಕೆ ನಡೆಸಿದ್ದಾರೆ ಎನ್ನುವುದು ತಿಳಿದುಬರುತ್ತದೆ. ಇವರಿಗೆ ಸಂಬಂಧಿಸಿದ ಶಾಸನಗಳು ದೊರೆಯದೇ ಇದ್ದರೂ ಚಿತ್ರದುರ್ಗ ಜಿಲ್ಲೆಯಾದ್ಯಂತ ದೊರೆತಂತಹ ಶಾಸನಗಳ ಆಧಾರದಿಂದ ಈ ಪ್ರದೇಶವು ಸೇವುಣರಿಗೆ ಸಂಬಂಧಿಸಿದ್ದಾಗಿತ್ತೆಂದು ಹೇಳಬಹುದು. ಸೇವುಣರ ಆಳ್ವಿಕೆಯ ಅವಧಿಯಲ್ಲಿ ಇತರ ರಾಜ ಮನೆತನಗಳೊಂದಿಗೆ ಇಟ್ಟುಕೊಂಡಿದ್ದ ಸಂಬಂಧಗಳು ಮತ್ತು ಇತ್ಯಾದಿಗಳ ಬಗ್ಗೆ ಅವರ ಶಾಸನಗಳಿಂದ ತಿಳಿದುಕೊಳ್ಳಬಹುದಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸೇವುಣರ ಆಳ್ವಿಕೆಯ ಬಗ್ಗೆ ಸುಮಾರು ೨೦ ಶಾಸನಗಳು ದೊರೆತಿವೆ. ಅವುಗಳಲ್ಲಿ ಅವರ ರಾಜಕೀಯ ಮತ್ತಿತರ ವಿವರಗಳ ಬಗ್ಗೆ ತಿಳಿಯಬಹುದಾಗಿದೆ. ಈ ಜಿಲ್ಲೆಯ ಕೆಲವು ಭಾಗಗಳು ಇವರ ಅಧೀನಕ್ಕೆ ಒಳಪಟ್ಟಿವೆ ಎಂದು ಈ ಶಾಸನಗಳ ಸಹಾಯದಿಂದ ಸ್ಪಷ್ಟಪಡಿಸಬಹುದು. ಕೆಲವು ಶಾಸನಗಳಲ್ಲಿ ಸೇವುಣರು ತಮ್ಮನ್ನು ಯಾದವರೆಂದು ಕರೆದುಕೊಂಡಿದ್ದಾರೆ. ಆದರೆ ಹೊಯ್ಸಳರ ಶಾಸನಗಳು ಅವರನ್ನು ಸೇವುಣರೆಂದೇ ಉಲ್ಲೇಖಿಸಿವೆ.[೩೯] ಸೇವುಣ ಸಿಂಘಣ (ಕ್ರಿ.ಶ. ೧೨೧೦–೧೨೪೭) ಈ ಮನೆತನದ ಪ್ರಸಿದ್ಧ ಹಾಗೂ ಸಮರ್ಥ ದೊರೆಗಳಲ್ಲಿ ಒಬ್ಬನಾಗಿದ್ದಾರೆ.

ಪ್ರಸ್ತುತ ಚಿತ್ರದುರ್ಗ ಜಿಲ್ಲೆಯಲ್ಲಿ ಈ ವಂಶಕ್ಕೆ ಸೇರಿದ ಹಲವಾರು ಶಾಸನಗಳು ದೊರೆತಿದ್ದು ಅವುಗಳೆಲ್ಲವೂ ಸಿಂಘಣ್ಣನ ಅನಂತರದ ಕಾಲದವುಗಳಾಗಿವೆ. ಕನ್ನರ ಮಹಾದೇವ ಹಾಗೂ ರಾಮಚಂದ್ರ ಇವರ ಆಳ್ವಿಕೆಯ ಕಾಲಕ್ಕೆ ಸೇರಿದ ಶಾಸನಗಳು ಲಭ್ಯವಿರುವುದನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಪ್ರದೇಶದಲ್ಲಿಯೂ ಸೇವುಣರ ಆಳ್ವಿಕೆ ಇದ್ದಿತ್ತೆಂದು ಹೇಳಬಹುದು.

ವಿಜಯನಗರ

ಹೊಯ್ಸಳ ಸಾಮ್ರಾಜ್ಯ ಪತನ ಹೊಂದಿದ ತರುವಾಯ ವಿಜಯನಗರ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಇದನ್ನು ಮರೆತು ಹೋದ ಹಾಗೂ ಮರೆಯಲಾಗದ ಸಾಮ್ರಾಜ್ಯವೆಂದು ಇತಿಹಾಸಕಾರರು ಬಣ್ಣಿಸಿದ್ದಾರೆ. ಹದಿನಾರನೇ ಶತಮಾನದಲ್ಲಿ ಅಸ್ತಂಗತವಾದ ವಿಜಯನಗರವು ಇಡೀ ಭಾರತದಲ್ಲಿ ಮಾತ್ರವಲ್ಲದೇ ಪ್ರಪಂಚದಲ್ಲಿಯೇ ಖ್ಯಾತಿ ಪಡೆದಿತ್ತು. ಕ್ರಿ.ಶ.೧೩೩೬ ರಿಂದ ೧೫೬೫ ರವರೆಗೆ ಆಳ್ವಿಕೆ ನಡೆಸಿದ ವಿಜಯನಗರದ ಅರಸರು ಚಿತ್ರದುರ್ಗ ಜಿಲ್ಲೆಯನ್ನು ತಮ್ಮ

ವಿಭಾಗಗಳನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ವಿಜಯನಗರದ ಅರಸರು ಅನೇಕ ವಿಭಾಗಗಳನ್ನು ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರು. ಈ ವಿಭಾಗಗಳು ಮೊದಲನೆಯ ಬುಕ್ಕನ ಕಾಲದಿಂದಲೇ ಇದ್ದವು ಎಂಬುದಕ್ಕೆ ಹಲವು ಶಾಸನಗಳು ಆಧಾರಗಳಿವೆ. ವಿಜಯನಗರದ ಅರಸರು ಕ್ರಮಬದ್ಧವಾದ ಆಡಳಿತ ನಡೆಸಿರುವುದರ ಜೊತೆಗೆ ಕೃಷಿ ಅಭಿವೃದ್ಧಿಗೆ ದೇವಾಲಯಗಳ ಜೋರ್ಣೋದ್ಧಾರಕ್ಕೆ ದಾನದತ್ತಿಗಳನ್ನು ನೀಡಿದ ಬಗ್ಗೆ ಶಾಸನಗಳಿಂದ ತಿಳಿಯಬಹುದಾಗಿದೆ.

ಈ ರೀತಿಯಾಗಿ ವಿಜಯನಗರದ ಅರಸರು ಸಹ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ನೇರ ಆಳ್ವಿಕೆ ನಡೆಸದಿದ್ದರೂ ಇವರ ಸಾಮಾಂತರಾಗಿ ಚಿತ್ರದುರ್ಗ ಪಾಳೆಗಾರರು ಹಾಗೂ ಹರ್ತಿಕೋಟೆಯ ಪಾಳೆಯಗಾರರು ಆಳ್ವಿಕೆ ನಡೆಸಿದರು. ಚಿತ್ರದುರ್ಗ ಪಾಳೆಗಾರರು ಹೊರಡಿಸಿದ ಶಾಸನಗಳಲ್ಲಿ ಹಾಗೂ ಹರ್ತಿಕೋಟೆಯ ಪಾಳೆಗಾರರು ಹೊರಡಿಸಿರುವ ಶಾಸನಗಳಲ್ಲಿ ಭಾಷೆಗೆ ತಪ್ಪದರಾಯರ ಗಂಡ ಎಂಬ ವಾಕ್ಯದಿಂದ ಇವರು ವಿಜಯನಗರದ ಅರಸರ ಮತ್ತು ಸಂಗಮ ವಂಶದ ಮೊದಲನೇ ದೊರೆಯಾದ ಹರಿಹರನ ಬಿರುದಾಂಕಿತನಿಂದ ಹರತಿ ಪಾಳೆಗಾರರು ವಿಜಯನಗರ ಅರಸರ ಸಾಮಂತರಾಗಿದ್ದರು ಎಂದು ಹಿರಿಯೂರಿನ ಶಾಸನಸಂಖ್ಯೆ ೬ ಇದಕ್ಕೆ ಪುಷ್ಟಿ ನೀಡುತ್ತದೆ.[೪೦]

ಹರತಿ ಪಾಳೆಯಗಾರರು

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಹರ್ತಿಕೋಟೆ ಅಥವಾ ಹರತಿಯ ಪಾಳೆಯಗಾರರು ವಿಜಯನಗರ ಕಾಲದ ಹಾಗೂ ವಿಜಯನಗರೋತ್ತರ ಕಾಲದ ಕರ್ನಾಟಕ ಇತಿಹಾಸದಲ್ಲಿ ರಾಜಕೀಯವಾಗಿಯೂ, ಸಾಂಕೇತಿಕವಾಗಿಯೂ ಪ್ರಮುಖ ಸ್ಥಾನ ಪಡೆದಿದ್ದಾರೆ. ವಿಜಯನಗರವು ರೂಪಿಸಿದ 'ಅಮರ ನಾಯಕ' ಅಥವಾ 'ಅಮರ ಮಾಗಣಿ' ಪದ್ಧತಿಯ ಚೌಕಟ್ಟಿನೊಳಗೆ ಬೆಳೆದುಬಂದ ಸ್ಥಳೀಯ ಆಡಳಿತವನ್ನು ಕೈಗೊಂಡ ಮನೆತನವಾಗಿದೆ. ಹರತಿನಾಯಕರ (ಪಾಳೆಯಗಾರರು) ಮನೆತನ. ಈ ಮನೆತನದ ಶಾಸನಗಳೂ ಶಕ ೧೨೩೫ (ಕ್ರಿ.ಶ.೧೩೧೩) ರಿಂದ ಶಕ (ಕ್ರಿ.ಶ.೧೭೩೮) ರವರೆಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆಗಳಲ್ಲಿ ದೊರೆತಿದ್ದು ಈ ಮನೆತನದ ನಾಯಕರ ಬಗ್ಗೆ ರಾಜಕೀಯ, ಆಡಳಿತಾತ್ಮಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಾಧನೆಗಳಿಗೆ ಸಂಬಂಧಿಸಿದಂತೆ ಅತಿ ಮುಖ್ಯವಾದ ಮಾಹಿತಿಗಳನ್ನು ನೀಡುತ್ತವೆ.[೪೧]

ಹರತಿ ನಾಯಕರ ವಂಶದ ಮೂಲಪುರುಷನೆನಿಸಿದ ತಿಪ್ಪರಾಜನು ವಾಸ್ತವವಾಗಿ ವಿಜಯನಗರದ ಸಂಗಮ ವಂಶದ ಸ್ಥಾಪಕ ಸಹೋದರರಾದ ಹಕ್ಕಬುಕ್ಕರ ಸಮಕಾಲೀನನಾಗಿದ್ದು, ಅವರ ಸೇನೆಯಲ್ಲಿ ದಳಪತಿಯಾಗಿದ್ದನು. ೧ನೇ ಹರಿಹರನ ಆಳ್ವಿಕೆಯಲ್ಲಿ ಹೊಯ್ಸಳರ ಸಾಮಂತಾಧಿಪತಿಗಳಲ್ಲಿ ಅತ್ಯಂತ ಬಲಿಷ್ಠವಾಗಿದ್ದ ನಿಡುಗಲ್ಲಿನ ದುರ್ಗಾಧಿಪತಿ ಚಿಕ್ಕಬೊಮ್ಮಯ್ಯ

ನಾಯಕನನ್ನು ದ್ವಂದ್ವ ಯುದ್ಧದಲ್ಲಿ ಶಿರಚ್ಛೇದನ ಮಾಡಿದ್ದನ್ನು ಮೆಚ್ಚಿ ಹರಿಹರನು ತಿಪ್ಪರಾಜನಿಗೆ ಹೊಳಕಲ್ಲು ಬೊಂಮನಶಿರಶ್ಚೇದನಂ ಎಂಬ ಬಿರುದನ್ನು ನೀಡಿದನು.[೪೨] ಮುಂದೆ ೧ನೇ ಬುಕ್ಕನ ಕಾಲದಲ್ಲಿ ಉಚ್ಚಂಗಿದುರ್ಗವನ್ನು, ಸೊಸೆವೂರನ್ನು ಗೆದ್ದು 'ಹೊಯ್ಸಳದಳ ವಿಭಾಪಂ' ಎಂಬ ಬಿರುದನ್ನು ಬುಕ್ಕರಾಯನಿಂದ ಪಡೆದನು. ಅಲ್ಲದೆ ವೇದಾವತಿ ತೀರ ಪ್ರದೇಶವನ್ನು ಉಂಬಳಿಯಾಗಿ ಪಡೆದು ಅಲ್ಲಿ ತನ್ನ ಪೂರ್ವಿಕರ ಹೆಸರಿನಲ್ಲಿ ಹರ್ತಿಕೋಟೆಯನ್ನು ನಿರ್ಮಿಸಿ ೧೩೪೦ ರಿಂದ ೧೩೫೫ ರವರೆಗೆ ರಾಜ್ಯವಾಳಿದನು. ತಿಪ್ಪರಾಜನ ಮಗ ಕಾಮನಾಯಕ, ಕಿರಿಯ ಮಗ ಮಲ್ಲೆಯನಾಯಕನು ಪರಶುರಾಮಪುರದಲ್ಲಿ ನೆಲೆಸಿ ಅಲ್ಲಿನ ಗರುಡದೇವರನ್ನು, ಹನುಮಂತ ದೇವರನ್ನು ಪ್ರತಿಷ್ಠಾಪಿಸಿದನೆಂದು ಕ್ರಿ.ಶ. ೧೩೬೧ ರ ಚಳ್ಳಕೆರೆ ೩೭ನೇ ಶಾಸನ ತಿಳಿಸುತ್ತದೆ. ಅಬ್ಬೆನಾಯಕನ ನಂತರ ಅವನ ಹಿರಿಯ ಮಗ ಪಾಲನಾಯಕನು ಹರತಿ (ಹರ್ತಿ), ಕೋಟೆಕೆರೆ ಕೋಟೆಗಳನ್ನಾಳಿದನು. ಅಬ್ಬೆನಾಯಕನ ಹಿರಿಯ ಮಕ್ಕಳಾದ ಕಾಮನಾಯಕ ಮತ್ತು ಬೊಂಮನಾಯಕರು ಹಿರಿಯೂರು ಮತ್ತು ಹರತಿ ಸಾರವಾಡದ ಸುತ್ತಲ ಪ್ರದೇಶದ ಆಡಳಿತವನ್ನು ನಡೆಸುತ್ತಿದ್ದರು. ಹರತಿ ನಾಯಕರ ಮನೆತನದ ಗುರುಗಳಾದ ಸಾರ್ವಾಡೇಶ್ವರರ ಹೆಸರಿನಲ್ಲಿ ತಾವು ಸ್ಥಾಪಿಸಿದ ರಾಜ್ಯಕ್ಕೆ ಕುಲದೇವತೆ ಹರತಿದೇವಿಯ ಹೆಸರನ್ನೂ ಸೇರಿಸಿ ಹರತಿ ಸಾರವಾಡವೆಂದು ಹೆಸರಿಟ್ಟರು.

ಪಾಲನಾಯಕನ ಮೊಮ್ಮಗ ಎರಂಬಾಪೆ ನಾಯಕನು ತನ್ನ ಹೆಸರಿನಲ್ಲಿ ಎರಬಾಪೆನಹಳ್ಳಿ ಅಥವಾ ಇಂದಿನ ಯರಬಳ್ಳಿಯನ್ನು ನಿರ್ಮಿಸಿದನು. ತಿಪ್ಪನಾಯಕನ ಮಗ ಹರ್ತೆಪ್ಪನಾಯಕನು ಚಿತ್ರದುರ್ಗ ಮದಕರಿನಾಯಕನ ಮಗಳನ್ನು ವಿವಾಹವಾಗಿ ಕಸ್ತೂರಿರಂಗಪ್ಪನಾಯಕನ ಕೋಟೆಯನ್ನು ಬಳುವಳಿಯಾಗಿ ಪಡೆದನು. ನಂತರ ಕ್ರಿ.ಶ.೧೪೬೦ ರಲ್ಲಿ ಈ ಕೋಟೆಯನ್ನು ನವೀಕರಿಸಿ ತನ್ನ ಹೆಸರಿನಲ್ಲಿ ಹರ್ತಿಕೋಟೆಯೆಂದು ಕರೆದನು.[೪೩] ಇಂದೂ ಆ ಹೆಸರೇ ಮುಂದುವರೆದಿದೆ.

ಅಬ್ಬೆನಾಯಕನ ಎರಡನೇ ಮಗ ಐಮಂಗಳವನ್ನಾಳುತ್ತಿದ್ದ. ಕಾಮನಾಯಕನ ವಂಶಜರು ೧೩೮೨ರ ನಂತರ ಪುನಃ ಪ್ರಬಲರಾದರು. ರಂಗಪನಾಯಕ ಇವನ ತಮ್ಮ ಚಿಕ್ಕರಂಗಪ್ಪನಾಯಕನು ಹರತಿ ಸ್ಥಳದಲ್ಲಿ ಆಳುತ್ತಿದ್ದ. ತನ್ನ ಮನೆತನದ ಗುರುಗಳಿಂದ ಕಾಳಮುಖ ಪಂಥದ ಹೊಟ್ಟೆಯೀಶ್ವರಯ್ಯನವರ ಸಿಂಹಾಸನ ಮಠಕ್ಕೆ ಹೆಮ್ಮಡಿಹಾಳು (ಹೇಮದಳ) ಎಂಬ ಗ್ರಾಮವನ್ನು ದಾನವಾಗಿ ನೀಡಿದನೆಂದು ಹಿರಿಯೂರಿನ ಶಾಸನ ಸಂಖ್ಯೆ ೬ ಉಲ್ಲೇಖಿಸುತ್ತದೆ.[೪೪]

ಹಿರಿಯೂರು ಹಾಗೂ ಬುಕ್ಕಾಪಟ್ಟಣಗಳಿಂದಲೂ ಹರತಿ ಪಾಳೆಯಗಾರರು ಆಳಿದರು. ಈ ಮನೆತನದ ಕೆಂಚಪ್ಪನಾಯಕ ಮತ್ತು ಇಮ್ಮಡಿ ಕೆಂಚಪ್ಪನಾಯಕರು ಚಿತ್ರದುರ್ಗ ಇತಿಹಾಸದಲ್ಲಿ ಶಾಸನೋಕ್ತರಾಗಿದ್ದಾರೆ. ೧೬೭೯ ರಲ್ಲಿ ಚಿತ್ರದುರ್ಗದ ಇಮ್ಮಡಿ ಮದಕರಿನಾಯಕನು ಹಿರಿಯೂರನ್ನು ಮುತ್ತಿ ವಶಪಡಿಸಿಕೊಂಡನೆಂದು ಹೇಳಲಾಗಿದೆ. ಹೀಗೆ ಹರತಿ ವಂಶದವರು ಮೊದಲು

ವಿಜಯನಗರ ಕಾಲದಲ್ಲಿ ಸೇನಾಧಿಕಾರಿಗಳಾಗಿ ನಂತರ ವಿಜಯನಗರದ ಪಾಳೇಗಾರರಾಗಿ, ಮಹಾನಾಯಕಾಚಾರ್ಯರಾಗಿ ನಂತರ ವಿಜಯನಗರ ಪತನವಾದ ಮೇಲೆ ಸ್ವತಂತ್ರವಾಗಿ ಪಾಳೇಪಟ್ಟುಗಳನ್ನು ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಹರತಿ, ಕೋಟೆಕೆರೆ, ಬುಕ್ಕಾಪಟ್ಟಣ, ಪರಶುರಾಮಪುರ, ದೊಡ್ಡೇರಿ, ಐಮಂಗಲ, ತಳುಕು, ಹೊಸನಕೋಟೆ, ಮಡಕಶಿರ, ರತ್ನಗಿರಿ, ನಿಡುಗಲು, ಮಿಡಿಗೇಸಿ ಮುಂತಾದೆಡೆ ಸ್ಥಾಪಿಸಿ ಕ್ರಿ.ಶ. ೧೩೪೦ ರಿಂದ ೧೮೦೦ ರವರೆಗೆ ಸುಮಾರು ೪೬೦ ವರ್ಷಗಳ ಕಾಲ ಯಶಸ್ವಿ ಆಳ್ವಿಕೆ ನಡೆಸಿದರು.[೪೫]

ಚಿತ್ರದುರ್ಗ ಪಾಳೆಯಗಾರರು

ಮಧ್ಯಯುಗೀನ ಭಾರತದ ಇತಿಹಾಸದಲ್ಲಿ ಅತ್ಯಂತ ಉನ್ನತವಾದ ಕಾಲಘಟ್ಟವೆಂದರೆ ವಿಜಯನಗರ ಸಾಮ್ರಾಜ್ಯದ ಕಾಲಾವಧಿ. ಕ್ರಿ.ಶ. ೧೪ನೇ ಶತಮಾನದ ಪೂರ್ವಾರ್ಧದಲ್ಲಿ ಏಳಿಗೆಗೆ ಬಂದ ವಿಜಯನಗರ ಅರಸರು ಬಹು ವಿಶಾಲವಾದ ಸಾಮ್ರಾಜ್ಯವನ್ನು ನಿರ್ಮಿಸಿ ಭಾರತದ ಆಚೆ ಕೀರ್ತಿ ಪತಾಕೆಯನ್ನು ಹಾರಿಸಿದರು. ಕ್ರಿ.ಶ. ೧೫೬೫ ರಲ್ಲಿ ನಡೆದಂತಹ ರಕ್ಕಸತಂಗಡಿ ಯುದ್ಧದ ನಂತರ ಸಾಮ್ರಾಜ್ಯವು ನಾಶಗೊಂಡ ಸಂದರ್ಭದಲ್ಲಿ ಹಲವಾರು ಅಧೀನ ಪಾಳೆಗಾರರು ಸ್ವತಂತ್ರ ಹೊಂದಿದರು. ವಿಜಯನಗರ ಪತನದ ನಂತರ ಚಿತ್ರದುರ್ಗ ಪಾಳೆಯಗಾರರು ಸ್ವತಂತ್ರವಾಗಿ ಆಳ್ವಿಕೆ ಮಾಡಲು ಪ್ರಾರಂಭಿಸಿದರು.

ಚಿತ್ರದುರ್ಗ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶಗಳನ್ನೊಳಗೊಂಡಂತೆ ಈ ಭಾಗದಲ್ಲಿ ಸುಮಾರು ಏಳು ಪಾಳೆಯಗಾರರ ಮನೆತನಗಳು ಆಳ್ವಿಕೆ ನಡೆಸಿವೆ. ಅಂದರೆ ಹರ್ತಿಕೋಟೆ, ಬೇಲೂರು, ಚಿತ್ರದುರ್ಗ, ಸಂತೆಬೆನ್ನೂರು, ನಾಯಕನಹಟ್ಟಿ, ಮತ್ತಿನಾಡು (ಮತ್ತೋಡು). ಅವರಲ್ಲಿ ಚಿತ್ರದುರ್ಗದ ಪಾಳೆಯಗಾರರು ಪ್ರಮುಖರೆನಿಸಿದ್ದಾರೆ. ಇವರುಗಳ ಬಗ್ಗೆ ಅನೇಕ ಶಿಲಾಶಾಸನ, ತಾಮ್ರಪಟ ಶಾಸನಗಳು ಇತ್ಯಾದಿ ಆಧಾರಗಳು ದೊರೆತಿವೆ. ಇವರುಗಳು ನಿರ್ಮಿಸಿದ ಮತ್ತು ಜೀರ್ಣೋದ್ಧಾರಗೊಳಿಸಿದ ದೇವಾಲಯಗಳು ಕೋಟೆ ಕೊತ್ತಲಗಳು, ಕೆರೆ ಹಾಗೂ ದತ್ತಿ ಬಿಟ್ಟ ವಿವರಗಳನ್ನು ತಿಳಿಯಬಹುದು. ಸುತ್ತಮುತ್ತಲಿನ ಪ್ರದೇಶದ ಹಿರಿಯೂರು ಪಾಳೆಗಾರರ ಆಳ್ವಿಕೆಯ ಪ್ರಮುಖ ಕೇಂದ್ರವಾಗಿದ್ದಿರಬಹುದು. ಈ ಪ್ರದೇಶದಲ್ಲಿ ಇವರುಗಳು ಕಟ್ಟಿ ಜೀರ್ಣೋದ್ಧಾರಗೊಳಿಸಿದ ಐತಿಹಾಸಿಕ ಕುರುಹುಗಳನ್ನು ಇಂದಿಗೂ ಕಾಣಬಹುದು. ಚಿತ್ರದುರ್ಗದ ಪಾಳೆಯಗಾರರು ಮೂಲತಃ ಬೇಡ ಜನಾಂಗದವರಾಗಿದ್ದು, ವಾಲ್ಮೀಕಿ ಗೋತ್ರದ ಕಾಮಗೇತಿ ವಂಶಸ್ಥರು. ಇವರು ಆಂಧ್ರಪ್ರದೇಶದ ತಿರುಪತಿ ಬಳಿಯ ಜಡೆಕಲ್ ದುರ್ಗದಿಂದ ವಲಸೆ ಬಂದರೆನ್ನುವುದು ಪ್ರತೀತಿ. ಚಿತ್ರದುರ್ಗವನ್ನು ತಮ್ಮ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ಸುಮಾರು ೨೧೦ ವರ್ಷಗಳಿಗೂ ಹೆಚ್ಚು ಕಾಲ ಆಳ್ವಿಕೆ ನಡೆಸಿದ್ದಾರೆ.[೪೬] ಚಿತ್ರದುರ್ಗ ಪಾಳೆಯ ಪಟ್ಟನ್ನು ಕಟ್ಟಿದ ಕೀರ್ತಿ ತಿಮ್ಮನಾಯಕನಿಗೆ ಸಲ್ಲುತ್ತದೆ. ಈತನ ಆಡಳಿತದ

ಕಾಲದಿಂದ ನಮಗೆ ಶಾಸನಗಳು ದೊರೆಯುತ್ತವೆ. ಕ್ರಿ.ಶ. ೧೫೬೮ರ ಹೊಳಲ್ಕೆರೆ ಶಾಸನವು ವೀರಪ್ರತಾಪ ಸದಾಶಿವರಾಯ ಮಹಾರಾಯನಿಗೆ ಸಂಬಂಧಿಸಿದ್ದಾಗಿದೆ. ಅಳಿಯ ರಾಮರಾಯನ ಆಳ್ವಿಕೆಯ ಕಾಲದಲ್ಲಿ ತಿರುಮಲರಾಯನು ಹೊಳಲ್ಕೆರೆ ಸೀಮೆಯನ್ನು ಕಾಮಗೇತಿ ಕಸ್ತೂರಿ ಮದಕರಿನಾಯಕನಿಗೆ ನೀಡಿದನು ಎಂಬ ವಿವರ ನೀಡುತ್ತದೆ. ಹೀಗೆ ವಿಜಯನಗರ ಅರಸರಿಂದ ಅಮರ ಮಾಗತಿಯಾಗಿ ಪಡೆದ ಪಾಳೆಯಗಾರರು ನಂತರ ಹೊಳಲ್ಕೆರೆ ಸೀಮೆಯಿಂದ ಹಿರಿಯೂರು ಸೀಮೆಯ ಅಧಿಕಾರಿಯಾಗಿ, ಅಲ್ಲಿಂದ ಚಿತ್ರದುರ್ಗ ಸೀಮೆಯ ಅಧಿಕಾರಿಯಾಗಿ ನೇಮಕಗೊಂಡು ನಂತರ ಸ್ವತಂತ್ರವಾಗಿ ಆಳ್ವಿಕೆ ನಡೆಸಿದನ್ನು ನೋಡುತ್ತೇವೆ.

ಮತ್ತಿ ತಿಮ್ಮಣ ನಾಯಕನು ಹೊಳಲ್ಕೆರೆ ಸೀಮೆಯಿಂದ ಹಿರಿಯೂರು ಸೀಮೆಯ ಅಧಿಕಾರಿಯಾಗಿ ನೇಮಿಸಲ್ಪಟ್ಟನು. ಆ ನಂತರ ಇವರಿಗೆ ಚಿತ್ರದುರ್ಗದ ಅಧಿಪತ್ಯ ದೊರೆಯಿತು. ಈತನು ಶೂರನೂ, ಸಾಹಸಿಯೂ ಆಗಿದ್ದನೆಂದು ಕೆಲವು ಘಟನೆಗಳು ಸಾಕ್ಷಿಯಾಗಿವೆ. ಚಿತ್ರದುರ್ಗವನ್ನು ಮುತ್ತಿದ ಸಾಳುವ ನರಸಿಂಹರಾಯನ ಪಾಳೆಯವನ್ನು ನುಗ್ಗಿ ಅಲ್ಲಿದ್ದ ಖಾನಾ ಕುದುರೆಯನ್ನು ಬಿಚ್ಚಿ ತಂದಿದ್ದು, ಈ ಘಟನೆಯೊಂದಿಗೆ ಸಂಧಿ ಮಾಡಿಕೊಂಡು ಕಲ್ಬುರ್ಗಿ ಕೋಟೆಯನ್ನು ನಿಂದಿಸಿದ್ದರಿಮದ ಈತನಿಗೆ 'ಹಗಲು ಕಗ್ಗೊಲೆಯ ಮಾನ್ಯ' ಎಂದು ಬಿರುದು ಬಂದಿತು. ತಿಮ್ಮಣ ನಾಯಕ ಸಾಹಸಿಯಾಗಿದ್ದಂತೆ ಸ್ವಾಭಿಮಾನಿಯೂ ಸಹ ಆಗಿದ್ದನು. ಈತನನ್ನು ವಿಜಯನಗರದ ಅರಸರು ಬರಮಾಡಿಕೊಂಡು ಸೆರೆಮನೆಯಲ್ಲಿಟ್ಟತು. ತಿಮ್ಮಣ ನಾಯಕ ಅಲ್ಲಿಯೇ ಮರಣ ಹೊಂದಿದನು. ಈತನ ಆಳ್ವಿಕೆಯ ಸಂದರ್ಭದಲ್ಲಿ ಚಿತ್ರದುರ್ಗ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೋಟೆಗಳನ್ನು ಬಲಪಡಿಸಿದ್ದನು. ಈತರ ತರುವಾಯ ಇನ್ನೂ ಹಲವಾರು ನಾಯಕರುಗಳು ಚಿತ್ರದುರ್ಗ ಪಾಳೆಯ ಆಡಳಿತ ನಡೆಸಿದರು ಎಂದು ಹೇಳಬಹುದು. ಅವರೆಂದರೆ ಓಬಣ್ಣ ನಾಯಕ, ಕಸ್ತೂರಿ ರಂಗಪ್ಪನಾಯಕ, ಭರಮಣ್ಣ ನಾಯಕ, ೨ನೇ ಕಸ್ತೂರಿ ರಂಗಪ್ಪನಾಯಕ, ಹಿರೇಮದಕರಿ ನಾಯಕ. ಈತನು ಐಮಂಗಲ ಕೋಟೆಯನ್ನು ನಿರ್ಮಿಸಿ ಈ ಪ್ರದೇಶದ ಸುತ್ತಮುತ್ತಲಿನ ಆಡಳಿತ ನಡೆಸಿದ ವಿವರ ತಿಳಿಯುತ್ತದೆ. ಈತನ ತರುವಾಯ ಬಿಚ್ಚುಗತ್ತಿ ಭರಮಣ್ಣನಾಯಕ, ಓಬಣ್ಣನಾಯಕ ಆಳಿದರು. ಓಬಣ್ಣನಾಯಕ 'ಮದಕರಿನಾಯಕ' ಎಂಬ ಬಿರುದನ್ನು ಧರಿಸಿ ಕ್ರಿ.ಶ.೧೬೮೯ ರವರೆಗೆ ಆಳ್ವಿಕೆ ನಡೆಸಿದನು. ಈತನ ಆಡಳಿತಾವಧಿಯಲ್ಲಿ ಚಿತ್ರದುರ್ಗವು ಸ್ವತಂತ್ರ ರಾಜ್ಯವಾಯಿತು. ತದನಂತರ ಹೈದರನಿಗೆ ಮದಕರಿನಾಯಕನು ಸುಲಭವಾಗಿ ಸೆರೆಸಿಕ್ಕನು. ಹೀಗೆ ಮದಕರಿನಾಯಕನನ್ನು ಸೆರೆ ಹಿಡಿಯುವುದರ ಮೂಲಕ ಹೈದರಾಲಿಯು ಚಿತ್ರದುರ್ಗ ಸಂಸ್ಥಾನವನ್ನು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಿಕೊಂಡನು.[೫೩]

ಪ್ರಸ್ತುತ ಹಿರಿಯೂರು ಪಟ್ಟಣದ ಸುತ್ತಮುತ್ತಲಿನ ಪ್ರದೇಶಗಳಾದ ಹರ್ತಿಕೋಟೆ, ಐಮಂಗಲ, ಎಂ.ಡಿ.ಕೋಟೆ, ತವಂದಿ, ನೋಣಜಿನಪಟ್ಟಣ ಪಾಳೆಗಾರರ ಕೇಂದ್ರಗಳಾಗಿಯೂ, ಆಡಳಿತ ಗ್ರಾಮಗಳಾಗಿಯೂ ನಿರ್ಮಿಸಿದ ಕೋಟೆಕೊತ್ತಲ, ವೀರಮಾಸ್ತಿಗಲ್ಲು, ದೇವಾಲಯಗಳು ಇಂದಿಗೂ

ಕಂಡುಬರುತ್ತವೆ. ಹಿರಿಯೂರು ಪಟ್ಟಣದ ಇತಿಹಾಸವು ಮೌರ್ಯರ ಕಾಲದಿಂದ ಪ್ರಾರಂಭವಾಗಿ ಚಿತ್ರದುರ್ಗ ಪಾಳೆಗಾರರ ಆಳ್ವಿಕೆವರೆಗೂ ನಿರಂತರವಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳಿಂದ ಕೂಡಿ ಬೆಳೆದುಬಂದಿವೆ. ಪಾಳೆಯಗಾರರ ನಂತರವು ಈ ಪ್ರದೇಶ ಮೈಸೂರು ಸಂಸ್ಥಾನದಲ್ಲಿ ಮುಂದುವರೆದಿದ್ದು ತನ್ನದೇ ಆದ ಸಾಂಸ್ಕೃತಿಕ ಕುರುಹುಗಳನ್ನು ಉಳಿಸಿಕೊಂಡು ಬಂದಿದೆ. ಈ ಭಾಗದ ಇತಿಹಾಸವನ್ನು ವಾಸ್ತವವಾಗಿ ಅರಿಯುವುದಾದರೆ ಮೌರ್ಯರ ಪೂರ್ವಕಾಲದಿಂದಲೇ ಅಂದರೆ ಹಳೆ ಶಿಲಾಯುಗದ ಕಾಲದಿಂದ ಹಿಡಿದು ಮಾನವನ ಜೀವನದ ವಿವಿಧ ಹಂತಗಳ ಮೆಟ್ಟಿಲುಗಳನ್ನು ಏರುತ್ತ ಬಂದಿದೆ. ಇದಕ್ಕೆ ಪೂರಕವಾದಂತಹ ಶಿಲೋಪಕರಣಗಳು, ಮಡಿಕೆ ಕುಡಿಕೆಗಳು, ಸಮಾಧಿ ಸ್ಥಳಗಳು ಕಂಡುಬರುತ್ತವೆ. ಮೌರ್ಯ, ಶಾತವಾಹನರು, ಕದಂಬರು, ಗಂಗ, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳ, ವಿಜಯನಗರ ಅರಸರು ಹಾಗೂ ಪಾಳೆಗಾರರು ಸಹ ಪ್ರಸ್ತುತ ಪ್ರದೇಶವನ್ನು ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಎಲ್ಲಾ ದೃಷ್ಟಿಕೋನದಿಂದ ಬೆಳೆಸಿ ಆಳ್ವಿಕೆ ನಡೆಸಿದರು ಎಂದು ಹೇಳಬಹುದು. ಇದಕ್ಕೆ ಆಧಾರಗಳು ಆಯಾ ಕಾಲದ ಶಾಸನ, ದೇವಾಲಯ, ಶಿಲ್ಪ, ಸ್ಮಾರಕ ಶಿಲ್ಪ, ಕೋಟೆಕೊತ್ತಲ ಹಾಗೂ ಇತ್ಯಾದಿ ಅವಶೇಷಗಳು ಇಂದಿಗೂ ಉಳಿದುಕೊಂಡು ಬಂದಿವೆ. ಕೆಲವು ನಶಿಸಿ ಹೋಗಿ ಅಳಿವಿನ ಅಂಚಿನಲ್ಲಿವೆ.

ಹಿರಿಯೂರಲ್ಲಿ ಸ್ವಾತಂತ್ರ್ಯ ಸಂಗ್ರಾಮ

ಕ್ರಿ.ಶ.೧೯೪೭ರಲ್ಲಿ ಮೈಸೂರು ಸಂಸ್ಥಾನದ ಒಡೆಯರ್ ವಂಶದ ಆಳ್ವಿಕೆ ಕೊನೆಗೊಳ್ಳುವ ವೇಳೆಗೆ ದೇಶದಾದ್ಯಂತ ಭಾರತಕ್ಕೆ ಸ್ವಾತಂತ್ರ್ಯ ಬೇಕೆನ್ನುವ ಕೂಗಿಗೆ ಹಿರಿಯೂರು ತಾಲೂಕು ಧ್ವನಿಗೂಡಿಸಿತು. ಕರಪತ್ರಗಳನ್ನು ಹಂಚುವುದು, ಸಭೆ ಸಮಾರಂಭಗಳನ್ನು ನಡೆಸುವುದು, ಸಂಪರ್ಕ ಮಾಧ್ಯಮಗಳನ್ನು ಕತ್ತರಿಸುವುದು, ಪಿಕೆಟಿಂಗ್ ನಡೆಸುವುದು ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರಾಗೃಹ ವಾಸ ಅನುಭವಿಸಿದ ಸ್ವಾತಂತ್ರ್ಯ ಪ್ರೇಮಿಗಳೂ ಇಲ್ಲಿದ್ದಾರೆ.

'ಹಿರಿಯೂರು' ತಾಲೂಕಿನ ಕಸ್ತೂರಿ ರಂಗಪ್ಪನಹಳ್ಳಿ ಸ್ವಾತಂತ್ರ್ಯ ಸಂಗ್ರಾಮದ ಚಟುವಟಿಕೆಗಳ ಕೇಂದ್ರವಾಗಿತ್ತು. ಇಡೀ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಬಗ್ಗೆ ಜಾಗೃತಿ ಮೂಡಿಸಿದ ಪ್ರಮುಖ ವ್ಯಕ್ತಿ ಎಂದರೆ ವಕೀಲ ಕೆಂಚಪ್ಪನವರು. ಇವರು ಹಳ್ಳಿಗಳಿಗೆ ಹೋದರೆಂದರೆ ಅಭೂತಪೂರ್ವ ಸ್ವಾಗತ ದೊರಕುತ್ತಿತ್ತು. ೧೯೩೯ರಲ್ಲಿ ಕೆಂಚಪ್ಪನವರು ಸ್ವಾತಂತ್ರ್ಯಕ್ಕಾಗಿ ಹೋರಾಡಲು ತಮ್ಮದೇ ಆದ ಗುಂಪೊಂದನ್ನು ಕಟ್ಟಿಕೊಂಡರು. ಇದರಲ್ಲಿ ಚಿತ್ರದುರ್ಗ ಜಿಲ್ಲೆಯ ತುರುವನೂರು ಚೆನ್ನಾರೆಡ್ಡಿ, ದೊಗ್ಗನಾಳನ ಕೊಟ್ರೆನಂಜಪ್ಪ, ಕೋಳಾಳು ಯಲ್ಲಪ್ಪ ಮುಂತಾದವರಿದ್ದರು. ಹಿರಿಯೂರು ತಾಲೂಕಿನ ಬಬ್ಬೂರು ಲಿಂಗೇಗೌಡ, ವಿ.ಮಸಿಯಪ್ಪ, ಡಾ.ರಂಗಯ್ಯ, ಮಾಡಿಹಳ್ಳಿ ನರಸಿಂಹಯ್ಯ, ಡಾ.ಹಾಲಪ್ಪ, ಬಿ.ಎಲ್.ಗೌಡ ಮುಂತಾದವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಪ್ರಮುಖರು.[೪೭]

೧೯೩೯-೪೨ರ ಅವಧಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕೂಗು ಮುಗಿಲು ಮುಟ್ಟಿತ್ತು. ೧೯೩೯ರಲ್ಲಿ ಕೊಳಾಳು ಗ್ರಾಮದಲ್ಲಿ ಕೆಂಚಪ್ಪನವರ ನೇತೃತ್ವದ ಗುಂಪು ಹೆಂಡದ ಮರ ಕಡಿದು, ಹೆಂಡದ ಪೀಪಾಯಿಗಳನ್ನು ಉರುಳಿಸಿತು. ಆಗ ಪೊಲೀಸಿನವರು ಅವರನ್ನು ತುಂಬಾ ಹೀನಾಯವಾಗಿ ಕಂಡರು. ಈ ಸುದ್ದಿ ಮಹಾತ್ಮಗಾಂಧೀಜಿಯವರ ಕಿವಿಗೆ ಬಿದ್ದಿತು. ಅವರು ಅಂದಿನ ವೈಸರಾಯ್‌ರವರನ್ನು ಕಂಡು ಈ ಘಟನೆಯ ವಿಚಾರಣೆ ನಡೆಸಲು ಹೇಳಿದರು. ಆಗ ಮಹದೇವ ದೇಸಾಯಿ ಎಂಬುವವರನ್ನು ವಿಚಾರಣೆ ನಡೆಸಲು ನೇಮಿಸಿದರು. ವಿಚಾರಣೆಯ ಸಮಯದಲ್ಲಿ ಪೊಲೀಸರನ್ನು ಬಿಟ್ಟರೆ ಬೇರೆ ಯಾರೂ ಸಾಕ್ಷಿ ಹೇಳಲು ಮುಂದೆ ಬರಲಿಲ್ಲ. ಆಗ ಕೆಂಚಪ್ಪನವರನ್ನು ಬಂಧಿಸಲು ಪೊಲೀಸ್ ಮಹಾನಿರ್ದೇಶಕರು ಆಜ್ಞೆ ಹೊರಡಿಸಿದರು.

ಈ ವಿಷಯ ಕೆಂಚಪ್ಪನವರಿಗೆ ಗೊತ್ತಾದಾಗ ಒಬ್ಬ ಮುಸ್ಲಿಮನ ವೇಷ ಧರಿಸಿ, ರಾತ್ರೋ ರಾತ್ರಿ ಸೈಕಲ್ಲೇರಿ ಚಳ್ಳಕೆರೆಗೆ ಬಂದರು. ಅಲ್ಲಿ ಅಬಕಾರಿ ಅಧಿಕಾರಿಗಳಾಗಿದ್ದ ಹರಿಹರಪ್ಪನವರ ಮನೆಯಲ್ಲಿ ತಂಗಿದ್ದು, ಮುಂಜಾನೆ ತಮ್ಮ ಪ್ರಯಾಣ ಮುಂದುವರೆಸಿದರು. ಅನೇಕ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳಲು ಜನರನ್ನು ಹುರಿದುಂಬಿಸಿದರು. ಹಿರಿಯೂರು ತಾಲೂಕಿನ ಧರ್ಮಪುರ, ಹರಿಯಬ್ಬೆ, ರಂಗನಾಥಪುರ, ಕಸ್ತೂರಿ ರಂಗಪ್ಪನಹಳ್ಳಿ, ಮುಂತಾದ ಹಳ್ಳಿಗಳಲ್ಲಿ ಸಂಚರಿಸಿ ಜನರನ್ನು ಹುರಿದುಂಬಿಸಿ ಚಿತ್ರದುರ್ಗ ತಲುಪಿದಾಗ ಅವರನ್ನು ಬಂಧಿಸುವ ವಿಚಾರ ಒಬ್ಬ ಪೊಲೀಸ್ ಅಧಿಕಾರಿಯಿಂದಲೇ ತಿಳಿದು, ಮತ್ತೆ ಪ್ರಯಾಣ ಮುಂದುವರೆಸಿದರು. ಧಾರವಾಡ ಜಿಲ್ಲೆಯ ಈಸೂರಿನ ಬಸಪ್ಪನ ಗುಂಪನ್ನು ಭೇಟಿ ಮಾಡಿ ಮುಂದಿನ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಚಿತ್ರದುರ್ಗಕ್ಕೆ ಮರಳಿದರು. ಆದರೆ ರಾತ್ರಿ ಎರಡು ಗಂಟೆಯ ಸಮಯದಲ್ಲಿ ಕೆಂಚಪ್ಪನವರನ್ನು ಬಂಧಿಸಿ ಹಾಸನ ಜೈಲಿಗೆ ಸಾಗಿಸಿದರು. ಎರಡು ತಿಂಗಳ ಸೆರೆವಾಸದ ನಂತರ ಬಿಡುಗಡೆ ಮಾಡಲಾಯಿತು. ಮತ್ತೆ ೧೯೪೨ರಲ್ಲಿ ಅವರನ್ನು ಬಂಧಿಸಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಒಯ್ಯಲಾಯಿತು. ೧೯೪೭ರಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಬಂಧನದಿಂದ ಬಿಡುಗಡೆ ಮಾಡುವಂತೆ ಸರ್ಕಾರ ಆಜ್ಞೆ ಹೊರಡಿಸಿತು. ಆದರೆ ಕೆಂಚಪ್ಪನವರು ಹೊರಬರಲು ನಿರಾಕರಿಸಿ ಮತ್ತೆ ಏಳು ದಿನಗಳ ನಂತರ ಜೈಲಿನಿಂದ ಹೊರಬಂದರು.

ಸ್ವಾತಂತ್ರ್ಯ ಪಡೆದ ನಂತರ ಭಾರತ ಸರ್ಕಾರ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದವರಿಗೆ ತಾಮ್ರ ಪತ್ರ ನೀಡಲು ನಿರ್ಧರಿಸಿತು. ಅಂತೆಯೇ ಚಿತ್ರದುರ್ಗ ಜಿಲ್ಲೆಯಲ್ಲಿ ತಾಮ್ರ ಪತ್ರ ಪಡೆಯಲು ಅರ್ಹರೆನಿಸಿದವರಲ್ಲಿ ವಕೀಲ ಕೆಂಚಪ್ಪನವರು ಮೊದಲಿಗರು. ಆದರೆ ಅವರು ತಾಮ್ರ ಪತ್ರವನ್ನು ಸ್ವೀಕರಿಸಲು ನಿರಾಕರಿಸಿದರು.

ವಕೀಲ ಕೆಂಚಪ್ಪನವರು ಕಟ್ಟಾ ಸಮಾಜವಾದಿ. ಮೊದಲಿನಿಂದಲೂ ಪ್ರಜಾ ಸೋಷಿಯಲಿಸ್ಟ್ ಪಕ್ಷದಲ್ಲಿದ್ದವರು. ಗಾಂಧೀಜಿಯವರ ಕರೆಯಂತೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಹೋರಾಡಲು ಕಟ್ಟಿದ ಕಾಂಗ್ರೆಸ್ ಪಕ್ಷದ ಸದಸ್ಯರೂ ಆಗಿದ್ದರು.

೧೯೩೬ ರಲ್ಲಿ ನಡೆದ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಸ್ಪರ್ಧಿಸಿ, ಅತೀ ಹೆಚ್ಚು ಮತಗಳನ್ನು ಪಡೆದ ಕೆಂಚಪ್ಪನವರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿದರು. ನಿಜಲಿಂಗಪ್ಪನವರ ಸರ್ಕಾರದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಕೆಂಚಪ್ಪನವರು ಹಲವಾರು ಜನಹಿತ ಕಾರ್ಯಗಳನ್ನು ಮಾಡಿದರು.[೪೮]

ಮಾಜಿ ಮಂತ್ರಿಗಳಾದ ವಿ.ಮಸಿಯಪ್ಪನವರು ಹಿರಿಯೂರು ತಾಲೂಕಿನ ಆಲೂರು ಗ್ರಾಮದವರು. ಇವರು ತಾಲೂಕಿನ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಕಾರಣಕರ್ತರು.

ಅಡಿಟಿಪ್ಪಣಿಗಳು

೧. ನಂಜಣ್ಣನವರು ಎಸ್.ಎಸ್., ಸಜ್ಜನರ ಎಮ್.ಜಿ., ೨೦೦೨, ಭೂಗೋಳಶಾಸ್ತ್ರದ ಬೋಧನೆ, ಪು.೧.

೨. ಜನಗಣತಿಯ ಅಂಕಿಅಂಶಗಳ ಮಾಹಿತಿ ತಾಲ್ಲೂಕು ಕಚೇರಿ, ಹಿರಿಯೂರು, ೨೦೧೬.

೩. ಅಕ್ಷಾಂಶ, ರೇಖಾಂಶದ ಮಾಹಿತಿ, ಭಾರತ ವಾಯು ವಿಜ್ಞಾನ ಮತ್ತು ಹವಾಮಾನ ವೀಕ್ಷಣಾಲಯ ಇಲಾಖೆ, ಚಿತ್ರದುರ್ಗ, ೨೦೧೬.

೪. ಹಿರಿಯೂರು ತಾಲೂಕಿನ ವಿಸ್ತೀರ್ಣದ ಮಾಹಿತಿ, ಕೃಷಿ ಇಲಾಖೆ, ಹಿರಿಯೂರು, ೨೦೧೬.

೫. ಗಿರಿಜಾ.ಟಿ, ಚಿತ್ರದುರ್ಗ ಜಿಲ್ಲಾದರ್ಶಿನಿ, ೧೯೯೧, ಪು.೩೩೫

೬ ಶಿವರಾಮಕಾರಂತ, ಸಿರಿಗನ್ನಡ ಅರ್ಥಕೋಶ, ೧೯೪೧, ಪು.೧೪೧

೭ ಗೋಪಾಲಕೃಷ್ಣ ವಿ., ಸ್ಥಳನಾಮ ಅಧ್ಯಯನಗಳು, ೧೯೮೭, ಪು.೬೦೬

೮. ಗೋಪಾಲ್ ಆರ್.(ಸಂ.), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೫ (ಸಂ), ಪು.೧೧

೯. ಶಿವರಾಮ ಕಾರಂತ, ಪೂರ್ವೋಕ್ತ, ಪು.೩೯೬

೧೦. ಗೋಪಾಲಕೃಷ್ಣ ವಿ., ಪೂರ್ವೋಕ್ತ, ೧೯೮೭, ಪು.೪೧

೧೧. ಅದೇ, ಪು.೬೭೯

೧೨. ಪಪ್ಪು ಆರ್.ಎಸ್., ಪ್ರಾಚೀನತಮ ಮಾನವ ಸಂಸ್ಕೃತಿಗಳು, ವಿಕಸನದ ಹಂತಗಳು, ಕರ್ನಾಟಕ ಚರಿತ್ರೆ ಸಂ.೧, ೧೯೯೭, ಪು.೯೭

೧೩. ಅದೇ, ಪು.೯೮

೧೪. ಗೋಪಾಲ್ ಆರ್., (ಸಂ), ಪೂರ್ವೋಕ್ತ, ೨೦೦೫, ಪು.೧೧

೧೫. ಲಕ್ಷ್ಮಣ್ ತೆಲಗಾವಿ, ಮೌರ್ಯ ಮತ್ತು ಶಾತವಾಹನ ಯುಗ, ೨೦೦೪, ಪು.೨೦೭

೧೬. ರಾಮದಾಸ ರೆಡ್ಡಿ, ಎಸ್.ಜಿ., ಕ್ಷೇತ್ರಕಾರ್ಯ (ಇತಿಹಾಸ ಮತ್ತು ಶೋಧಕಾರ್ಯ), ೨೦೧೧, ಪು.೬೭

೧೭. ರಾಮದಾಸ ರೆಡ್ಡಿ, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, ೨೦೦೯, ಪು.೯೫

೧೮. ಅದೇ ಪು.೯೬

೧೯. ಅದೇ ಪು.೬೯

೨೦. ಶಿವತಾರಕ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ೨೦೦೧, ಹಂಪಿ, ಪು.೨೫೯

೨೧. ಗಿರಿಜಾ.ಟಿ., ಪೂರ್ವೋಕ್ತ, ೧೯೯೧, ಪು.೩೩೬

೨೨. ಸುಂದರ ಅ., ಕರ್ನಾಟಕ ಚರಿತ್ರೆ, ಸಂ.೧, ೧೯೯೭, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.೨೮೦

೨೩. ಅದೇ ಪು.೨೮೯

೨೪. ಚಂದ್ರವಳ್ಳಿ, ಪೂರ್ವೋಕ್ತ, ಪು.೯

25. Krishna M.H., *Excavation at Chandravalli and Bramhagiri,* 1931, p.271

26. *Ibid,* p.28

27. *Ibid,* p.278

೨೮. ಎಫಿಗ್ರಾಫಿಯ ಕರ್ನಾಟಿಕ ಸಂ.೧೧, (ಹಳೆಯ), ೧೯೦೩, ಸಂ.೩೯, ಹಿರಿಯೂರು, ಪು.೨೦೨

೨೯. ಎ.ಕ. ಸಂ.೧೧ (ಹಳೆಯ), ೧೯೦೩, ಶಾಸನ ಸಂ.೩೯, ಪು.೩೧೦

೩೦. ಅದೇ, ಪು.೧೦

೩೧. ಕರ್ನಾಟಕ ಪರಂಪರೆ, ಭಾಗ–೧, (ಚಾರಿತ್ರಿಕ ಯುಗ), ೧೯೭೦, ಪು.೧೨೭

೩೨. ಬಸವರಾಜು ಕೆ.ಆರ್., (ಸಂ.), ನೊಳಂಬ ಇತಿಹಾಸ ದರ್ಶನ, ೨೦೦೧, ಪು.೧೮

೩೩. ಅದೇ ಪು.೧೯

೩೪. ಅದೇ ಪು.೨೦

೩೫. ಎ.ಕ. ಸಂ.೧೧ (ಹಳೆಯ), ೧೯೦೩, ಸಂ.೧, ಹಿರಿಯೂರು ಪು.೨೮೮

೩೬. ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ (ಸಂ), ಚಂದ್ರವಳ್ಳಿ, ೧೯೭೬, ಪು.೩೫

೩೭. ಎ.ಕ. ಸಂ.೧೧ (ಹಳೆಯ), ೧೯೦೩, ಚಿತ್ರದುರ್ಗ, ಪು.೧೬

೩೮. ಅದೇ ಪು.೧೭

೩೯. ಗಿರಿಜಾ ಟಿ., ಪೂರ್ವೋಕ್ತ, ೧೯೯೧, ಪು.೩೩೫

೪೦. ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ (ಸಂ.), ಪೂರ್ವೋಕ್ತ, ಪು.೩೫

೪೧. ಎ.ಕ. ಸಂ.೧೧ (ಹಳೆಯ), ಹಿರಿಯೂರು ೬, ಪು.೨೯೦

೪೨. ಅದೇ, ಹಿರಿಯೂರು ೬, ಪು.೨೮೮-೨೯೪

೪೩. ಚಿತ್ರಲಿಂಗಯ್ಯ ಎಂ.ವಿ., ಹರತಿ ಪಾಳೆಗಾರರ ಮೂಲ ವಂಶಾವಳಿ ಒಂದು ವ್ಯಾಸಂಗ, ಹರತಿಸಿರಿ, ಲಕ್ಷ್ಮಣ್ ತೆಲಗಾವಿ (ಸಂ.), ೧೯೮೭, ಪು.೨೮೨೮

೪೪. ಅದೇ, ಪು.೩೦೦

೪೫. ಎ.ಕ. ಸಂ.೧೧ (ಹಳೆಯ), ಹಿರಿಯೂರು ೬, ಪು.೨೯೦

೪೬. ಚಿತ್ರಲಿಂಗಯ್ಯ ಎಂ.ವಿ., ಹರತಿ ಪಾಳೆಯಗಾರರ ಮೂಲ ವಂಶಾವಳಿ ಒಂದು ವ್ಯಾಸಂಗ, ಹರತಿಸಿರಿ, ಲಕ್ಷ್ಮಣ್ ತೆಲಗಾವಿ (ಸಂ), ೧೯೮೭, ಪು.೩೧೬

೪೭. ಮುಕುಂದರೆಡ್ಡಿ, ಹಿರಿಯೂರು ತಾಲೂಕು ದರ್ಶನ, ೧೯೮೭, ಪು.೧೩

೪೮. ಅದೇ ಪು.೧೬

❑❑❑

ಅಧ್ಯಾಯ : ಮೂರು

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

೩.೧. ದೇವಾಲಯಗಳು

೩.೨. ಮೂರ್ತಿಶಿಲ್ಪಗಳು

೩.೩. ಶ್ರೀತೇರುಮಲ್ಲೇಶ್ವರ ದೇವಾಲಯದ ಭಿತ್ತಿಚಿತ್ರಗಳು

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

೩.೧ ದೇವಾಲಯದ ಉಗಮ ಮತ್ತು ವಿಕಾಸ

ವಾಸ್ತವವಾಗಿ ಕಲೆ ಎಂದರೆ, ಮನುಷ್ಯನ ನಿಗೂಢ ಭಾವನೆಗಳನ್ನು ಚಿತ್ರಶಿಲ್ಪಕಲೆಗಳ ರೂಪದಲ್ಲಿ ತೋರಿಸುವುದೇ ಆಗಿದೆ. ಜೀವನದ ಸಾಮಾಜಿಕ, ರಾಜಕೀಯ, ಮತ್ತು ಸಾಂಸ್ಕೃತಿಕ ಘಟನಾವಳಿಗಳ ವಿಶಿಷ್ಟ ರೂಪವೇ ಕಲೆ ಎಂದು ಹೇಳಬಹುದು. ಈ ಕಲೆ ಆದಿಮಾನವನ ಕಾಲದಿಂದಲೂ ಬೆಳೆದು ಬಂದುದನ್ನು ಕಾಣುತ್ತೇವೆ. ಮನುಷ್ಯನಲ್ಲಿ ಕಾಣುವ ಮುಖ್ಯಗುಣಗಳೆಂದರೆ, ತಾನು ಕಂಡು ಅನುಭವಿಸಿದ ಸಿಹಿ-ಕಹಿ ಅನುಭವಗಳನ್ನು ಕಲೆಯ ರೂಪದಲ್ಲಿ ತೋರಿಸುವುದು. ತನ್ನ ಆತಂಕಗಳನ್ನು, ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಕಲೆಯ ಮೂಲಕ ಇತರರಿಗೆ ತಿಳಿಯಪಡಿಸುವುದು. ಈ ರೀತಿ ಮಾನವನಲ್ಲಿ ಅಂತರ್ಗತವಾಗಿರುವ ಅಭಿವ್ಯಕ್ತಿಯೇ ಕಲೆಯಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಯಾವುದೇ ಒಂದು ಕೆಲಸವನ್ನು ನಿಯಮಬದ್ದವಾಗಿ, ಕ್ರಮಬದ್ಧವಾಗಿ ಮಾಡುವುದೇ ಕಲೆ ಎನಿಸಿಕೊಳ್ಳುತ್ತದೆ.

ಗಟ್ಟಿಯಾದ ವಸ್ತುವಿನಿಂದ ವಾಸ್ತುವಿನ (ನಿವೇಶನ) ಮೇಲೆ ರಚನೆಗೊಂಡ ಎಲ್ಲ ವಾಸಯೋಗ್ಯ ರಚನೆಗಳೂ ವಾಸ್ತುರಚನೆ ಎನಿಸಿಕೊಳ್ಳುತ್ತವೆ. ಈ ರೀತಿಯ ವಾಸ್ತುರಚನೆಗಳು ಮಾನವನ ನಾಗರೀಕತೆಯ ಮಾನದಂಡ ಎಂದರೂ ತಪ್ಪಾಗಲಾರದು. ಕಾಲಾಂತರದಲ್ಲಿ ಮಾನವನ ಬೌದ್ಧಿಕ ವಿಕಸನದ ರೀತಿಯ ಖಚಿತತೆಯ ಪ್ರತ್ಯಕ್ಷ ಸಾಕ್ಷಿಗಳೆಂದು ಹೇಳಬಹುದು.[೧]

ಮಾನಸಾರ, ಮಯಮತ, ಕಶ್ಯಪ, ವೈಖಾನಸ, ವಿಶ್ವಕರ್ಮೀಯ, ಇನ್ನು ಮೊದಲಾದ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ದೇವಾಲಯಗಳ ನಿರ್ಮಾಣ ಕುರಿತ ಆನೇಕ ವಿವರಗಳು ದೊರೆಯುತ್ತವೆ. ದುರಾದೃಷ್ಟವಶಾತ್ ಈ ಎಲ್ಲ ಗ್ರಂಥಗಳು ಪೂರ್ಣಪ್ರಮಾಣದಲ್ಲಿ ದೊರೆಯದೇ ಇದ್ದುದು ದೇವಾಯಗಳ ಬಗ್ಗೆ ಇನ್ನು ಹೆಚ್ಚಿನ ವಿವರಗಳ ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ.[೨] ಆದರೂ ಮಾನಸಾರ ಗ್ರಂಥವು ದೇವಾಲಯಗಳ ನಿರ್ಮಾಣದ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಸುತ್ತದೆ. ಈ ಗ್ರಂಥವು ಒಟ್ಟು ೫೮ ಅಧ್ಯಾಯಗಳನ್ನು ಹೊಂದಿದ್ದು, ಪ್ರತಿ ಅಧ್ಯಾಯದಲ್ಲೂ ದೇವಾಲಯಗಳ ನಿರ್ಮಾಣದ ಉದ್ದೇಶ, ಶಿಲ್ಪಿಗೆ ಇರಬೇಕಾದ ಅರ್ಹತೆಗಳು, ದೇವಾಲಯ ನಿರ್ಮಾಣ

ಯೋಗ್ಯ ಸ್ಥಳ, ದೇವಾಲಯಗಳನ್ನು ಗ್ರಾಮ, ನಗರಗಳ ಯಾವ ಭಾಗದಲ್ಲಿ, ಯಾವ ದಿಕ್ಕಿನಲ್ಲಿ ಕಟ್ಟಬೇಕು, ತಳವಿನ್ಯಾಸ, ಅಧಿಷ್ಠಾನ, ಶಿಖರ, ದೇವರುಗಳ ಪ್ರತಿಷ್ಠಾಪನೆ, ಪರಿವಾರ ದೇವರುಗಳ ಪ್ರತಿಷ್ಠಾಪನೆ ಇನ್ನು ಮುಂತಾದ ವಿವರಗಳನ್ನು ತಿಳಿಸುತ್ತದೆ.[೩]

ಮಯಮತ ಗ್ರಂಥವೂ ಸಹ ಮಾನಸಾರ ಕೃತಿಯಲ್ಲಿರುವ ವಿವರಗಳನ್ನು ಹೇಳುತ್ತಾರೆ, ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದಾಗ ವಾಸ್ತುಪುರುಷನ್ನು ತೃಪ್ತಿಪಡಿಸಲು ಮಾಡಬೇಕಾದ ಸಂಸ್ಕಾರ, ವಿಧಿ, ವಿಧಾನಗಳನ್ನು ತಿಳಿಸುತ್ತದೆ. ದೇವಾಲಯದ ಉಪಪೀಠ, ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಟ್ಟಡದ ಮೇಲ್ಛಾವಣಿ, ದೇವಾಲಯದ ಶಿಖರ, ಪ್ರಕಾರ, ಮಂಟಪಗಳು, ಬಲಿಪೀಠ, ಇನ್ನು ಮುಂತಾದ ವಿವರಗಳನ್ನು ತಿಳಿಸುತ್ತದೆ. ಈ ಗ್ರಂಥದ ಕರ್ತೃ 'ಮಯ' ಇರಬಹುದೆಂದು ಹೇಳಲಾಗುತ್ತದೆ.[೪]

ಕಶ್ಯಪ ಋಷಿಯಿಂದ ರಚನೆಗೊಂಡ 'ಕಶ್ಯಪ' ಕೃತಿಯು ಗದ್ಯರೂಪದಲ್ಲಿದ್ದು, ಹೆಚ್ಚುಕಡಿಮೆ ಮೇಲೆ ವಿವರಿಸಿದ ವಿಷಯಗಳನ್ನೇ ವಿವರಿಸುತ್ತದೆ. ದೇವಾಲಯ ನಿರ್ಮಾಣಕ್ಕೆ ಬೇಕಾದ ಸೂಕ್ಷ್ಮವಾದ ಸ್ಥಳ, ದೇವಾಲಯ ನಿರ್ಮಾಣದ ಪ್ರಾರಂಭದಲ್ಲಿ ಮಾಡಬೇಕಾದ ಸಂಸ್ಕಾರಗಳು, ದ್ವಾರಗಳು, ಅಲಂಕರಣೆಗಳು, ದೇವಕೋಷ್ಟಗಳು, ಶಿಖರ, ವಿಮಾನ, ಪ್ರಮುಖ ದೇವ, ದೇವತೆಗಳ ವಿಗ್ರಹಗಳು, ಇತ್ಯಾದಿ ವಿವರಗಳನ್ನು ತಿಳಿಸುತ್ತದೆ. ವೈಖಾನಸ ಋಷಿಯಿಂದ ರಚಿಸಲ್ಪಟ್ಟ 'ವೈಖಾನಸ' ಗ್ರಂಥವು ದೇವಾಲಯಗಳು, ಗ್ರಾಮ, ನಗರ, ಪಟ್ಟಣಗಳನ್ನು ಕಟ್ಟುವ ಮೊದಲು ಮಾಡಬೇಕಾದ ಸಂಸ್ಕಾರ ವಿಧಾನಗಳನ್ನೇ ವಿಶೇಷವಾಗಿ ಈ ಗ್ರಂಥವು ತಿಳಿಸುತ್ತದೆ.[೫] ಸಕಲಾಧಿಕಾರ ಇನ್ನು ಮುಂತಾದ ಶಿಲ್ಪಶಾಸ್ತ್ರ ಗ್ರಂಥಗಳೂ ಸಹ ದೇವಾಲಯಗಳ ನಿರ್ಮಾಣ ಮತ್ತಿತರ ವಿವರಗಳನ್ನು ತಿಳಿಸುತ್ತವೆ. ಹೀಗೆ ಈ ಗ್ರಂಥಗಳಲ್ಲಿ ಉಲ್ಲೇಖಗೊಂಡಿರುವ ಅಂಶಗಳ ಹಿನ್ನೆಲೆಯಲ್ಲಿ ದೇವಾಲಯಗಳ ಉಗಮ, ನಿರ್ಮಾಣ ಮತ್ತು ವಿಕಾಸವನ್ನು ಈ ಮುಂದಿನಂತೆ ನೋಡಬಹುದು.

ಸಂಖ್ಯೆ : ೦೧

ಹೆಸರು : ತೇರುಮಲ್ಲೇಶ್ವರ

ಸ್ಥಳ : ಕೆಂಚಪ್ಪನಾಯಕನ ಹೆಬ್ಬಾಗಿಲು ರಸ್ತೆಯ ಸಮೀಪ

ಕಾಲಮಾನ : ಕ್ರಿಶ ೧೫ನೇ ಶತಮಾನ

ಅಭಿಮುಖ : ಪೂರ್ವ

ಶೈಲಿ : ವಿಜಯನಗರ

ಸಂರಕ್ಷಣೆ : ಮುಜುರಾಯಿ ಇಲಾಖೆ

ನಗರದ ಮಧ್ಯಭಾಗದಲ್ಲಿ ಐತಿಹಾಸಿಕ ಪ್ರಸಿದ್ಧ ಶ್ರೀತೇರುಮಲ್ಲೇಶ್ವರ ದೇವಾಲಯವಿದೆ. ವಿಜಯನಗರ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯ ದಕ್ಷಿಣಾಭಿಮುಖವಾಗಿದ್ದು ಪೂರ್ವಭಿಮುಖವಾಗಿ ದ್ವಾರಗೋಪುರ ಹೊಂದಿದೆ. ಮಹಾರಾಜಾಧಿರಾಜ ವೀರಪ್ರತಾಪ ಸದಾಶಿವರಾಯ ವಿದ್ಯಾನಗರಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ಸಮಯದಲ್ಲಿ ಕೆಂಚ್ಚಪ್ಪನಾಯಕ ಹಿರಿಯೂರ ತಿರುಮಲ ದೇವರಿಗೆ ದತ್ತಿನೀಡಿದ ಬಗ್ಗೆ ಕ್ರಿಶ ೧೫೬೭ರ ಶಾಸನ ತಿಳಿಸುತ್ತದೆ.[೬]

ದೇವಾಲಯ ತಳವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ ಆಯತಾಕಾರದ ಮಂಟಪ ನವರಂಗ ಹಾಗೂ ಸಭಾಮಂಟಪಗಳನ್ನು ಹೊಂದಿದೆ. ದೇವಾಲಯದ ಸುತ್ತಲೂ ಪ್ರಕಾರವಿದ್ದು ದ್ವಾರಗೋಪುರವನ್ನು ಹೊಂದಿದೆ ಪ್ರಾಯಶಃ ದ್ವಾರಗೋಪುರ ನಂತರ ಕಾಲದ್ದಾಗಿದ್ದು ಇದನ್ನು ನೋಡಿದ ತಕ್ಷಣ ಹಂಪೆಯ ವಿರೂಪಾಕ್ಷ, ಮೈಸೂರಿನ ಚಾಮುಂಡೇಶ್ವರಿ ದೇವಾಲಯಗಳು ನೆನಪಿಗೆ ಬರುತ್ತದೆ.

ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದ್ದು ನಾಲ್ಕು ಮೂಲೆಗಂಬಗಳನ್ನು ಹೊಂದಿದೆ. ಮಧ್ಯದಲ್ಲಿ ಶಿವಲಿಂಗವಿದೆ. ಶಿವಲಿಂಗಕ್ಕೆ ಯಾವುದೇ ಪೀಠಪಟ್ಟಿಕೆಗಳಿಲ್ಲ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ನಾಲ್ಕು ಅರೆಗಂಬಗಳ ಮುಚ್ಚಿದ ಅಂತರಾಳವಿದೆ. ಅಂತರಾಳದ ಮಧ್ಯದಲ್ಲಿ ಕುಳಿತ ನಂದಿ ಇರುವುದು, ಗರ್ಭಗೃಹದ ಪ್ರವೇಶದ್ವಾರದಲ್ಲಿ ಪಂಚಶಾಖೆಗಳಿವೆ. ಲಲಾಟದಲ್ಲಿ ಶಿವಲಿಂಗದ ಕೆತ್ತನೆ ಇರುವುದು ದ್ವಾರದ ಕೆಳಭಾಗದಲ್ಲಿ ಪಂಚಶಾಖೆಗಳಗಲಿವೆ.ಲಲಾಟದಲ್ಲಿ ಶಿವಲಿಂಗದ ಕೆತ್ತನೆ ಇರುವುದು ದ್ವಾರದ ಕೆಳಭಾಗದಲ್ಲಿ ಪೂರ್ಣ ಕಲಶಗಳಿವೆ. ಅಂತರಾಳದ ಪ್ರವೇಶದ್ವಾರವು ಸಹ ಪಂಚಶಾಖೆಗಳನ್ನು ಹೊಂದಿದೆ ಲಲಾಟದಲ್ಲಿ ಗಣಪತಿಯ ಉಬ್ಬುಕೆತ್ತನೆ ಇದೆ. ಪೇದ್ಯದಲ್ಲಿ ಶೈವ ದ್ವಾರಪಾಲಕರು ಬದಿಗಳಲ್ಲಿ ಭಕ್ತರ ಉಬ್ಬುಕೆತ್ತನೆಗಳಿವೆ.

ಅಂತರಾಳಕ್ಕೆ ಹೊಂದಿಕೊಂಡಂತೆ ನಂದಿಮಂಟಪವಿದೆ ಆದರೆ ಈ ಯಾವುದೇ ನಂದಿ ಶಿಲ್ಪಗಳಿಲ್ಲ. ಈ ಮಂಟಪದಲ್ಲಿ ಅಭಿಮುಖವಾಗಿರುವಂತೆ ಎರಡು ಗುಡಿಗಳನ್ನು ನಿರ್ಮಿಸಲಾಗಿದೆ. ಬಲಬದಿಯ ಗುಡಿಯಲ್ಲಿ ಪಾರ್ವತಿಯ ಶಿಲ್ಪವಿದೆ. ಎಡಬದಿಯ ಗುಡಿಯಲ್ಲಿ ಯಾವುದೇ ಶಿಲ್ಪವಿಲ್ಲ. ಬಲಬದಿಯ ಗುಡಿಯ ಪ್ರವೇಶದ್ವಾರದಲ್ಲಿ ದೀಪಸುಂದರಿಯರಿರುವರು, ಎಡಬದಿಯ ಗುಡಿಯ ದ್ವಾರದ ಇಕ್ಕೆಲಗಳಲ್ಲಿ ಶಿವಲಿಂಗಕ್ಕೆ ಕೈಮುಗಿಯುತ್ತಿರುವ ಭಕ್ತ ಹಾಗೂ ಶೈವ ಯತಿಯ ಉಬ್ಬುಕೆತ್ತನೆಗಳಿವೆ.

ನಂದಿಮಂಟಪಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳ ನವರಂಗ ಇರುವುದು, ಇದರ ಪ್ರವೇಶ ದ್ವಾರಕ್ಕೆ ನಂತರ ಕಾಲದಲ್ಲಿ ಹಿತ್ತಾಳೆಯ ಹೊದಿಕೆಯ ಅಲಂಕರಣೆ ಮಾಡಿರುವರು, ನವರಂಗದ ಮಧ್ಯದ ನಾಲ್ಕು ಕಂಬಗಳು ಪೀಠಪಾದ ಅಷ್ಟಮುಖದಿಂಡು ಚೌಕ ಅಷ್ಟಮುಖ ದಿಂಡು ಮತ್ತು ಬೋದಿಗೆಯಲ್ಲಿವೆ. ಕಂಬಗಳ ಪ್ರತಿ ಚೌಕ ಭಾಗಗಳ ಪ್ರತಿ ಮುಖದಲ್ಲೂ

ಉಬ್ಬುಕೆತ್ತನೆಗಳನ್ನು ಕಾಣಬಹುದು ಈ ರೀತಿಯ ಅಲಂಕರಣೆ ಈ ಕಾಲದಲ್ಲಿ ಸಾಮಾನ್ಯ. ಉಬ್ಬುಕೆತ್ತನೆಗಳಲ್ಲಿ ಇಂದ್ರ, ವೀರಭದ್ರ, ಕುಬೇರ, ನೃತ್ಯಗಾರ್ತಿ, ವಾದ್ಯಗಾರರು, ಆತ್ಮಲಿಂಗಕ್ಕೆ ಪೂಜಿಸುವವ ವರುಣ, ಹಾವಾಡಿಗ, ಅಗ್ನಿ, ಭಕ್ತ, ವ್ಯಾಳ, ನೃತ್ಯಗಾರ್ತಿ ಭಕ್ತ, ಹಂಸ, ಈಶಾನ, ಯತಿ, ಗಜದೊಂದಿಗೆ ಹೋರಾಡುವವ ಶೈವಯತಿ ದೇವಿ, ವೃತ್ಯಗಾರ್ತಿ, ವಾದ್ಯಗಾರರು, ಕಾಮಧೇನು, ಯತಿ, ಭೈರವ, ನಂದಿರೂಢಶಿವ, ವ್ಯಾಳ, ಇಂದ್ರ, ಶೈವಯತಿ, ದೇವಿ, ಗಣೇಶ, ಹಂಸ, ವೀರಭದ್ರ, ಅಗ್ನಿ, ಬೇಡರ ಕಣ್ಣಪ್ಪ, ನಾಣ್ಯಸ್ತ್ರೀ ಇತ್ಯಾದಿ ಶಿಲ್ಪಗಳು ಕಾಣಿಸಿವೆ. ನವರಂಗದ ವಿತಾನದಲ್ಲಿ ಪದ್ಮದ ಅಲಂಕರಣೆ ಇರುವುದು ಇಲ್ಲಿ ಪದ್ಮವನ್ನು ನಾಲ್ಕು ಗಿಣಿಗಳು ಸುತ್ತವರೆದಂತೆ ತೋರಿಸಲಾಗಿದೆ. ನವರಂಗಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಿಗೆ ಎರಡು ಪ್ರವೇಶ ದ್ವಾರಗಳಿವೆ ದಕ್ಷಿಣ ದ್ವಾರವೇ ಮುಖ್ಯದ್ವಾರ.

ನವರಂಗಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳ ಸಭಾಮಂಟಪವಿದೆ. ಸಭಾಮಂಟಪಕ್ಕೆ ಸುತ್ತಲೂ ಕಕ್ಷಾಸನವಿದ್ದು ಕಕ್ಷಾಸನದಲ್ಲಿ ಹದಿನಾರು ಕಂಬಗಳಿವೆ ಸಭಾಮಂಟಪದಲ್ಲಿರುವ ಒಟ್ಟು ಈ ಇಪ್ಪತ್ತು ಕಂಬಗಳಲ್ಲಿ ಮೂರು ಶೈಲಿಯ ಕಂಬಗಳನ್ನು ಅಳವಡಿಸಲಾಗಿದೆ. ಮಧ್ಯದ ನಾಲ್ಕು ಕಂಬಗಳು ಸಿಂಹಹಸ್ತಿ ಕಂಬಗಳಾಗಿಯೂ ಕಕ್ಷಾಸನದ ಮೂಲೆಗಳಲ್ಲಿರುವ ಆರು ಕಂಬಗಳು ಮತ್ತೊಂದು ಶೈಲಿಯಲ್ಲಿಯೂ ಉಳಿದ ಹತ್ತು ಕಂಬಗಳು ಮತ್ತೊಂದು ರೀತಿಯಲ್ಲಿಯೂ ಇರುವವು. ಸಿಂಹಹಸ್ತಿ ಕಂಬಗಳ ಒಂದು ಮುಖದಲ್ಲಿ ಆನೆಗಳ ಮೇಲೆ ನಿಂತಿರುವ ಸಿಂಹ ತನ್ನ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆತ್ತಿ ನೆಗೆಯುತ್ತಿರುವಂತಿವೆ. ಮತ್ತೊಂದು ಶೈಲಿಯ ಕಂಬಗಳಲ್ಲಿ ಸ್ತಂಭಗಳ ಒಂದು ಮುಖದಲ್ಲಿನ ಸಿಂಹಗಳ ಬದಲಿಗೆ ಮತ್ತೊಂದು ಕಿರು ನೀಳಕಂಬ ಅಳವಡಿಸಿರುವರು (ಮಿಶ್ರಕ ಸ್ತಂಭ). ಮತ್ತೊಂದು ಶೈಲಿಯ ಕಂಬಗಳಲ್ಲಿ ಈ ಯಾವುದೇ ಹೆಚ್ಚುವರಿ ಭಾಗವಿಲ್ಲದೆ ಸಾಮಾನ್ಯ ಕಂಬಗಳಾಗಿವೆ. ಈ ಕಂಬಗಳ ಪ್ರತಿ ಚೌಕ ಭಾಗಗಳಲ್ಲಿಯೂ ಸಹ ಉಬ್ಬುಶಿಲ್ಪಗಳಾಗಿವೆ. ಅವು ವ್ಯಾಳ, ಹಂಸ, ಶೈವಯತಿ, ನಂದಿ, ಶಂಖ, ಭಕ್ತ, ನಾಣ್ಯಗಾರರು, ಪೂರ್ಣ ಕಳಶ, ವ್ಯಾಳ, ನೃತ್ಯಗಾರರು, ಯತಿ, ಹಂಸ, ಪುಂಗಿ ಊದುವವ, ಗಂಡುಬೇರುಂಢ, ಬೇಡರ ಕಣ್ಣಪ್ಪ ಇತ್ಯಾದಿ ಈ ಶಿಲ್ಪಗಳಲ್ಲಿ ಬಹುತೇಕ ಶಿಲ್ಪಗಳು ಶೈವ ಧರ್ಮದವಾಗಿವೆ.

ದೇವಾಲಯದ ಸಭಾಮಂಟಪಕ್ಕೆ ಮೂರು ಪ್ರವೇಶದ್ವಾರಗಳಿವೆ. ಇವು ಸ್ವಲ್ಪ ಮುಂಚಾಚಿದ್ದು ಚಾಲುಕ್ಯರ ಕಾಲದ ಅರ್ಧಮಂಟಪಗಳನ್ನು ನೆನಪಿಗೆ ತರುತ್ತವೆ ದೇವಾಲಯವು ಅಧಿಷ್ಠಾನದ ಮೇಲಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಗಳ, ತ್ರಿಪಟಕುಮುದ, ಕಂಠ, ಚಾಚುಪಟ್ಟಿಕೆಗಳಿವೆ.[೭] ಭಿತ್ತಿ ಸರಳವಾಗಿದೆ ಪ್ರಸ್ತರ ಹಾಗೂ ಶಿಖರಗಳು ನಂತರ ಕಾಲದ್ದಾಗಿವೆ. ಪ್ರಸ್ತರದ ಮೇಲೆ ಸುತ್ತಲೂ ದೇವಕೋಷ್ಟಗಳ ಅಲಂಕರಣೆ ಇದ್ದು ನಂತರ ಕಾಲದ ಶಿಲ್ಪಗಳ ಕೆತ್ತನೆಯು ಇರುವುದು ದೇವಾಲಯದ ಬಲಭಾಗದ ಭಿತ್ತಿಯಲ್ಲಿ ಒಂದೆರಡು ಉಬ್ಬುಶಿಲ್ಪಗಳಿವೆ. ಹಿಂಬದಿಯ

ಭಿತ್ತಿಯಲ್ಲಿ ಅದಕ್ಕೂ ಸ್ವಲ್ಪ ಹೆಚ್ಚಿನ ಪ್ರಮಾಣದ ಉಬ್ಬುಶಿಲ್ಪಗಳು ಗೋಚರಿಸಿವೆ, ಇದಕ್ಕೆ ವ್ಯತಿರಿಕ್ತವಾಗಿ ದೇವಾಲಯದ ಎಡಭಾಗದ ಭಿತ್ತಿಯಲ್ಲಿ ಸಾಕಷ್ಟ ಪ್ರಮಾಣದ ಕಥಾನಿರೂಪಣ ಶಿಲ್ಪಗಳಿವೆ (ಬಣ್ಣ ಬಳಿದಿರುವುದರಿಂದ ಅಸ್ಪಷ್ಟವು). ದೇವಾಲಯದ ಸುತ್ತಲೂ ಬಲಿಪೀಠಗಳಿವೆ.

ದೇವಾಲಯದ ಮುಂಭಾಗದ ನಾಲ್ಕು ಸ್ವಂತಂತ್ರ ಕಂಬಗಳ ಮೇಲೆ ನಿರ್ಮಿಸಿದ ನಂದಿ ಮಂಟಪವಿದ್ದು. ಇಲ್ಲಿಯ ಗೂಡಿನಲ್ಲಿ ಕುಳಿತ ನಂದಿ ಇರುವುದು, ಮಂಟಪದಲ್ಲಿ ಬಲಿಪೀಠ, ನಾಗಶಿಲ್ಪ ಇತ್ಯಾದಿಗಳಿವೆ. ನಂದಿ ಮಂಟಪದ ಹಿಂಭಾಗ ಜಗತಿ ಮೇಲೆ ಬೃಹದಾಕಾರದ ದೀಪಸ್ತಂಭ ಇರುವುದು. ದೀಪಸ್ತಂಭದ ಕೆಳಗೆ ಭಕ್ತ/ನಾಯಕ ಶಿಲ್ಪವನ್ನು ಕಂಡರಿಸಲಾಗಿದೆ. ಮತ್ತೊಂದು ಮಗ್ಗುಲಲ್ಲಿ ಕುಳಿತ ನಂದಿ ಇರುವುದು.

ದೇವಾಲಯದ ಸುತ್ತಲೂ ಪ್ರಾಂಗಣ ಇರುವುದು. ಪ್ರಾಂಗಣದ ಪೂರ್ವಕ್ಕೆ ಎರಡು ಕಂಬಗಳ ದ್ವಾರಮಂಟಪ ಇದೆ. ಈ ಕಂಬಗಳ ಒಂದು ಮುಖದಲ್ಲಿ ಗಣಪ, ನಾಗಬಂಧ, ಶೈವಯತಿ ಮತ್ತೊಂದು ಕಂಬದಲ್ಲಿ ಭೈರವ, ಪದ್ಮ ಮತ್ತು ಶೈವಯತಿಯರ ಉಬ್ಬುಶಿಲ್ಪಗಳಿವೆ. ದೇವಾಲಯದ ಮುಂಭಾಗ ನಾಲ್ಕು ಕಂಬಗಳ ಮುಖಮಂಟಪವಿದೆ. ಮುಖಮಂಟಪದಲ್ಲಿ ಜಗತಿಯ ಅಳವಡಿಕೆ ಇದೆ. ಮುಖ್ಯ ಪ್ರದೇಶದಲ್ಲಿ ಶಾಖೆಗಳ ಅಲಂಕರಣ ಇದೆ. ಕೆಳಗೆ ಶೈವ ದ್ವಾರಪಾಲಕರಿರುವರು. ದ್ವಾರಮಂಟಪಕ್ಕೆ ಐದು ಅಂತಸ್ತುಗಳ ರಾಯಗೋಪುರವಿದೆ.

ದೇವಾಲಯವನ್ನು ಗಮನಿಸಿದರೆ ಈ ಕಾಲದಲ್ಲಿ ನಮಗೆ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುವ ದೇವಾಲಯಗಳೆಂದರೆ ವೈಷ್ಣವ ಧರ್ಮಕ್ಕೆ ಸಂಬಂಧಿಸಿದವುಗಳು ಇಲ್ಲಿ ಕಂಡುಬರುವ ಶೈವ ಧರ್ಮದ ದೇವಾಲಯಗಳಲ್ಲಿ ಇದು ಪ್ರಮುಖವಾದುದಾಗಿದೆ. ಶೈವ ಮತ್ತು ವೈಷ್ಣವ ದೇವಾಲಯಗಳಿಗೆ ವಾಸ್ತಶಿಲ್ಪ ದೃಷ್ಟಿಯಿಂದ ಯಾವುದೇ ರೀತಿಯ ವ್ಯತ್ಯಾಸ ಕಂಡುಬರುವುದಿಲ್ಲ. ವೈಷ್ಣವ ದೇವಾಲಯಗಳಲ್ಲಿ ಆ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳು ಅಧಿಕವಾಗಿ ಕಂಡುಬರುವವು. ಶೈವ ದೇವಾಲಯಗಳಲ್ಲಿ ಶೈವ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳು ಪ್ರಮುಖವಾಗಿ ಕಾಣುವವು ಬಿಟ್ಟರೆ ಉಳಿದೆಲ್ಲಾ ಲಕ್ಷಣಗಳು ಸಾಮಾನ್ಯ ಎನ್ನಬಹುದು. ವೈಷ್ಣವ ದೇವಾಲಯದಲ್ಲಿ ಗರುಡಮಂಟಪ ಕಾಣುವೆವು. ಇಲ್ಲಿ ಅದೇ ರೀತಿಯ ನಂದಿಮಂಟಪವಿದೆ.

ಸಂಖ್ಯೆ : ೦೨

ಹೆಸರು : ಚಿಟಿಕಮಲ್ಲಪ್ಪನ ಗುಡಿ

ಸ್ಥಳ : ಸಿ.ಎಂ. ಲೇಔಟ್ ಸಮೀಪ

ಕಾಲಮಾನ : ಕ್ರಿ.ಶ. ೧೫ನೇ ಶತಮಾನ

ಅಭಿಮುಖ : ಪೂರ್ವ

ಶೈಲಿ : ವಿಜಯನಗರ

ಸಂರಕ್ಷಣೆ : ಧಾರ್ಮಿಕದತ್ತಿ ಇಲಾಖೆ

ಹಿರಿಯೂರಿನ ಹೊರಭಾಗದ ಪ್ರಶಾಂತವಾದ ಸ್ಥಳದಲ್ಲಿ ಈ ಪ್ರಾಚೀನ ಗುಡಿ ಪೌಳಿಗೋಡೆಯನ್ನು ಹೊಂದಿದೆ. ಈ ದೇವಾಲಯವು ವಿಜಯನಗರ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ಪೂರ್ವಭಿಮುಖವಾಗಿದೆ. ದೇವಾಲಯ ತಳವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ ನವರಂಗವನ್ನು ಹೊಂದಿದೆ. ಈ ದೇವಾಲಯದ ಸುತ್ತಲೂ ಪೌಳಿಗೋಡೆ ಇದೆ. ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದ್ದು ನಾಲ್ಕು ಮೂಲೆಗಂಬಗಳನ್ನು ಹೊಂದಿದೆ. ಮಧ್ಯದಲ್ಲಿ ಶಿವಲಿಂಗವಿದೆ. ಈ ಶಿವಲಿಂಗಕ್ಕೆ ಯಾವುದೇ ಪೀಠ ಪಟ್ಟಿಕೆಗಳಿಲ್ಲ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳಿವೆ. ಮತ್ತು ಈ ಗರ್ಭಗುಡಿಯ ಎದುರಿಗೆ ನಂದಿಯನ್ನು ಇರಿಸಲಾಗಿದೆ. ಗರ್ಭಗುಡಿಯ ದ್ವಾರದಲ್ಲಿ ಸುಂದರವಾದ ಇಬ್ಬರು ಶೈವ ದ್ವಾರಪಾಲಕರಿದ್ದಾರೆ. ಹಾಗೆಯೇ ನವರಂಗದಲ್ಲಿ ನಾಲ್ಕು ಕಂಬಗಳು ಗರ್ಭಗುಡಿಯ ಹೊಂದಿಕೊಂಡಂತೆ ಇವೆ. ಮತ್ತು ಈ ದೇವಾಲಯದ ನವರಂಗಕ್ಕೆ ಯಾವುದೇ ರೀತಿಯ ಪ್ರವೇಶ ದ್ವಾರಗಳಿಲ್ಲ. ಮತ್ತು ಈ ದೇವಾಲಯದ ಸುತ್ತಲು ಯಾವುದೇ ರೀತಿಯ ಉಬ್ಬುಕೆತ್ತನೆಯ ಶಿಲ್ಪಗಳು ಕಂಡುಬರುವುದಿಲ್ಲ. ಈ ದೇವಾಲಯವು ಪೂರ್ವಭಿಮುಖವಾಗಿದೆ. ಎದುರಿಗೆ ಅರಳಿ ಕಟ್ಟೆ ನಂದಿ ಮತ್ತು ನಾಗರಕಲ್ಲುಗಳಿವೆ.

ದೇವಾಲಯದ ಏರುವಿನ್ಯಾಸದಲ್ಲಿ ಬಾಹ್ಯ ಭಿತ್ತಿಯನ್ನು ಗಮನಿಸಿದರೆ ಸಂಪೂರ್ಣ ದೇವಾಲಯ ಅಧಿಷ್ಠಾನದ ಮೇಲಿರುವುದು ಉಪಾನ, ಜಗತಿಗಳ ಹೊಂದಿದ್ದು ಭಿತ್ತಿ ಸರಳವಾಗಿದೆ ಪ್ರಸ್ತರ ಹಾಗೂ ಶಿಖರವನ್ನು ಹೊಂದಿದೆ. ಈ ಶಿಖರ ಶೈಲಿಯು ಮೂರು ಹಂತವನ್ನು ಹೊಂದಿರುವಂತಹ ಶಿಖರವಾಗಿದೆ. ಈ ರೀತಿಯಾಗಿ ಹಿರಿಯೂರಿನ ಪಟ್ಟಣದಲ್ಲಿ ಚಿಟಿಕಮಲ್ಲಪ್ಪನ ಗುಡಿಯು ಚಿತ್ರದುರ್ಗ ಪಾಳೆಗಾರರ ಕಾಲದಲ್ಲಿ ನಿರ್ಮಾಣಗೊಂಡ ಪ್ರಾಚೀನ ದೇವಾಲಯವಾಗಿದೆ.

ಸಂಖ್ಯೆ : ೦೩

ಹೆಸರು : ಆಂಜನೇಯ

ಸ್ಥಳ : ಸಿದ್ದನಾಯಕನ ವೃತ್ತದ ಸಮೀಪ

ಕಾಲಮಾನ : ಕ್ರಿ.ಶ. ೧೬ನೇ ಶತಮಾನ

ಅಭಿಮುಖ : ದಕ್ಷಿಣ

ಶೈಲಿ : ಆಧುನಿಕ

ಸಂರಕ್ಷಣೆ : ಮುಜುರಾಯಿ ಇಲಾಖೆ

ಹಿರಿಯೂರಿನ ಸಿದ್ದನಾಯಕನ ವೃತ್ತದ ಬಳಿ ಪಾಳೆಗಾರರ ಕಾಲದಲ್ಲಿ ನಿರ್ಮಿತವಾದ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಈ ದೇವಾಲಯದ ತಳವಿನ್ಯಾಸವು ಗರ್ಭಗುಡಿ ಮತ್ತು ಹಜಾರವಾದ ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಈ ದೇವಾಲಯವು ಗರ್ಭಗುಡಿ ಸುತ್ತಲು ಪ್ರಕಾರವಿರುವುದರಿಂದ ಪ್ರದಕ್ಷಿಣಾ ಪಥ ಇದೆ. ಇದರಿಂದಾಗಿ ಗರ್ಭಗುಡಿ ಮುಂದೆ ಎರಡು ಕಂಬಗಳು ಮಾತ್ರ ಹೊಂದಿದೆ. ಹಾಗೂ ಮುಖಮಂಟಪದಲ್ಲಿ ಬಲಬದಿ ಚಕ್ರ ಮಧ್ಯದಲ್ಲಿ ರಾಮ ಸೀತೆ ನಿಂತಿರುವ ಗಾರೆ ಶಿಲ್ಪದ ಚಿತ್ರಗಳನ್ನು ಬಿಡಸಲಾಗಿದೆ ಹಾಗೂ ಮುಖಮಂಟಪದ ಎಡಬದಿಯಲ್ಲಿ ಶಂಕದ ಚಿತ್ರವನ್ನು ಬಿಡಿಸಲಾಗಿದೆ.

ಈ ದೇವಾಲಯದ ಏರುವಿನ್ಯಾಸದಲ್ಲಿ ಅಧಿಷ್ಠಾನ ಭಿತ್ತಿ ಜಾಲಾಂದ್ರ ಪ್ರಸ್ತರ ಶಾಲಾ ಶಿಖರವನ್ನು ಹೊಂದಿದೆ. ದೇವಾಲಯದ ಏರುವಿನ್ಯಾಸದಲ್ಲಿ ಶಿಖರ ಶೈಲಿಯು ಆಧುನಿಕವಾಗಿ ನಿರ್ಮಾಣ ಮಾಡಲಾಗಿದ್ದು ಮೂರು ಹಂತದ ಕಟ್ಟಡವನ್ನು ಕಟ್ಟಲಾಗಿದೆ.

ಸಂಖ್ಯೆ : ೪

ಹೆಸರು : ಮೈಲಾರಲಿಂಗ

ಸ್ಥಳ : ಶ್ರೀತೇರುಮಲ್ಲೇಶ್ವರ ದೇವಾಲಯದ ಸಮೀಪ

ಕಾಲಮಾನ : ಕ್ರಿ.ಶ. ೧೭ನೇ ಶತಮಾನ

ಅಭಿಮುಖ : ಪೂರ್ವ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ಹಿರಿಯೂರು ಪಟ್ಟಣದಲ್ಲಿ ಸಿದ್ದನಾಯಕನ ವೃತ್ತದಲ್ಲಿ ಈ ದೇವಾಲಯವಿದೆ. ಶ್ರೀಲಕ್ಷ್ಮಿವೆಂಕಟರಮಣ ದೇವಾಲಯದ ಬಳಿ ಚಿಕ್ಕ ಗುಡಿಯಲ್ಲಿ ಸ್ವಾಮಿ ನೆಲೆಸಿದ್ದ ಸುಮಾರು ೨೫ ವರ್ಷಗಳ ಹಿಂದೆ ಹಿರಿಯೂರಿನ ಶ್ರೀ. ವೈ.ಪಿ. ಮೈಲಾರಶೆಟ್ಟರು ಈಗಿನ ದೊಡ್ಡ ದೇವಾಲಯ ಕಟ್ಟಿದರು.

ತಳವಿನ್ಯಾಸದಲ್ಲಿ ಈ ಮೈಲಾರಲಿಂಗ ದೇವಾಲಯವು ಗರ್ಭಗುಡಿ ಅಂತರಾಳ ಮತ್ತು ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಈ ದೇವಲಾಯವು ಗರ್ಭಗುಡಿಯು ಚೌಕಾಕಾರವಾಗಿದ್ದು ಅಂತರಳಾದ ಮುಂದೆ ನಾಲ್ಕು ಕಂಬಗಳುಳ್ಳ ಆಯತಾಕಾರದ ನವರಂಗವಿದೆ. ಹಾಗೆ ನವರಂಗದ ಮುಂದಿನ ಭಾಗದಲ್ಲಿ ಮುಖಮಂಟಪವನ್ನು ಕಾಣುತ್ತೇವೆ. ಈ ಮುಖ ಮಂಟಪದ ವೇಲ್ಭಾಗದಲ್ಲಿ ಮೈಲಾರಲಿಂಗ ಹಾಗೂ ಗಂಗೆಮಾಳವ್ವ ಮತ್ತು ಗಣೇಶನ ಶಿಲ್ಪಗಳನ್ನು ಮುಖಮಂಟಪದಲ್ಲಿ ಇರುವುದನ್ನು ಕಾಣುತ್ತೇವೆ.

ಏರುವಿನ್ಯಾಸ ಶ್ರೀಮೈಲಾರಲಿಂಗನ ದೇವಾಲಯದ ಏರುವಿನ್ಯಾಸದಲ್ಲಿ ಅಧಿಷ್ಠಾನ ಭಿತ್ತಿ ಜಾಲಾಂದ್ರ, ಪ್ರಸ್ತರ ಮತ್ತು ಶಾಲಾ ಶಿಖರವನ್ನು ಈ ದೇವಾಲಯವು ಹೊಂದಿದೆ.

ಸಂಖ್ಯೆ : ೫

ಹೆಸರು : ಶ್ರೀರಾಜಾ ದುರ್ಗಪರಮೇಶ್ವರಿ

ಸ್ಥಳ : ಬಸವನಕಟ್ಟೆ ದುರ್ಗಿಗುಡಿ ರಸ್ತೆ ಸಮೀಪ

ಕಾಲಮಾನ : ಕ್ರಿ.ಶ. ೧೫-೧೬ನೇ ಶತಮಾನ

ಅಭಿಮುಖ : ಪೂರ್ವ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ಚಿಕ್ಕಗರ್ಭ ಗುಡಿಯಾಗಿದ್ದ ಈ ದೇವಾಲಯವನ್ನು ೧೦೦-೧೫೦ ವರ್ಷಗಳ ಹಿಂದೆ ದೇವಿಯ ಅರ್ಚಕರಾಗಿದ್ದ ದುರ್ಗಪ್ಪ ಮರಿಯಪ್ಪ ಸಿದ್ದಪ್ಪ ಎನ್ನುವವರು ಜೀರ್ಣೋದ್ದಾರ ಮಾಡಿಕಟ್ಟಿದ್ದಾರೆ. ಈ ದೇವಿಯನ್ನು ಗ್ರಾಮದೇವತೆ ಎಂದು ಸರ್ವಜನತೆ ಆರಾಧಿಸುತ್ತಾರೆ.

ತಳವಿನ್ಯಾಸ ಈ ದೇವಾಲಯವು ಗರ್ಭಗೃಹ ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ ಈ ದೇವಾಲಯದಲ್ಲಿ ಗರ್ಭಗೃಹದಲ್ಲಿ ಎತ್ತರವಾದ ಪೀಠದ ಮೇಲೆ ಶ್ರೀರಾಜದುರ್ಗ ಪರಮೇಶ್ವರಿಯ ಮೂರು ಅಡಿ ಎತ್ತರ ವಿಗ್ರಹವಿದೆ ಹಾಗೆಯೇ ಅಂತರಾಳದ ಬಾಗಿಲುವಾಡದ ಲಲಾಟದಲ್ಲಿ ಶ್ರೀ ದುರ್ಗಾಪರಮೇಶ್ವರಿಯ ಚಿಕ್ಕದಾದ ಶಿಲ್ಪವನ್ನು ಕೆತ್ತಿದ್ದಾರೆ. ಬಾಗಿಲುವಾಡ ಅಕ್ಕ ಪಕ್ಕದಲ್ಲಿ ಸುಂದರ ಶಾಕ್ತ ಸ್ತ್ರೀಯರ ದ್ವಾರಪಾಲಕಿಯರ ಉಬ್ಬುಕೆತ್ತನೆಯ ಶಿಲ್ಪಗಳಿವೆ ಮತ್ತು ನವರಂಗಕ್ಕೆ ಹೊಂದಿಕೊಂಡಂತೆ ನಾಲ್ಕು ಮುಚ್ಚಿದ ಅರೆಗಂಬಗಳಿವೆ. ನವರಂಗ ಮಧ್ಯಭಾಗದ ಮೇಲ್ಭಾವಣಿಯಲ್ಲಿ ಚಿಕ್ಕದಾದ ಭುವನೇಶ್ವರಿ ಇದೆ. ನವರಂಗದಲ್ಲಿ ಎರಡುಕಡೆ ದ್ವಾರಬಾಗಿಲು ಇರುವುದನ್ನು ಕಾಣಬಹುದಾಗಿದೆ. ಮತ್ತು ಮುಖಮಂಟಪವು ಎತ್ತರವಾಗಿದ್ದು ಮುಖಮಂಟಪದಲ್ಲಿ ಯಾವುದೇ ಶಿಲ್ಪಗಳನ್ನು ಕಾಣಲಾಗುವುದಿಲ್ಲ.

ಏರುವಿನ್ಯಾಸ ಈ ದೇವಾಲಯವು ಏರುವಿನ್ಯಾಸದಲ್ಲಿ ಅಧಿಷ್ಠಾನ ಭಿತ್ತಿ ಜಾಲಾಂದ್ರ ಪ್ರಸ್ತರ ಶಾಲಾ ಶಿಖರವನ್ನು ಹೊಂದಿದೆ. ಈ ಗರ್ಭಗೃಹ ಮೇಲ್ಭಾಗದ ಶಿಖರದಲ್ಲಿ ನಾಲ್ಕು ಮೂಲೆಯಲ್ಲಿ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಕಾಣುತ್ತೇವೆ. ಮತ್ತು ಶಿಖರದ ಮೊದಲನೆಯ ಹಂತವು ಶ್ರೀ ದುರ್ಗಾಪರಮೇಶ್ವರಿ ಶಿಲ್ಪವನ್ನು ಕಾಣುತ್ತೇವೆ ಹಾಗೆಯೇ ಶಿಖರದ ಮೇಲ್ಭಾಗದಲ್ಲಿ ವೃತ್ತಕಾರವಾಗಿದೆ. ವೃತ್ತಾಕಾರದ ಶಿಖರದಲ್ಲಿ ನಾಲ್ಕು ಜನ ಅಸುರರ ಶಿಲ್ಪಗಳನ್ನು ಬಿಡಿಸಲಾಗಿದೆ.

ಇದರಿಂದಾಗಿ ಈ ದೇವಾಲಯವು ಹಿರಿಯೂರು ಪಟ್ಟಣದ ತುಂಬಾ ಹೆಸರುವಾಸಿಯಾಗಿದೆ. ಹಾಗೆಯೇ ನವರಾತ್ರಿ ಕಾರ್ತಿಕದಲ್ಲಿ ದೇವಿಯ ಉತ್ಸವ ನಡೆಸುತ್ತಾರೆ ಕ್ರಿ.ಶ. ೧೯೪೮ರಲ್ಲಿ ಈ ಉದ್ಭವ ದೇವಿಯ ಜಾತ್ರೆಯ ಮೊದಲಬಾರಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ನಡೆದಿದ್ದು, ಇದುವರೆಗೂ ಹಾಗೆ ದೊಡ್ಡದಾಗಿ ನಡೆದಿಲ್ಲ ಎಂದು ಸ್ಥಳೀಯರು ತಿಳಿಸಿರುವರು.

ಸಂಖ್ಯೆ : ೬

ಹೆಸರು : ಬನಶಂಕರಿ

ಸ್ಥಳ : ಬಸವನಕಟ್ಟೆ ದುರ್ಗಿಗುಡಿ ರಸ್ತೆ ಸಮೀಪ

ಕಾಲಮಾನ : ಕ್ರಿ.ಶ. ೧೮೦೦ರಲ್ಲಿ

ಅಭಿಮುಖ : ದಕ್ಷಿಣ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ಹಿರಿಯೂರಿನ ಅರವತ್ತು ಜನ ದೇವಾಂಗದವರು ಬಾದಾಮಿಗೆ ಹೋಗಿ ಬನಶಂಕರಿಯ ದರ್ಶನ ಮಾಡಿ ಅಲ್ಲಿಂದಲೇ ದೇವಿಯ ಮೂರ್ತಿಯನ್ನು ಮಾಡಿಸಿ ತಂದಂತೆ, ಈ ವಿಗ್ರಹವನ್ನು ಬೆಂಗಳೂರಿಗೆ ಒಯ್ಯುಬೇಕೆಂದಿದ್ದರಂತೆ. ಒಯ್ಯಲಾಗದಿದ್ದರಿಂದ ಕ್ರಿ.ಶ. ೧೮೦೦ರಲ್ಲಿ ಇಲ್ಲಯೇ ಚಿಕ್ಕಮರದ ಗುಡಿಯಲ್ಲಿ ದೇವಿಯನ್ನು ಪ್ರತಿಷ್ಠಾಪಿಸಿದರಂತೆ, ಕ್ರಿಶ ೧೮೯೮ ಮತ್ತೆ ಬೆಂಗಳೂರಿನಿಂದ ಹೊಸ ಮೂರ್ತಿಯನ್ನು ತಂದು ಪ್ರತಿಷ್ಠಾಪಿಸಿದರಂತೆ ೧೯೬೧ರಲ್ಲಿ ಹಳೆಯಗುಡಿಯನ್ನು ತೆಗೆದು ೧೯೬೨ರಲ್ಲಿ ಹೊಸಗುಡಿಯನ್ನು ಕಟ್ಟಿದ್ದಾರೆ.

ತಳವಿನ್ಯಾಸ ಗರ್ಭಗೃಹ ಅಂತರಾಳ, ಸಭಾಮಂಟಪ ಹಾಗೂ ಮುಖಮಂಟಪವಿದೆ. ಗರ್ಭಗುಡಿ ಸುತ್ತಲು ಪ್ರದಕ್ಷಿಣ ಪಥವಿದೆ. ಹಾಗೆಯೇ ಗರ್ಭಗುಡಿಯ ನಾಲ್ಕು ಮೂಲೆಗಂಬಗಳಿಂದ ಕೂಡಿದ್ದು ಚೌಕಾಕಾರವಾಗಿದೆ ಗರ್ಭಗುಡಿಯಲ್ಲಿ ಎತ್ತರವಾದ ಪೀಠವಿದ್ದು ಪೀಠದ ಮೇಲೆ ಮೂರು ಅಡಿ ಎತ್ತರದ ಬನಶಂಕರಿ ದೇವಿಯ ವಿಗ್ರಹವಿದೆ ಮುಂದೆ ಅಂತರಾಳದ ಭಿತ್ತಿಯಲ್ಲಿ ಯಾವುದೇ ರೀತಿಯಾ ಶಿಲ್ಪಗಳಿಲ್ಲ ಹಾಗೆಯೇ ಗರ್ಭಗುಡಿಯ ಬಾಗಿಲುವಾಡದ ಲಲಾಟದಲ್ಲಿ ಬನಶಂಕರಿ ದೇವಿಯ ಶಿಲ್ಪವಿರುವ ತಾಮ್ರದ ಹೊದಿಕೆಯು ಇದೆ ಮುಂದೆ ಬನಶಂಕರಿ ವಿಗ್ರಹದ ಮುಂದೆ ಸಭಾಮಂಟಪದಲ್ಲಿ ಬನಶಂಕರಿದೇವಿಯ ವಾಹನವಾದ ಆಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದಲ್ಲಿ ಗರ್ಭಗುಡಿಗೆ ಹೊಂದಿಕೊಂಡಂತೆ ಎರಡು ಕಂಬಗಳನ್ನು ಮಾತ್ರ ಕಾಣುತ್ತೇವೆ.

ಏರುವಿನ್ಯಾಸ ಈ ದೇವಾಲಯದ ಏರುವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಜಾಲಾಂದ್ರ ಹಾಗೂ ಪ್ರಸ್ತರ ಇವೆ. ಈ ದೇವಾಲಯಕ್ಕೆ ಶಿಖರವು ಇರುವುದಿಲ್ಲ. ಬನಶಂಕರಿ ದೇವಾಲಯದ ಮುಖಮಂಟಪದಲ್ಲಿ ಬಲಭಾಗ ಮತ್ತು ಎಡ ಭಾಗದಲ್ಲಿ ಎರಡು ಸಿಂಹಗಳ ಶಿಲ್ಪಗಳಿವೆ ಮಧ್ಯದಲ್ಲಿ ಬನಶಂಕರಿ ದೇವಿಯ ಶಿಲ್ಪವನ್ನು ಬಿಡಿಸಲಾಗಿದ್ದು ದೇವಿಯ ಕಾಲ ಕೆಳಗೆ ಸಿಂಹದ ಶಿಲ್ಪವನ್ನು ಬಿಡಿಸಲಾಗಿದೆ ಹಾಗೆಯೇ ದೇವಿಯ ಅಕ್ಕ ಪಕ್ಕದಲ್ಲಿ ಶಾಕ್ತ ಸ್ತ್ರೀಯ ಶಿಲ್ಪಗಳನ್ನು ಬಿಡಿಸಲಾಗಿದೆ.

ಏರುವಿನ್ಯಾಸದಲ್ಲಿ ಈ ದೇವಾಲಯದ ಗರ್ಭಗೃಹದ ಶಿಖರ ಶೈಲಿಯು ಆಧುನಿಕ ಕಟ್ಟಡದ ಶೈಲಿಯಲ್ಲಿದ್ದು ಮೂರು ಹಂತವನ್ನು ಹೊಂದಿರುತ್ತದೆ ಈ ಶಿಖರದಲ್ಲಿ ನಂದಿಶಿಲ್ಪ ಹಾಗೂ ಹೂ ಮೂಲೆಯನ್ನು ಹಿಡಿದಿರುವ ಸ್ತ್ರೀಯರ ಶಿಲ್ಪ ಹಾಗೂ ಲಿಂಗವನ್ನು ಈ ಶಿಖರದಲ್ಲಿ ಶಿಲ್ಪಗಳನ್ನು ಬಿಡಿಸಲಾಗಿದೆ ಇದರಿಂದಾಗಿ ಈ ದೇವಾಲಯವು ಹಿರಿಯೂರು ಪಟ್ಟಣದ ಪ್ರಮುಖವಾದ ದೇವಾಲಯವಾಗಿದೆ ಹಿರಿಯೂರು ಪಟ್ಟಣದಲ್ಲಿ.

ಸಂಖ್ಯೆ : ೭

ಹೆಸರು : ಶ್ರೀಬನದಮ್ಮ

ಸ್ಥಳ : ಗೋಪಾಲಪುರ ಬಡಾವಣೆಯಲ್ಲಿ

ಕಾಲಮಾನ : ಕ್ರಿ.ಶ ೧೨ನೇ ಶತಮಾನ

ಅಭಿಮುಖ : ಪೂರ್ವ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ಈ ಬನದಮ್ಮ ದೇವಾಲಯವು ಪಾಳೆಗಾರರ ಕಾಲದಲ್ಲಿ ಪ್ರಮುಖ ದೇವತೆಯಾಗಿ ವಿಜೃಂಭಣೆಯಿಂದ ಪೂಜಿಸಲ್ಪಡುತ್ತಿದ್ದ ಈ ದೇವಿಯು ದೇವಾಲಯ ಅತ್ಯಂತ ಪ್ರಾಚೀನ ದೇವಾಲಯವೆಂದು ಹೇಳುತ್ತಾರೆ. ಶ್ರೀಮಸಿಯಪ್ಪ ಮಾಜಿ ಎಂ.ಎಲ್.ಎ. ರವರು ಬಿದ್ದು ಹೋಗಿದ್ದ ಈ ದೇವಾಲಯವನ್ನು ಕಟ್ಟಿಸಿ ಜೀರ್ಣೋದ್ಧಾರ ಮಾಡಿದ್ದಾರೆ. ಈ ದೇವಾಲಯವು ಗರ್ಭಗೃಹವನ್ನು ಮಾತ್ರ ಹೊಂದಿದ್ದು ಮತ್ತು ಅಂತರಾಳ ನವರಂಗ ಸಭಾಮಂಟಪ ಹಾಗೂ ಮುಖಮಂಟಪ ಇದು ಯಾವುದು ಹೊಂದಿಲ್ಲ ಹಾಗಾಗಿ ಈ ದೇವಾಲಯದಲ್ಲಿ ಗರ್ಭಗೃಹದಲ್ಲಿ ಒಂದು ಎತ್ತರದ ಪೀಠದ ಮೇಲೆ ಎರಡುವರೆ ಅಡಿ ಎತ್ತರದ ಬನದಮ್ಮ ದೇವಿಯ ಮೂರ್ತಿಶಿಲ್ಪವಿದೆ ಈ ದೇವಿಯ ವಿಗ್ರಹದ ಹಿಂದೆ ಚಿಕ್ಕದಾದ ಪ್ರಭಾವಳಿಯು ಇದೆ. ದೇವಾಲಯದ ಬಾಗಿಲುವಾಡದಲ್ಲಿ ಯಾವುದೇ ರೀತಿಯ ಶಿಲ್ಪಗಳು ಅಥವಾ ಉಬ್ಬುಕೆತ್ತನೆಗಳು ಕಂಡುಬರುವುದಿಲ್ಲ.

ಏರುವಿನ್ಯಾಸ ಅಧಿಷ್ಠಾನ ಭಿತ್ತಿ ಪ್ರಸ್ತರ ಮತ್ತು ಚಿಕ್ಕದಾದ ಶಿಖರವನ್ನು ಹೊಂದಿದೆ ಈ ದೇವಾಲಯದ ಶಿಖರ ಶೈಲಿಯು ಆಧುನಿಕವಾಗಿ ರಚಿಸಲ್ಪಟ್ಟಿದ್ದು ತುಂಬಾ ವೃತ್ತಾಕಾರವಾದ ಸಾಧಾರಣ ಶಿಖರವಾಗಿದೆ ಶಿಖರದಲ್ಲಿ ಯಾವುದೇ ರೀತಿಯಾದ ಶಿಲ್ಪಗಳನ್ನು ನಾವು ಕಾಣಲಾಗುವುದಿಲ್ಲ. ಹಾಗಾಗಿ ಈ ಚಿತ್ರದುರ್ಗ ಪಾಳೆಗಾರರ ಕಾಲದಲ್ಲಿ ಪ್ರಮುಖ ದೇವಾಲಯವಾಗಿತ್ತು.

ಸಂಖ್ಯೆ : ೮

ಹೆಸರು : ಕನ್ನಿಕಾ ಪರಮೇಶ್ವರಿ

ಸ್ಥಳ : ಸಿದ್ದನಾಯಕನ ವೃತ್ತದ ಸಮೀಪ

ಕಾಲಮಾನ : ಕ್ರಿ.ಶ ೧೯೨೯

ಅಭಿಮುಖ : ಉತ್ತರ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ವೈಶ್ಯಕುಲಬಾಂಧವರ ನೆರವಿನಿಂದ ದಿ॥ ಅಲ್ಲಂಪಲ್ಲಿ ಸಿದ್ದಪ್ಪ ಶೆಟ್ಟರು ಈ ದೇವಾಲಯವನ್ನು ಕಟ್ಟಿಸಿದ್ದಾರೆ. ಈ ಕನ್ನಿಕಾ ಪರಮೇಶ್ವರಿ ದೇವಾಲಯ ವೈಶ್ಯಕುಲಬಾಂಧವರ ಆರಾಧ್ಯ ದೇವತೆಯಾಗಿದ್ದಾಳೆ.

ತಳವಿನ್ಯಾಸ ಈ ದೇವಾಲಯವು ಚೌಕಾಕಾರವಾದ ಗರ್ಭಗುಡಿಯನ್ನು ಮಾತ್ರ ಹೊಂದಿದೆ ಮತ್ತೆ ಹಜಾರವಾದ ಸಭಾಮಂಟಪವಿದೆ. ಸಭಾಮಂಟಪದಲ್ಲಿ ಯಾವುದೇ ರೀತಿಯಾದ ಕಂಬಗಳು ಇಲ್ಲ ಮತ್ತು ಗರ್ಭಗೃಹದ ಸುತ್ತಲೂ ಎತ್ತರವಾದ ಪ್ರಾಕಾರದ ಭಿತ್ತಿಯನ್ನು ನಿರ್ಮಿಸಿದ್ದಾರೆ. ಹಾಗೆಯೇ ಗರ್ಭಗೃಹದ ಬಲಭಾಗದಲ್ಲಿ ಜನಾರ್ದನ, ಕಾಶಿವಿಶ್ವನಾಥ ಲಿಂಗವನ್ನು ಸ್ಥಾಪಿಸಿದ್ದಾರೆ. ದೇವಿಯ ಎಡಭಾಗದಲ್ಲಿ ನಗರೇಶ್ವರ, ರಾಮ, ಸೀತೆ, ಲಕ್ಷ್ಮಣ, ಆಂಜನೇಯರ ವಿಗ್ರಹಗಳನ್ನು ಸ್ಥಾಪಿಸಿರುವುದನ್ನು ಕಾಣಬಹುದಾಗಿದೆ.

ಗರ್ಭಗೃಹದ ಮುಂದೆ ಮೂವತ್ತು ಅಡಿ ಎತ್ತರದ ದ್ವಾರಗೋಪುರವನ್ನು ನಿರ್ಮಾಣ ಮಾಡಿದ್ದಾರೆ ಅದು ಪ್ರಾಕಾರದ ಭಿತ್ತಿಗೆ ಹೊಂದಿಕೊಂಡಂತೆ ಶ್ರೀಕನ್ನಿಕಾಪರಮೇಶ್ವರಿ ದೇವಾಲಯದ ಪ್ರಮುಖ ದ್ವಾರಬಾಗಿಲು ಹಾಗಿದೆ.

ಏರುವಿನ್ಯಾಸ ಈ ಕನ್ನಿಕಾ ಪರಮೇಶ್ವರಿ ದೇವಾಲಯವು ಅಧಿಷ್ಠಾನ ಭಿತ್ತಿ ಪ್ರಸ್ತರ ಮತ್ತು ಶಿಖರವನ್ನು ಹೊಂದಿದೆ. ವೃತ್ತಕಾರದ ಚಿಕ್ಕ ಶಿಖರದಲ್ಲಿ ಕನ್ನಿಕಾ ಪರಮೇಶ್ವರಿಯ ಮೂರ್ತಿಶಿಲ್ಪವನ್ನು ಜಡಿಸಲಾಗಿದೆ. ಮತ್ತು ಈ ಶಿಖರ ಶೈಲಿಯಲ್ಲಿ ಯಾವುದೇ ರೀತಿಯಾದ ಶಿಲ್ಪಗಳು ಕಂಡು

ಬರುವುದಿಲ್ಲ ಹಾಗಾಗಿ ಈ ಕನ್ನಿಕ ಪರಮೇಶ್ವರಿ ದೇವಾಲಯ ನಗರದಲ್ಲಿ ವೈಶ್ಯ ಕುಲಬಾಂಧವರ ಪ್ರಮುಖ ಆರಾಧನೆಯ ದೇವಾಲಯವಾಗಿದೆ.

ಸಂಖ್ಯೆ : ೯

ಹೆಸರು : ಭಗವತಿ ಅಮ್ಮನ

ಸ್ಥಳ : ಚುಟುಕಮಲ್ಲೇಶ್ವರ ಬಡಾವಣೆ ಸಮೀಪ

ಕಾಲಮಾನ : ಕ್ರಿ.ಶ ೧೭ನೇ ಶತಮಾನ

ಅಭಿಮುಖ : ಪೂರ್ವ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ಈ ದೇವಾಲಯವು ಚುಟುಕಮಲ್ಲಪ್ಪನ ಗುಡಿಯ ಬಳಿ ಇದ್ದ ಚಿಕ್ಕ ಗುಡಿಯನ್ನು ತಮಿಳರ ಶ್ರೀ ಪಳಿನಿಯಪ್ಪ ಗೌಂಡರು ಭಕ್ತರು ಹಾಗೂ ಊರಿನವರ ಸಹಕಾರದಿಂದ (೬೦-೭೦ ವರ್ಷಗಳ ಹಿಂದೆ) ವಿಶಾಲವಾದ ಗುಡಿಯನ್ನು ಕಟ್ಟಿಸಿದ್ದಾರೆ. ಈ ದೇವಿಗೆ ಹಲವು ಹೆಸರುಗಳಿಂದ ಕರೆಯುತ್ತಾರೆ ಅವುಗಳಲ್ಲಿ. ದ್ರೌಪದಿಯಮ್ಮ ಪಗದಿಯಮ್ಮ; ಭಗವತಿ ಅಮ್ಮನ್ ಎಂದು ಕರೆಯುತ್ತಾರೆ.

ತಳವಿನ್ಯಾಸ ಗರ್ಭಗೃಹ ವಿಸ್ತರವಾದ ಸಭಾಮಂಟಪ, ಹಾಗೂ ಮುಖಮಂಟಪವನ್ನು ಹೊಂದಿದೆ. ಈ ದೇವಾಲಯದ ಗರ್ಭಗೃಹ ಚೌಕಾಕಾರವಾಗಿದ್ದು ಎರಡು ಅಡಿ ಪೀಠದ ಮೇಲೆ ಎರಡು ಅಡಿ ಎತ್ತರದ ಭಗವತಿ ಅಮ್ಮನ ಮೂರ್ತಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ ಈ ಮೂರ್ತಿಯ ಹಿಂದೆ ನಾಲ್ಕು ಅಡಿ ಎತ್ತರವಾದ ಪ್ರಭಾವಳಿ ಇದೆ, ಹಾಗೂ ಗರ್ಭಗೃಹದ ಬಲಭಾಗದಲ್ಲಿ ಮತ್ತು ಎಡಭಾಗದಲ್ಲಿ ಎರಡು ಸುಂದರವಾದ ಶಾಕ್ತ ದ್ವಾರಪಾಲಕಿಯರು ಶಿಲ್ಪಗಳು ಗರ್ಭಗೃಹ ಬಾಗಿಲುವಾಡದಲ್ಲಿ ಈ ಶಿಲ್ಪಗಳನ್ನು ನಿಲ್ಲಿಸಿದ್ದಾರೆ.

ಏರುವಿನ್ಯಾಸದಲ್ಲಿ ಅಧಿಷ್ಠಾನ ಭಿತ್ತಿ ಜಾಲಾಂದ್ರ ಪ್ರಸ್ತರ ಗ್ರೀವ ಶಾಲಾ ಶಿಖರವನ್ನು ಏರುವಿನ್ಯಾಸದಲ್ಲಿ ಕಾಣಬಹುದಾಗಿದೆ ಈ ಶಿಖರ ಶೈಲಿಯು ಮೂರು ಹಂತದ ರಚನೆಯನ್ನು ಹೊಂದಿದ್ದು ಶಿಖರದ ಭಾಗದಲ್ಲಿ ಶ್ರೀಭಗವತಿ ಅಮ್ಮನ ಶಿಲ್ಪಗಳನ್ನು ಬಿಡಿಸಲಾಗಿದೆ ಹಾಗೂ ಶಿಖರದಲ್ಲಿ ನಾಲ್ಕು ದಿಕ್ಕಿಗೂ ದಿಕ್ಪಾಲಕರನ್ನು ಶಿಲ್ಪಗಳು ಇರುವುದನ್ನು ಕಾಣುತ್ತೇವೆ. ಹೀಗೆ ಒರಿಯೂರು ಪಟ್ಟಣದಲ್ಲಿ ಶ್ರೀಭಗವತಿ ಅಮ್ಮನ್ ದೇವಾಲಯ ತಮಿಳು ಭಾಷಿಕರ ಆರಾಧ್ಯವಾಗಿರುವ ಶಾಕ್ತ ದೇವಾಲಯವಾಗಿದೆ.

ಸಂಖ್ಯೆ : ೧೦

ಹೆಸರು : ಕೋಲ್ಲಾಪುರದಮ್ಮನ

ಸ್ಥಳ : ಗೋಪಾಲಪುರ ಬಡಾವಣೆ ಸಮೀಪ

ಕಾಲಮಾನ : ಕ್ರಿಶ ೧೨ನೇ ಶತಮಾನ

ಅಭಿಮುಖ : ಪೂರ್ವ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ಹಿರಿಯೂರು ಪಟ್ಟಣದ ಗೋಪಾಲಪುರ ಬಡಾವಣೆಯಲ್ಲಿ ಪೂರ್ವಭಿಮುಖವಾಗಿರುವ ಪ್ರಾಚೀನ ಗುಡಿಯನ್ನು ಜೀರ್ಣೋದ್ಧಾರ ಮಾಡಿದ್ದಾರೆ. ತಳವಿನ್ಯಾಸ ಈ ದೇವಾಲಯವು ಚೌಕಾಕಾರವಾದ ಗರ್ಭಗುಡಿಯನ್ನು ಮಾತ್ರ ಹೊಂದಿರುವುದಾಗಿದೆ ಹಾಗೂ ಅಂತರಾಳ ನವರಂಗ ಸಭಾಮಂಟಪ, ಯಾವುದು ಹೊಂದಿಲ್ಲ ಎತ್ತರವಾದ ಪೀಠದ ಮೇಲೆ ಎರಡು ಅಡಿ ಎತ್ತರದ ಶ್ರೀಕೊಲ್ಲಾಪುರದಮ್ಮ ದೇವಿಯ ವಿಗ್ರಹವಿದೆ. ಹಾಗೆ ಗರ್ಭಗುಡಿಯ ಬಾಗಿಲು ಪಕ್ಕದಲ್ಲಿ ಯಾವುದೇ ರೀತಿಯ ಇತರೆ ಶಿಲ್ಪಗಳು ಕಂಡುಬರುವುದಿಲ್ಲ.

ಏರುವಿನ್ಯಾಸ ಅಧಿಷ್ಠಾನ ಭಿತ್ತಿ ಪ್ರಸ್ತರವು ಮಾತ್ರ ಹೊಂದಿದ್ದು ಶಿಖರವನ್ನು ಹೊಂದಿಲ್ಲ ಮತ್ತು ತುಂಬಾ ಚಿಕ್ಕದಾದ ದೇವಾಲಯವಾಗಿದೆ. ಹಾಗು ಈ ದೇವಾಲಯದ ಸುತ್ತಲು ಐದು ಅಡಿ ಎತ್ತರದ ಕಲ್ಲಿನ ಬಂಡೆಯಿಂದ ನಿರ್ಮಿಸಿದ ಪೌಳಿ ಗೋಡೆಯನ್ನು ಮಾತ್ರ ಹೊಂದಿದ್ದು ದೇವಾಲಯವು ಗೋಪಾಲಪುರ ನಗರದ ಜನರ ಆರಾಧ್ಯ ದೇವತೆಯಾಗಿದ್ದಾಳೆ.

ಸಂಖ್ಯೆ : ೧೧

ಹೆಸರು : ಬೀರಲಿಂಗೇಶ್ವರ ಮತ್ತು ವಸುರಾಂಬ

ಸ್ಥಳ : ಬಸವನಕಟ್ಟೆ ಅಜಾದ್‌ನಗರ

ಕಾಲಮಾನ : ಕ್ರಿಶ ೧೨ನೇ ಶತಮಾನ

ಅಭಿಮುಖ : ಉತ್ತರ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ಈ ದೇವಾಲಯವು ನಗರದ ಸಿದ್ಧನಾಯಕ ವೃತ್ತದ ಶ್ರೀವೆಂಕಟೇಶ್ವರ ದೇವಾಲಯದ ಹಿಂದೆ ಇದೆ. ಇದು ಪಾಳೆಗಾರರ ಕಾಲದ ದೇವಾಲಯವಾಗಿದ್ದು ಸಿದ್ಧನಾಯಕನ ವೃತ್ತದ ಜನರ ಪ್ರಮುಖ ಆರಾಧ್ಯ ದೈವವಾಗಿದ್ದಾನೆ.

ತಳವಿನ್ಯಾಸ ಈ ದೇವಾಲಯವು ಗರ್ಭಗೃಹ ಅಂತರಾಳವನ್ನು ಮಾತ್ರ ಹೊಂದಿದೆ. ಗರ್ಭಗುಡಿ ನಾಲ್ಕು ಮೂಲೆ ಕಂಬಗಳಿಂದ ಚೌಕಾಕಾರವಾಗಿದ್ದು ಗರ್ಭಗುಡಿಯ ಮಧ್ಯದಲ್ಲಿ ಎತ್ತರವಾದ ಪೀಠದ ಮೇಲೆ ಎರಡು ವಿಗ್ರಹಗಳು ಒಂದೇ ಗರ್ಭಗೃಹದಲ್ಲಿರುವುದನ್ನು ಕಾಣುತ್ತೇವೆ. ಮೂರು ಅಡಿ ಎತ್ತರದ ಬೀರಲಿಂಗೇಶ್ವರ ಮತ್ತು ವಸುರಾಂಬ ದೇವರುಗಳ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಹಾಗೆಯೇ ಅಂತರಾಳದ ಭಿತ್ತಿಯಲ್ಲಿ ಯಾವುದೇ ಶಿಲ್ಪಗಳನ್ನು ಕಾಣುವುದಿಲ್ಲ. ಅಂತರಾಳದ ಬಾಗಿಲಲ್ಲಿ ಎಡ ಮತ್ತು ಬಲಭಾಗದಲ್ಲಿ ಎರಡು ಶೈವ ದ್ವಾರಪಾಲಕರು ಒಂದು ಕೈಯಲ್ಲಿ ತ್ರಿಶೂಲ ಮತ್ತೊಂದು ಕೈಯಲ್ಲಿ ಡಮರುಗವನ್ನು ಹಿಡಿದಿರುವ ಶೈವ ದ್ವಾರಪಾಲಕರು ಅಂತರಾಳದ ಬಾಗಿಲಲ್ಲಿ ನಿಂತಿದ್ದಾರೆ. ಮತ್ತೆ ಬಾಗಿಲುವಾಡ ಲಲಾಟದಲ್ಲಿ ಯಾವುದೇ ರೀತಿಯಾದ ಶೈವ ಶಿಲ್ಪಗಳನ್ನು ಕಾಣಲಾಗುವುದಿಲ್ಲ.

ಏರುವಿನ್ಯಾಸ ಅಧಿಷ್ಠಾನ ಭಿತ್ತಿ ಮತ್ತು ಪ್ರಸ್ತರವನ್ನು ಹೊಂದಿದ್ದು ಈ ದೇವಾಲಯಕ್ಕೆ ಯಾವುದೇ ಶಿಖರವು ಇರುವುದಿಲ್ಲ ಹಾಗೂ ಈ ದೇವಾಲಯದ ಮುಂದೆ ಐದಿನೈದು ಅಡಿ ಎತ್ತರದ ದೀಪಸ್ತಂಭವಿದೆ. ಪ್ರತಿ ಸೋಮವಾರ ಬೀರಲಿಂಗೇಶ್ವರ ಪೂಜೆ ನಡೆಯುತ್ತದೆ.

ಸಂಖ್ಯೆ : ೧೨

ಹೆಸರು : ಭೂತಪ್ಪ ದೇವರು

ಸ್ಥಳ : ಗಾಂಧೀ ವೃತ್ತದ ಸಮೀಪ

ಕಾಲಮಾನ : ಕ್ರಿ.ಶ. ೧೯ನೇ ಶತಮಾನ

ಅಭಿಮುಖ : ಪೂರ್ವ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ಹಿರಿಯೂರು ನಗರದ ಗಾಂಧೀ ವೃತ್ತದ ಬಳಿ ಭೂತಪ್ಪ ದೇವರ ಆಲಯವಿದೆ. ಹಿರಿಯೂರು ಸ್ಥಾಪನೆಯಾದ ದಿನವೆ ಈ ದೇವಾಸ್ಥಾನ ಸ್ಥಾಪನೆಯಾಗಿದೆಯಂತೆ. ಸದ್ಯ ಭೂತಪ್ಪ ದೇವರ ಆಲಯವಿರುವ ಸ್ಥಳ ಕೋಟೆಯ ಹೊರಗಿನ ಪ್ರದೇಶವಾಗಿತ್ತು. ಆ ಕಡೆಯ ಭಾಗವೆಲ್ಲವು ಕೋಟೆಯ ಒಳಗಡೆಯೇ ಇತ್ತು. ಕೋಟೆಯ ಬಾಗಿಲು ಸಿದ್ಧನಾಯಕನ ಸರ್ಕಲ್ ಬಳಿ ಇದ್ದಿತ್ತು. ಭೂತಪ್ಪ ದೇವರು ಕೋಪಗೊಂಡು ನೋಡು-ನೋಡುತ್ತಲೇ ಮನೆಯ ಮುಂದೆ

ಮನೆಗಳ ಮೇಲೆ ಜನಗಳ ಮುಂದೆ ದೊಡ್ಡ ದೊಡ್ಡ ಗಾತ್ರದ ಕಲ್ಲುಗಳು ಬಂದು ಬೀಳಲಾರಂಭಿಸಿದ್ದವು. ಜನರಿಗೆ ಯಾವ ನೋವು ಘಟಿಸದಿದ್ದರೂ ಭಯ ಆವರಿಸಿತು. ಜನ ಕಂಗಾಲಾದದ್ದು. ಕೊನೆಗೆ ಶಾಸ್ತ್ರ ಕೇಳಿದರು. ಭೂತಪ್ಪ ದೇವರು ಮುನಿಸಿಕೊಂಡಿದ್ದಾರೆ ಎಂದು ತಿಳಿದಾಗ ನಿನ್ನನ್ನು ಪೂಜಿಸುತ್ತೇವೆ. ನಿನಗಾಗಿ ನಿರ್ದಿಷ್ಟವಾದ ಸ್ಥಳವನ್ನು ಮೀಸಲಾಗಿಡುತ್ತೇವೆ.

ದಯವಿಟ್ಟು ಕರುಣಿಸಿ ಕಾಪಾಡಬೇಕು ದೇವ ಎಂದು ನಿಷ್ಠೆಯಿಂದ ನಿವೇದಿಸಿಕೊಂಡಿದ್ದರಿಂದ ಪರಿಸ್ಥಿತಿ ಶಾಂತವಾಯಿತು. ಅಂದಿನಿಂದ ಇಂದಿನವರೆಗೆ ಅದೇ ಸ್ಥಳದಲ್ಲೂ ರಾಯನಿಗೆ ಪೂಜೆ ಸಲ್ಲುತ್ತದೆ. ಈಗಲೂ ಭೂತಪ್ಪ ದೇವರು ಗಾಂಧೀ ವೃತ್ತದ ಬಳಿಯೇ ನಿಂತು ಸಕಲರನ್ನು ರಕ್ಷಿಸುವ ವೀರನಾಗಿ ನಿಂತಿದ್ದಾನೆ.

ಸಂಖ್ಯೆ : ೧೩

ಹೆಸರು : ಕಣಿವೆ ಮಾರಮ್ಮ

ಸ್ಥಳ : ಗಾಂಧೀ ವೃತ್ತದ ಸಮೀಪ

ಕಾಲಮಾನ : ಕ್ರಿ.ಶ. ೧೭-೧೮ನೇ ಶತಮಾನ

ಅಭಿಮುಖ : ಪೂರ್ವ

ಶೈಲಿ : ಆಧುನಿಕ

ಸಂರಕ್ಷಣೆ : ಧಾರ್ಮಿಕದತ್ತಿ

ಹಿರಿಯೂರಿನ ಗಾಂಧೀ ವೃತ್ತದ ಬಳಿ ಶ್ರೀ ಕಣಿವೆ ಮಾರಮ್ಮನನ್ನು ಪ್ರತಿಷ್ಠಾಪಿಸಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಆ ದೇವಾಲಯವನ್ನು ಭೂತಪ್ಪ ದೇವಾಲಯದ ಪಕ್ಕಕ್ಕೆ ಸ್ಥಳಾಂತರಿಸಲಾಗಿದೆ. ಹಿರಿಯೂರಿನಲ್ಲಿ ಸುಮಾರು ೧೫ ವರ್ಷಗಳ ಹಿಂದೆ ಮಾರಿಬೇನೆ ಹರಡಿತ್ತು. ತೀರಾ ಭಯಂಕರವಾದ ರೀತಿಯಲ್ಲಿ ರೋಗ ಪ್ರಸಾರ ಹೊಂದಿತ್ತು. ಮನೆ ಮನೆಗಳಲ್ಲಿ ಬೀದಿ ಬೀದಿಗಳಲ್ಲಿ ಜನರು ಸಾವನಪ್ಪಿದರು ಅದು ಭಯಂಕರವಾಗಿತ್ತು. ಜನರು ಭಯಭೀತರಾಗಿ ಊರು ಬಿಟ್ಟು ತೊಲಗಿದವರೆಷ್ಟೋ ಹಿರಿಯೂರಿಗೆ ಬರಲು ಹೆದರಿದವರೆಷ್ಟೋ ಬೃಹತ್ ಪ್ರಮಾಣದಲ್ಲಿ ಜನರಿಗೆ ಮಾರಿಬೇನೆಗೆ ತುತ್ತಾದರು ಭಕ್ತರು ಚಿಂತಿಸಿ ಕೊನೆಗೆ ಮಾರಿಕಣಿವೆಯ ಮಾರಮ್ಮನನ್ನು ಹಿರಿಯೂರಿನಲ್ಲಿ ಪ್ರತಿಷ್ಠಾಪನೆ ಮಾಡಿದರು. ರೋಗ ನಿವಾರಣೆಯಾಗುತ್ತದೆಂದು ತಿಳಿದು ದೇವಿಯನ್ನು ಪ್ರತಿಷ್ಠಾಪಿಸಿದರು. ಭಕ್ತಿಗೆ ಮೆಚ್ಚಿ ಮಾರಿ ದೇವತೆ ಶಾಂತಳಾದಳು. ಅಂದಿನಿಂದ ಹಿರಿಯೂರು ಜನತೆ ಪೂಜೆಯನ್ನು ಮಾಡತೊಡಗಿದರು.

೨.೨. ಮೂರ್ತಿಶಿಲ್ಪ

ವಾಸ್ತುಶಿಲ್ಪಗಳಷ್ಟೇ (ದೇವಾಲಯ) ಪ್ರಾಮುಖ್ಯತೆಯನ್ನು ಮೂರ್ತಿಶಿಲ್ಪಗಳು ಸಹ ಹೊಂದಿವೆ. ಮೂರ್ತಿಶಿಲ್ಪವೂ ಶಿಲ್ಪದಲ್ಲಿಯೇ ಸೇರಿರುವ ಅನಾಧಿಯಾದ ಕಲೆ. ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ಪ್ರಸಿದ್ದವಾದ ಅರವತ್ನಾಲ್ಕು ಕಲೆಗಳಿಗೆಲ್ಲಾ 'ಶಿಲ್ಪ' ಎನ್ನುವ ಹೆಸರೇ ಅನ್ವಯವಾಗುತ್ತಿತ್ತು. ಶಿಲ್ಪ ಎಂಬ ಪದಕ್ಕೆ ಬೆರಗನ್ನುಂಟು ಮಾಡುವ ಕೈಕೆಲಸ ಎಂಬ ಅರ್ಥವಿದೆ. ಸಂಸ್ಕೃತದ ಶಿಲ್ಪವೆಂಬ ಶಬ್ದ 'ಶೀಲ ಸಮಾಧೌ' ಎನ್ನುವ ಧಾತುವಿನಿಂದ ಉತ್ಪನ್ನವಾಗಿದೆ.[೮] ಸಮಾಧಿ ಎಂಬ ಅರ್ಥವುಳ್ಳ ಶಿಲಾ ಧಾತುವು ತಪಸ್ಸನ್ನು ಸೂಚಿಸುತ್ತದೆ. ಅಂದರೆ ತಪಸ್ಸಿನ ಪ್ರಭಾವದಿಂದ ನಿರ್ವಹಿಸಲ್ಪಡುತ್ತಿರುವುದು ಶಿಲ್ಪ ಎಂಬುದು ಒಂದು ಅರ್ಥ. ಶಿಲ್ಪೋಪನಿಷತ್ತೆಂಬ ಗ್ರಂಥವು ಜಗತ್ತೆನ್ನೆಲ್ಲ ಸೃಷ್ಟಿ ಮಾಡಿದ ಬ್ರಹ್ಮನು ತನ್ನ ಮನಸ್ಸಿನಿಂದ ಮಾಡಿದುದೆಲ್ಲ ಶಿಲ್ಪವೇ ಎಂದು ಹೇಳುತ್ತದೆ.[೯] ಸಂಸ್ಕೃತದ ಪ್ರಾಚೀನ ಗ್ರಂಥಗಳಲ್ಲಿ 'ಶಿಲ್ಪ' ಶಬ್ದವನ್ನು 'ಕಲಾಕೌಶಲ' ಎಂಬ ಅರ್ಥದಲ್ಲಿ ಬಳಸಲಾಗಿದೆ.[೧೦] ಶಿಲ್ಪವೆಂದರೆ 'ಲಲಿತ ಅಥವಾ ಯಂತ್ರಕಲೆ' ಎಂದು ಅರ್ಥವಾಗುತ್ತದೆ. ಮುಂದೆ ಈ ಪದದ ವ್ಯಾಪ್ತಿ ಪರಿಮಿತಗೊಂಡು ಶಿಲ್ಪ ಎಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥಕ್ಕೆ ಸೀಮಿತವಾಗುತ್ತದೆ.[೧೧] 'ಮೂರ್ತಿ' ಎಂಬುವುದಕ್ಕೆ ಪರ್ಯಯವಾಗಿ ಬಳಸಿರುವ ಪ್ರತಿಮಾ, ಬಿಂಬ, ಪ್ರತಿಕೃತಿ, ವಿಗ್ರಹ ಎಂಬ ಪದಗಳು ಅದೊಂದು ಭೌತಿಕವಸ್ತು ಎಂಬಂತೆ ಅರ್ಥಕೊಡುತ್ತದೆ. ಮೂರ್ತಿಶಿಲ್ಪವನ್ನು ಕುರಿತು ಶಾಸ್ತ್ರೀಯ ಅಧ್ಯಯನ ಮಾಡುವುದಕ್ಕೆ ಮೂರ್ತಿಶಾಸ್ತ್ರ ಅಥವಾ ಪ್ರತಿಮಾಶಾಸ್ತ್ರವೆಂದು ಕರೆಯಲಾಗುತ್ತದೆ.

ಮೂರ್ತಿಶಿಲ್ಪವನ್ನು ದೇವಶಿಲ್ಪ ಮತ್ತು ಮಾನವಶಿಲ್ಪ ಎಂಬ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ದೇವಶಿಲ್ಪಗಳು ಎಂದರೆ ದೇವ ಸಂಬಂಧ ಇರಿಸಿಕೊಂಡಿರುವ ಶಿಲ್ಪಗಳು ಅಂದರೆ ಯಜ್ಞವೇದಿ, ಯಜ್ಞಕುಂಡ, ಯಜ್ಞಶಾಲೆ, ದೇವಾಲಯ, ದೇವಮೂರ್ತಿ, ದೇವೋಪಕರಣ, ಪೂಜಾಪಾತ್ರೆ, ಸುವರ್ಣಾಲಂಕಾರ, ರಥ, ಆಯುಧಗಳು, ಯಜ್ಞ ಮತ್ತು ಸುವರ್ಣ, ತಾಮ್ರ, ಕಬ್ಬಿಣ, ಮರ, ಕಲ್ಲು ಎಂಬ ಪಂಚವಿಧ ವಸ್ತುಗಳಲ್ಲಿ ದೇವಾಲಯಕ್ಕೆ ಯಜ್ಞ ಮತ್ತು ಪೂಜೆಗೆ ಸಂಬಂಧಿಸಿದಂತೆ ನಿರ್ಮಿಸುವ ಶಿಲ್ಪಗಳು.[೧೨] ಪ್ರಪಂಚದಲ್ಲಿ ಮಾನವನ ಉಪಯೋಗಾರ್ಥವಾಗಿ ಅವನ ಬದುಕನ್ನು ಸುಖಗೊಳಿಸಲು ಮತ್ತು ಅವನ ಆತ್ಮದ ಸಂಸ್ಕರಣೆಗೆ ಅವಶ್ಯಕವಾಗಿ ಪಂಚವಿಧ ಶಿಲ್ಪಗಳನ್ನು ನಡೆಸಲಾಗುತ್ತದೆ. ಇವು ಇಹದಲ್ಲಿ ಮನುಷ್ಯನ ಜೀವನವು ಸುಖಮಯವಾಗುವಂತೆ ನೆರವಾಗುತ್ತವೆ. ಇಂತಹ ಮನುಷ್ಯೋಪಯೋಗಿ ವಸ್ತು ನಿರ್ಮಾಣವು 'ಮಾನವಶಿಲ್ಪ' ಎಂದು ಕರೆಯಲ್ಪಡುತ್ತದೆ.[೧೩] ಹೀಗೆ ದೇವಮಾನವ ಶಿಲ್ಪಗಳು ಮನುಷ್ಯನ ಇಹಪರ ಬದುಕನ್ನು ಸುಖಮಯಗೊಳಿಸುತ್ತವೆ. ಶಿಲ್ಪವು ಮಾನವ ಬಹಿರಂಗ ಮತ್ತು ಅಂತರಂಗಗಳನ್ನು ಸಂಸ್ಕರಿಸುವ ಪ್ರಬಲ ಶಕ್ತಿಯಾಗಿದೆ.

ಮಾನವನಿಗೂ ಮೂರ್ತಿಶಿಲ್ಪಕ್ಕೂ ಬಹಳ ನಿಕಟವಾದ ಸಂಬಂಧವಿದೆ. ಮಾನವನು ಹುಟ್ಟಿದಂದೇ ಮೂರ್ತಿಶಿಲ್ಪವೂ ಹುಟ್ಟಿತೆಂದು ಹೇಳಬಹುದು. ಮೂರ್ತಿಗಳಲ್ಲಿ ಮೂರ್ತ ಮತ್ತು ಅಮೂರ್ತ ರೂಪಗಳೆರಡೂ ಇವೆ. ಮೂರ್ತಿ ಬಿಂಬಗಳಿಗೆ ನಿರ್ದಿಷ್ಟವಾದ ರೂಪವಿದ್ದು ಮನುಷ್ಯನ ರೂಪ ಹಾಗೂ ಎರಡು ಅದಕ್ಕಿಂತ ಹೆಚ್ಚಿನ ಅವಯವಗಳನ್ನು ಹೊಂದಿರುತ್ತದೆ. ಆದರೆ ಅಮೂರ್ತ ರೂಪಕ್ಕೆ ನಿರ್ದಿಷ್ಟ ರೂಪವಿರುವುದಿಲ್ಲ.

ಹುಟ್ಟುಬಂಡೆಯ ಆಕಾರವನ್ನುಸುರಿಸಿ ಒಂದು ಕಲ್ಪಿತ ಆಕಾರವನ್ನು ರೂಪಿಸಿರುತ್ತಾರೆ. ಇಂತಹ ಮೂರ್ತಿಗಳನ್ನು ಒಡಮೂಡಿದ ಅಥವಾ ಉದ್ಭವ ಮೂರ್ತಿಗಳೆಂದು ಸಾಮಾನ್ಯವಾಗಿ ಭಾವಿಸಿ ಇವುಗಳ ಸುತ್ತಲೂ ಪೌರಾಣಿಕ ಕಥೆಯನ್ನು ಹೆಣೆಯಲಾಗುತ್ತದೆ. ಅನೇಕ ಕ್ಷೇತ್ರಗಳಲ್ಲಿನ ಉದ್ಭವ ಲಿಂಗಗಳು ನರಸಿಂಹಮೂರ್ತಿಗಳು, ಗಣಪತಿ ವಿಗ್ರಹಗಳು ಮತ್ತು ಅನೇಕ ಸ್ತ್ರೀ ದೇವತಾ ಮೂರ್ತಿಗಳು ಈ ಬಗೆಯವಾಗಿವೆ.[೧೪]

ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಹಿರಿಯೂರು ಪಟ್ಟಣದಲ್ಲಿ ಪ್ರಾಚೀನ ಕಾಲಾವಧಿಯಿಂದ ಪಾಳೆಗಾರರ ಕಾಲಘಟ್ಟದವರೆಗೆ ನಿರ್ಮಿಸಲಾದ ಮೂರ್ತಿಶಿಲ್ಪಗಳು ಲಭ್ಯವಾಗಿದೆ. ಆಯಾ ರಾಜವಂಶಗಳ ಕಾಲದಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪಗಳು ಬೆಳೆದು ಬಂದಿವೆ. ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ಶೈವ, ವೈಷ್ಣವ, ಶಾಕ್ತ ಎಂದು ವಿಭಾಗಿಸಿ ಅಭ್ಯಾಸಿಸಲಾಗಿದೆ.

ಶೈವ ಮೂರ್ತಿಶಿಲ್ಪಗಳು

ಶೈವ ಧರ್ಮ ಅತಿ ಪ್ರಾಚೀನ ಧರ್ಮಗಳಲ್ಲಿ ಒಂದು. ಹರಪ್ಪ ಮೆಹೆಂಜೋದಾರ ಸಂಸ್ಕೃತಿಗಳ ಅವಶೇಷಗಳಲ್ಲಿ ಶಿವ ಸ್ತಂಭಾಕಾರದ ಲಿಂಗಗಳು ಕಂಡುಬರುವುದರಿಂದ ಶೈವ ಧರ್ಮವು ಸಿಂಧೂ ನಾಗರಿಕತೆಯ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿತ್ತೆಂದು ಊಹಿಸಬಹುದು. ಶೈವ ಧರ್ಮವು ಎಷ್ಟು ಪ್ರಾಚೀನವೋ ಅಷ್ಟೆ ವ್ಯಾಪಕವಾಗಿ ಹರಡಿತ್ತೆಂಬುದಕ್ಕೆ ಎಲ್ಲೆಡೆಗಳಲ್ಲಿಯೂ ಕಾಣುವ ಶಿವ ದೇವಾಲಯಗಳು ಮತ್ತು ಲಿಂಗಗಳೇ ಸಾಕ್ಷಿಯಾಗಿದೆ.[೧೫] ಅಧ್ಯಯನ ಕ್ಷೇತ್ರವಾದ ಹಿರಿಯೂರು ಪಟ್ಟಣದಲ್ಲಿ ಶೈವ ಶಿಲ್ಪಗಳಲ್ಲಿ ಲಿಂಗ, ನಂದಿ, ಭೈರವ, ವೀರಭದ್ರ, ಗಣೇಶ, ಕಾರ್ತಿಕೇಯ ಪ್ರಮುಖವಾಗಿ ಈ ಪಟ್ಟಣದಲ್ಲಿ ಕಾಣಬಹುದಾಗಿದೆ.

ಸಂಖ್ಯೆ : ೧

ಶಿಲ್ಪ : ವೀರಭದ್ರ

ಸ್ಥಳ : ತೇರುಮಲ್ಲೇಶ್ವರ ದೇವಾಲಯದ ದೀಪಸ್ತಂಭದ ಸಮೀಪ

ಕಾಲಮಾನ : ಸು. ಕ್ರಿ.ಶ. ೧೫-೧೬ನೇ ಶತಮಾನ

ಶ್ರೀತೇರುಮಲ್ಲೇಶ್ವರ ದೇವಾಲಯದ ಪಕ್ಕದಲ್ಲಿ ವೀರಭದ್ರ ದೇವಾಲಯವಿದ್ದು ಈ ದೇವಾಲಯ ಹಾಳಾಗಿರುವುದರಿಂದ ವೀರಭದ್ರ ದೇವರ ಮೂರ್ತಿಯನ್ನು ತೇರುಮಲ್ಲೇಶ್ವರ ಸ್ವಾಮಿಯ ಎದುರಿಗೆ ದೀಪಸ್ತಂಭಕ್ಕೆ ಹೊಂದಿಕೊಂಡಿರುವಂತೆ ನಂದಿ ಮಂಟಪದಲ್ಲಿ ಇರಿಸಲಾಗಿದೆ. ಚತುರ್ಭುಜದಾರಿಯಾದ ವೀರಭದ್ರನ ಕೈಗಳಲ್ಲಿ ಕತ್ತಿ, ಬಾಣ, ಬಿಲ್ಲು ಮತ್ತು ಗುರಾಣಿಗಳನ್ನು ಹಿಡಿದಿರುವನು. ಕಿರೀಟಧಾರೆ, ಹಾರ, ಸರ, ಯಜ್ಞೋಪವಿತ, ಕುಂಡಲ ಕೈಕಡಗ, ಹಿಂದೆ ಬಹಳ ವೈಭವದಿಂದ ವೀರಭದ್ರೇಶ್ವರನ ಜಾತ್ರೆ ನಡೆಯುತ್ತಿತ್ತು. ಕೆಂಡಾರ್ಚನೆ ನಡೆಯುವಾಗ ಬೆಂಕಿಯನ್ನು ಕೈಯಲ್ಲಿ ಹಿಡಿದು ಕತ್ತಿಯನ್ನು ದೇಹದಲ್ಲಿ ಚುಚಿಕೊಂಡು ಪವಾಡ ನಡೆಸುತ್ತಿದ್ದರಂತೆ ಕ್ರಿ.ಶ. ೧೯೩೪ರಲ್ಲಿ ಹಿರಿಯೂರಿನ ೪೦ನೇ ಶಾಸನದಿಂದ ಚಿತ್ರದುರ್ಗದ ಮೊದಲನೇ ಪಾಳೆಗಾರನಾಗಿದ್ದ ಮತ್ತಿ ತಿಮ್ಮಣ್ಣನಾಯಕನು ಈ ವೀರಭದ್ರ ದೇವರ ದೇವಾಲಯವನ್ನು ಕಟ್ಟಿಸಿ ಭೂ ದತ್ತಿ ಬಿಟ್ಟಿದ್ದನೆಂದು ತಿಳಿದುಬರುತ್ತದೆ. ವೀರಭದ್ರ ಮೂರ್ತಿಶಿಲ್ಪದ ಪಕ್ಕ ನಾಗರಶಿಲ್ಪಗಳನ್ನು ಹಾಗೆ ದ್ವಾರಪಾಲಕಿಯರ ಪಂಚಶಿಲ್ಪಗಳಿವೆ. ಈ ಮೂರ್ತಿಯ ದೇವಾಲಯವು ಭಗ್ನಗೊಂಡಿದೆ.

ಸಂಖ್ಯೆ : ೨

ಶಿಲ್ಪ : ಶಿವಲಿಂಗ

ಸ್ಥಳ : ಶ್ರೀ ತೇರುಮಲ್ಲೇಶ್ವರ ದೇವಾಲಯ ಗರ್ಭಗೃಹದಲ್ಲಿ

ಕಾಲಮಾನ : ಸು. ಕ್ರಿ.ಶ. ೧೫-೧೬ನೇ ಶತಮಾನ

ಹಿರಿಯೂರು ತಾಲೂಕಿನ ಸ್ಥಳೀಯ ಪ್ರದೇಶದಲ್ಲಿರುವ ತೇರುಮಲ್ಲೇಶ್ವರ, ಚುಟುಕು ಮಲ್ಲಪ್ಪನ ಗುಡಿಗಳಲ್ಲಿ ಇರುವ ಶಿವಲಿಂಗಗಳು ನೋಡಲು ಅತ್ಯಂತ ಮನೋಹರವಾಗಿವೆ. ಈ ಲಿಂಗಗಳು ಯಾವುದೇ ಪೀಠ ಪಟ್ಟಿಕೆಗಳನ್ನು ಒಳಗೊಳ್ಳದೆ ರಚನೆಯಾಗಿವೆ ಮತ್ತು ಶಿವಲಿಂಗದ ಹಿಂದೆ ಚಿಕ್ಕದಾದ ಪ್ರಭಾವಳಿ ಇದ್ದು ಶಿವಲಿಂಗವು ಉದ್ದವಾಗಿದ್ದು ವೃತ್ತಾಕಾರದಲ್ಲಿದೆ.

ಸಂಖ್ಯೆ : ೩

ಶಿಲ್ಪ : ಗಣೇಶ

ಸ್ಥಳ : ಹುಳಿಯಾರು ರಸ್ತೆಯಲ್ಲಿರುವ ಕಿತ್ತೂರು ರಾಣಿಚನ್ನಮ್ಮ ವೃತ್ತದ ಸಮೀಪ

ಕಾಲಮಾನ : ಸು. ಕ್ರಿ.ಶ. ೧೫-೧೬ನೇ ಶತಮಾನ

ಹಿರಿಯೂರಿನಲ್ಲಿ ಹಲವಾರು ಕಡೆಗಳಲ್ಲಿ ಗಣೇಶನನ್ನು ಕೆಲವು ಕಡೆ ಪೀಠದ ಮೇಲೆ ಇರುವಂತೆ ಕಂಡರಿಸಲಾಗಿದೆ. ಕೆಲವು ಕಡೆ ಶಿಲ್ಪದ ಇಕ್ಕೆಲಗಳಲ್ಲಿ ಆತನ ವಾಹನವಾದ ಮೂಷಿಕನನ್ನು ಕಾಣಬಹುದು. ಗಣೇಶನನ್ನು ಚತುರ್ಭಜಗಳಲ್ಲಿ ಇರುವಂತೆ ಕಂಡರಿಸಲಾಗಿದ್ದು ಕೈಗಳಲ್ಲಿ ದಂತ, ಪಾಶ, ಅಂಕುಶ, ಹಾಗೂ ಫಲಗಳನ್ನು ಹಿಡಿದಿರುವನು, ವಿವಿಧ ಆಭರಣಗಳಿಂದ ಹಾರ, ಸರ, ಕಿಂಕಿಣಿ ಭುಜಬಂಧಿ, ಕಿರೀಟಗಳಿಂದ ಅಲಂಕೃತಗೊಂಡಿರುವನು.

ಸಂಖ್ಯೆ : ೪

ಶಿಲ್ಪ : ಮೈಲಾರಲಿಂಗ

ಸ್ಥಳ : ಶ್ರೀ ಲಕ್ಷ್ಮೀವೆಂಕಟರಮಣದ ದೇವಾಸ್ಥಾನದ ಸಮೀಪ

ಕಾಲಮಾನ : ಸು. ಕ್ರಿಶ ೧೨ನೇ ಶತಮಾನ

ಶ್ರೀ ಲಕ್ಷ್ಮೀವೆಂಕಟರಮಣ ದೇವಾಲಯದ ಬಳಿ ಚಿಕ್ಕ ಗುಡಿಯಲ್ಲಿ ಸ್ವಾಮಿ ನೆಲೆಸಿದ್ದು. ಚತುರ್ಭುಜಧಾರಿಯಾದ ಮೈಲಾರಲಿಂಗನು ಕೈಗಳಲ್ಲಿ ಕತ್ತಿ ಬಾಣ, ಬಿಲ್ಲು, ಮತ್ತು ಗುರಾಣಿಯನ್ನು ಹಿಡಿದಿರುವನು, ಕಿರೀಟಧಾರೆ, ಕೊರಳಲ್ಲಿ ಹಾರ, ಸರ, ಯಜ್ಞೋಪವೀತ, ಕುಂಡಲ ಕೈಕಡಗ, ಕಾಲ್ಗಡಗ, ಭುಜಬಂದಿ ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿದಿರುವನು.

ಸಂಖ್ಯೆ : ೫

ಶಿಲ್ಪ : ಆಂಜನೇಯ

ಸ್ಥಳ : ಸಿದ್ದನಾಯಕನ ವೃತ್ತದ ಸಮೀಪ

ಕಾಲಮಾನ : ಸು ಕ್ರಿಶ ೧೨ನೇ ಶತಮಾನ

ಹಿರಿಯೂರು ಪಟ್ಟಣದ ಸಿದ್ದನಾಯಕನ ವೃತ್ತದ ಬಳಿ ಪಾಳೆಗಾರರ ಕಾಲದಲ್ಲಿ ನಿರ್ಮಿಸಲಾದ ಆಂಜನೇಯ ಶಿಲ್ಪವು ಎರಡು ಅಡಿ ಎತ್ತರದ ಪೀಠದ ಮೇಲೆ ಐದು ಅಡಿ ಎತ್ತರದ ಆಂಜನೇಯ ಮೂರ್ತಿಯನ್ನು ಪ್ರತಿಷ್ಟಾಪಿಸಲಾಗಿದೆ. ಈ ಮೂರ್ತಿ ಶಿಲ್ಪದ ಹಿಂದೆ ಎತ್ತರವಾದ ಪ್ರಭಾವಳಿ ಇದೆ ಹಾಗೂ ಎತ್ತರವಾದ ಆಂಜನೇಯ ಮೂರ್ತಿಯು ಎರಡು ಕೈಗಳನ್ನು ಹೊಂದಿದ್ದು ಬಲಗೈಯನ್ನು ಮೇಲಕ್ಕೆತ್ತಲಾಗಿದ್ದು ಎಡಗೈಯಲ್ಲಿ ಗದೆಯನ್ನು ಹಿಡಿದಿದ್ದು ದಕ್ಷಿಣಕ್ಕೆ ಮುಖಮಾಡಿದ್ದಾನೆ ಕೊರಳಲ್ಲಿ ಹಾರವನ್ನು ಹೊಂದಿದ್ದು ಕಿರೀಟಧಾರೆಯನ್ನು ಹೊಂದಿರುವನು ಹಾಗೂ ಕಾಲಲ್ಲಿ ಕಡಗವನ್ನು ಧರಿಸಿದ್ದು. ತನ್ನ ಬಾಲವನ್ನು ಬಲಭುಜದ ಮೇಲೆ ಇರುವಂತೆ ಈ ಮೂರ್ತಿ ಶಿಲ್ಪದಲ್ಲಿ ಕಾಣುತ್ತದೆ.

ಶಾಕ್ತ ಶಿಲ್ಪಗಳು

ಶಾಕ್ತ ಶಿಲ್ಪಗಳು ಎಂದರೆ ಸ್ತ್ರೀ ಶಿಲ್ಪಗಳು ಎಂಬರ್ಥದಲ್ಲಿ ಬಳಸಲಾಗುತ್ತದೆ. ಮಾತೃದೇವತೆಯ ರೂಪದಲ್ಲಿರುವ ಶಕ್ತಿ ದೇವತೆಯನ್ನು ಆರಾಧಿಸುವ ಪಂಥವನ್ನು ಶಾಕ್ತ ಪಂಥ ಎಂದು ಕರೆಯುವರು. ಕ್ರಿ.ಪೂ. ೨೦೦೦ ವರ್ಷಗಳ ಹಿಂದೆ ಹರಪ್ಪ ಸಂಸ್ಕೃತಿಯ ಕಾಲದಲ್ಲಿಯೇ ಮಾತೃದೇವತೆಗೆ ಪ್ರಮುಖ ಸ್ಥಾನವಿರುವುದನ್ನು ಇತಿಹಾಸದಿಂದ ತಿಳಿಯಬಹುದು ಇಂತಹ ಶಕ್ತಿದೇವತೆಗಳ ಶಿಲ್ಪಗಳಾದ ಲಕ್ಷ್ಮೀ, ಪಾರ್ವತಿ, ಕಾಳಿಕದೇವಿ, ದುರ್ಗಾದೇವಿ, ಮಹಿಷಮರ್ದಿನಿ, ಸಪ್ತಮಾತೃ ದೇವತಾ ಆರಾಧನೆ ಹಿಂದಿನಿಂದಲೂ ಸಹ ಮುಂದುವರೆದುಕೊಂಡು ಬಂದಿದೆ.

ಸಂಖ್ಯೆ : ೧

ಶಿಲ್ಪ : ಪಾರ್ವತಿ

ಸ್ಥಳ : ಶ್ರೀತೇರುಮಲ್ಲೇಶ್ವರ ದೇವಾಲಯದ ಸುಖನಾಸದ ಮುಂಭಾಗದ ಸಮೀಪ

ಕಾಲಮಾನ : ಸು ಕ್ರಿ.ಶ ೧೫-೧೬ನೇ ಶತಮಾನ

ಹಿರಿಯೂರು ಪಟ್ಟಣದಲ್ಲಿರುವ ಹಲವಾರು ದೇವಾಲಯಗಳಲ್ಲಿ ಈ ಶಾಕ್ತ ಶಿಲ್ಪಗಳು ಕಂಡುಬಂದಿವೆ. ಅವುಗಳಲ್ಲಿ ಪಟ್ಟಣದ ಶೀತೇರುಮಲ್ಲೆಶ್ವರ ದೇವಾಲಯದ ಸುಖನಾಸದ ಮುಂಭಾಗ ಬಲಭಾಗದ ಚಿಕ್ಕ ಗರ್ಭಗುಡಿಯಲ್ಲಿ ಪಾರ್ವತಿಯ ಸುಂದರ ಶಿಲ್ಪವನ್ನು ಇಡಲಾಗಿದೆ. ಶಿವನ ಪತ್ನಿಯಾದ ಪಾರ್ವತಿಯು ಭಾರತೀಯ ಶಕ್ತಿ ದೇವತೆಗಳಲ್ಲೇ ಪ್ರಮುಖವಾದ ಸ್ಥಾನಮಾನ ಪಡೆದಿದ್ದಾಳೆ. ಪಾರ್ವತಿಯ ಬಲಭಾಗದ ಕೈಯಲ್ಲಿ ತ್ರಿಶೂಲವನ್ನು ಎಡಭಾಗದ ಕೈಯಲ್ಲಿ ಪದ್ಮವನ್ನು ಹಿಡಿದು ಕುಳಿತು, ವಸ್ತ್ರಾಭರಣಗಳಿಂದ ಆಲಂಕೃತಗೊಂಡಿದ್ದಾಳೆ. ದೇವಿಯ ಹಿಂಬದಿಯಲ್ಲಿ ಅಲಂಕೃತ ಪ್ರಭಾವಳಿ ಇದೆ. ಈ ದೇವಿಯ ಸೌಮ್ಯ ಸ್ವರೂಪದಿಂದ ಇರುವುದು ಕಂಡುಬರುತ್ತದೆ.

ಸಂಖ್ಯೆ : ೨

ಶಿಲ್ಪ : ರಾಜಾ ಉದ್ಬವ ದುರ್ಗಾಂಬಿಕಾ

ಸ್ಥಳ : ಬಸವನಕಟ್ಟೆ ದುರ್ಗಿಗುಡಿ ರಸ್ತೆ ಸಮೀಪ

ಕಾಲಮಾನ : ಸು.ಕ್ರಿ.ಶ ೧೭-೧೮ನೇ ಶತಮಾನ

ಆದಿಶಕ್ತಿ ಎಂದು ಕರೆಯಲಾಗಿರುವ ಶಕ್ತಿ ದೇವತೆಗಳಲ್ಲಿ ದುರ್ಗಿಯು ಪ್ರಮುಖ ಸ್ಥಾನ ಪಡೆದಿದ್ದಾಳೆ. ಹಿರಿಯೂರು ಪಟ್ಟಣದಲ್ಲಿರುವ ದುರ್ಗಮ್ಮನ ದೇವಾಲಯದಲ್ಲಿ ಈ ಮೂರ್ತಿಶಿಲ್ಪವಿದೆ. ದುರ್ಗಿಯ ಹಿಂಬದಿಯಲ್ಲಿ ಸಿಂಹವಿದ್ದು, ಕೋಣನ ತಲೆಯ ಮೇಲೆ ಪದ್ಮಾಸನದಲ್ಲಿ ಕುಳಿತಿರುವಳು, ಈಕೆಯ ಎರಡು ಕೈಗಳಿದ್ದು, ಬಲಗೈಯಲ್ಲಿ ಕತ್ತಿಯನ್ನು ಎಡಗೈಯಲ್ಲಿ ಕುಂಕುಮದ ಬಟ್ಟಲನ್ನು ಕಾಣಬಹುದಾಗಿದೆ ಹಾಗೂ ಕೊರಳಲ್ಲಿ ಹಾರವನ್ನು ಕಾಲುಗಳಲ್ಲಿ ಕಡಗವನ್ನು ಮತ್ತು ಶಿರದಲ್ಲಿ ಕೀರಿಟವನ್ನು ಧರಿಸಿದ್ದ ತುಂಬಾ ಸುಂದರವಾದ ಮೂರ್ತಿಶಿಲ್ಪ ಇದಾಗಿದೆ.

ಸಂಖ್ಯೆ : ೩

ಶಿಲ್ಪ : ಕನ್ನಿಕಾ ಪರಮೇಶ್ವರಿ

ಸ್ಥಳ : ಸಿದ್ಧನಾಯಕನ ವೃತ್ತದ ಸಮೀಪ

ಕಾಲಮಾನ : ೧೯-೨೦ನೇ ಶತಮಾನ

ನಗರದ ಸಿದ್ಧನಾಯಕನ ವೃತ್ತಕ್ಕೆ ಹೋಗುವ ಮಾರ್ಗದಲ್ಲಿ ಈ ದೇವಿಯ ಮೂತಿಯನ್ನು ದೇವಾಲಯದಲ್ಲಿ ಕಾಣಬಹುದಾಗಿದೆ. ವೈಶ್ಯ ಕುಲಬಾಂಧವರ ನೆರವಿನಿಂದ 'ಅಲ್ಲಂಪಲ್ಲಿ ಸಿದ್ದಪ್ಪ ಶೆಟ್ಟರು ದೇವಾಲಯ ಕಟ್ಟಿಸಿ (೧೯೨೯) ಈ ದೇವತಾ ಮೂರ್ತಿಯನ್ನು ಹಾಗೂ ನವಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ದೇವಿಯು ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿರುವಳು ಚತುರ್ಭುಜಧಾರೆಯಾದ ದೇವಿಯ ಬಲಭಾಗದ ಕೈಮೇಲೆ ಗಿಳಿ ಇದೆ. ಎಡಭಾಗದ ಕೈಯಲ್ಲಿ ಕಮಲವಿದೆ. ಮತ್ತೆರಡು ಕೈಗಳು ಅಭಯ ಮುದ್ರೆಯಲ್ಲಿವೆ. ದೇವಿಯ ಆಭರಣಗಳಿಂದ ಅಲಂಕೃತಗೊಂಡಿರುವಳು.

ತೆಳುವಾಳದ ಮೈಮಾಟವನ್ನು ಹೊಂದಿರುವ ದೇವಿ ಉದ್ದನೆಯ ಕಿರೀಟ, ಕುಂಡಲಹಾರ, ಸರ ಭುಜಬಂಧಿ, ತೋಳಬಂಧಿ, ಕಾಲ್ಕಡಗಗಳ ಆಭರಣಗಳಿಂದ ಅಲಂಕೃತಗೊಂಡಿರುವಳು. ದೇವಿಯ ಹಿಂಬದಿಯಲ್ಲಿ ಪ್ರಭಾವಳಿ ಇದೆ. ದೇವಿ ಬಲಭಾಗದಲ್ಲಿ ಜನಾರ್ಧನ, ಕಾಶಿವಿಶ್ವನಾಥ, ಲಿಂಗವನ್ನು, ಎಡಭಾಗದಲ್ಲಿ ನಗರೇಶ್ವರ, ರಾಮ, ಸೀತೆ, ಲಕ್ಷ್ಮಣ ಹಾಗೂ ಆಂಜನೇಯ ವಿಗ್ರಹ ಮೂರ್ತಿಗಳನ್ನು ಸ್ಥಾಪಿಸಲಾಗಿದೆ.

ಸಂಖ್ಯೆ : ೪

ಶಿಲ್ಪ : ಬನಶಂಕರಿ

ಸ್ಥಳ : ಬಸವನಕಟ್ಟೆ ದುರ್ಗಿಗುಡಿ ರಸ್ತೆ ಸಮೀಪ

ಕಾಲಮಾನ : ಕ್ರಿ.ಶ ೧೮೦೦

ಈ ದೇವಿಯು ಶಾಂತಿ ಸಮೃದ್ಧಿಗಳ ಆದಿದೇವತೆಯಾಗಿದ್ದಾಳೆ. ಕ್ರಿ.ಶ ೧೮೦೦ ರಲ್ಲಿ ಬೆಂಗಳೂರಿನ ದೇವಾಂಗ ಸಮಾಜದ ಭಕ್ತರು, ಬಾದಾಮಿಗೆ ಹೋಗಿ ಬನಶಂಕರಿಯ ವಿಗ್ರಹವನ್ನು ಮಾಡಿಸಿಕೊಂಡು ತರುವಾಗ ಹಿರಿಯೂರಿನಿಂದ ಮುಂದೆ ಬೆಂಗಳೂರಿಗೆ ಕೊಂಡೊಯ್ಯಲು ಸಾಧ್ಯವಾಗಲಿಲ್ಲ ಹಾಗಾಗಿ ಈ ಮೂರ್ತಿಶಿಲ್ಪವನ್ನು ಬನಶಂಕರಿ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಯಿತು.

ಬನಶಂಕರಿ ದೇವಿಯ ಸಿಂಹದ ಮೇಲೆ ಕುಳಿತಿರುವಳು, ದೇವಿಯ ಹಿಂಭಾಗ ಪ್ರಭಾವಳಿ ಇದೆ. ಚತುರ್ಭುಜ ಧಾರಿಯಾದ ಈ ದೇವಿಯ ತನ್ನ ಕೈಗಳಲ್ಲಿ ಕತ್ತಿ, ಡಮರು, ಕಳಸ, ತ್ರಿಶೂಲವನ್ನು ಹಿಡಿದಿರುವಳು, ಈಕೆ ಸರ, ಕುಂಡಲಹಾರ, ಕಾಲ್ಗಡಗ, ಭುಜಬಂಧಿ, ತೋಳಬಂಧಿ ಆಭರಣಗಳಿಂದ ಅಲಂಕೃತವಾಗಿರುವ ಈ ದೇವಿಯು ಕೆಳಭಾಗದಲ್ಲಿ ಸಿಂಹ, ನಾಗ ಹಾಗೂ ದೇವಿಯ ಮುದ್ರೆಗಳಿವೆ.

ಸಂಖ್ಯೆ : ೬

ಶಿಲ್ಪ : ಭಗವತಿ ಅಮ್ಮನ್

ಸ್ಥಳ : ಚುಟುಗು ಮಲ್ಲೇಶ್ವರ ಬಡಾವಣೆ ಸಮೀಪ

ಕಾಲಮಾನ : ಸು. ಕ್ರಿ.ಶ. ೧೭ನೇ ಶತಮಾನ

ಈ ದೇವಿಯು ಎರಡು ಅಡಿ ಎತ್ತರದ ಪೀಠದ ಮೇಲೆ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಿಯು ಚತುರ್ಭುಜ ದಾರಿಯಾಗಿದ್ದು ಹಿಂದಿನ ಎರಡು ಕೈಯಲ್ಲಿ ಒಂದೊಂದು ಅಸ್ತ್ರವನ್ನು ಹಿಡಿದಿದ್ದಾಳೆ. ಬಲಗೈಯಲ್ಲಿ ಶಂಖ ಮತ್ತು ಅದೇ ಹಿಂಬದಿಯ ಕೈಯಲ್ಲಿ ಪಾಶವನ್ನು ಹಿಡಿದುಕೊಂಡಿದ್ದಾಳೆ. ಮತ್ತೆ ಮುಂದಿನ ಎರಡು ಕೈಯಲ್ಲಿ ಬಲಗೈಯು ಆಭಯ ಮುದ್ರೆಯ ಭಂಗಿಯಲ್ಲಿದೆ ಮತ್ತು ಎಡಗೈಯು ಕೆಳಗೆ ಇಳಿಬಿಟ್ಟಿದ್ದಾಳೆ. ಕೈಯಲ್ಲಿ ಬಳೆಯನ್ನು ತೊಟ್ಟಿದ್ದು ಸೊಂಟದಲ್ಲಿ ಪಟ್ಟಿಯನ್ನು ಹಾಗೂ ಕಿವಿಯೊಲೆ ಕಂಠಾಭರಣ ಮತ್ತು ಕಾಲಿಗೆ ಕಾಲ್ಗಡಗವನ್ನು ಧರಿಸಿದ್ದು ದೇವಿಯ ಕೀರಿಟಧಾರೆಯಾಗಿದ್ದು ಸೌಮ್ಯ ಸ್ವರೂಪವನ್ನು ಹೊಂದಿದ ಮೂರ್ತಿಶಿಲ್ಪವಾಗಿದೆ.

ಸಂಖ್ಯೆ : ೭

ಶಿಲ್ಪ : ಬನದಮ್ಮ ದೇವಿ

ಸ್ಥಳ : ಗೋಪಾಲ್‌ಪುರ ರಸ್ತೆ ಸಮೀಪ

ಕಾಲಮಾನ : ಸು. ಕ್ರಿ.ಶ. ೧೭ನೇ ಶತಮಾನ

ಈ ಬನದಮ್ಮ ದೇವಿಯು ಎರಡು ಅಡಿ ಎತ್ತರ ಪೀಠದ ಮೇಲೆ ಬನದಮ್ಮದೇವಿಯ ಮೂರ್ತಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಮೂರ್ತಿಶಿಲ್ಪದ ಹಿಂಭಾಗದಲ್ಲಿ ನಾಲ್ಕುವರೆ ಅಡಿ ಎತ್ತರದ ಪ್ರಭಾವಳಿ ಇದೆ. ಬನದಮ್ಮದೇವಿಯು ಕಕ್ಷಾಸನದ ಭಂಗಿಯಲ್ಲಿ ಕುಳಿತಿದ್ದಾಳೆ. ಚತುರ್ಭುಜಧಾರಿಯಾದ ದೇವಿಯು ಹಿಂದಿನ ಎರಡು ಕೈಯಲ್ಲಿ ಚಿಕ್ಕದಾದ ಆಯುಧವನ್ನು ಹಿಡಿದಿದ್ದಾಳೆ. ಮತ್ತು ಎಡಗೈಯಲ್ಲಿ ಪಾಶವನ್ನು ಹಿಡಿದು ಕುಳಿತಿದ್ದಾಳೆ. ಹಾಗೆಯೇ ಈ ದೇವಿಯು ಬಲಗೈಯಲ್ಲಿ ಚಿಕ್ಕದಾದ ಖಡ್ಗವನ್ನು ಹಿಡಿದು ಎಡಗೈಯನ್ನು ತನ್ನ ಮೊಣಕಾಲಿನ ಮೇಲೆ ಇಟ್ಟುಕೊಂಡು ಕುತ್ತಿದ್ದು ದೇವಿಯ ಶಿರದಲ್ಲಿ ಕೀರಿಟ ಮತ್ತು ಕಿವಿಯಲ್ಲಿ ಒಲೆಯನ್ನು ಧರಿಸಿದ್ದು ಈ ಬನದಮ್ಮ ದೇವಿಯು ಶಾಕ್ತ ಶಿಲ್ಪಗಳಲ್ಲಿನ ಸುಂದರ ಮೂರ್ತಿ ಶಿಲ್ಪವಾಗಿದೆ.

೩.೩ ಭಿತ್ತಿ ಚಿತ್ರಗಳು

ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಕರ್ನಾಟಕದ ಭಿತ್ತಿ ಚಿತ್ರಗಳಿಗೆ ತನ್ನದೆ ಆದ ಮಹತ್ವದ ಸ್ಥಾನವಿದೆ. ಕನ್ನಡ ನಾಡಿನ ಜನತೆ ಭಿತ್ತಿ ಚಿತ್ರಗಳನ್ನು ರಚಿಸುವ ಮೂಲಕ

ಕಲಾಕಾರರಾಗಿ ಭಿತ್ತಿಚಿತ್ರಗಳನ್ನು ಬರೆಸುವುದರೊಂದಿಗೆ ಕಲಾ ಪೋಷಕರಾಗಿದ್ದಾರೆ.[೧೬] ಈ ಭಿತ್ತಿಚಿತ್ರ ಪರಂಪರೆ ವ್ಯಕ್ತಿಯಿಂದ ವ್ಯಕ್ತಿಗೆ ಸಮುದಾಯದಿಂದ ಸಮುದಾಯಕ್ಕೆ ಬೇರೆ ಬೇರೆಯಾಗಿ ಸೃಷ್ಟಿಗೊಂಡಿದೆ.

ಪ್ರಾದೇಶಿಕತೆ ಆ ಪ್ರದೇಶದ ಜನರ ಜೀವನ ವಿಧಾನ ಆಚಾರ ವಿಚಾರ ಧಾರ್ಮಿಕ ನಂಬಿಕೆ ಮುಂತಾದವುಗಳು ಅವರ ಭಿತ್ತಿಚಿತ್ರ ರಚನೆಯ ಮೇಲೆ ಪ್ರಭಾವ ಬೀರಿ ಈ ಪರಂಪರೆ ವೈವಿಧ್ಯಮಯವಾಗಿ ರೂಪುಗೊಳ್ಳಲು ಕಾರಣವಾಗಿದೆ. ಯಾವುದೇ ಕಾಲದ ಭಿತ್ತಿಚಿತ್ರಗಳು ಆಯಾ ಕಾಲದ ಜನಜೀವನದ ವಿವರಗಳನ್ನು ಒಳಗೊಂಡಿರುತ್ತದೆ. ಹಾಗೆಯೇ ಧಾರ್ಮಿಕ ರಾಜಕೀಯ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಇವು ಮಹತ್ವದ ಆಕರಗಳು ಆಗಿದೆ.

ಭಿತ್ತಿ ಚಿತ್ರ ಕಲಾ ಪರಂಪರೆಯನ್ನು ನಮ್ಮ ಪೂರ್ವಜರು ಧರ್ಮಪ್ರಚಾರದ ಸಾಧನವಾಗಿ ಸಮಾಜವನ್ನು ರೂಪಿಸುವಲ್ಲಿ ಮನರಂಜನೆಗಾಗಿ ವೈಯಕ್ತಿಕ ಭಾವನೆಗಳು ಕಲಾತ್ಮಕ ಅಭಿವ್ಯಕ್ತಿಗಾಗಿ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದಾರೆ. ಧರ್ಮ, ದೇವರು, ಆರಾಧನೆ, ಪಂಥ, ಪಂಗಡ ಹಾಗೂ ಸಾಮಾಜಿಕ ಶ್ರೇಣಿಕರಣಗಳ ಸಂಕೀರ್ಣ ಬದುಕುಗಳಲ್ಲದೇ ನಾಡಿನ ಜನರ ಕಲಾಭಿಮಾನ ಸೌಂದರ್ಯೋಪಾಸನೆಯ ಬೆಳವಣಿಗೆಯಂತಹ ಅಂತರಿಕ ವಿಷಯಗಳು ಈ ಭಿತ್ತಿಚಿತ್ರ ಪರಂಪರೆಯಲ್ಲಿ ಅಡಕಗೊಂಡಿವೆ.

ಹಾಗೆಯೇ ಭಿತ್ತಿ ಚಿತ್ರಗಳು ಸಮಕಾಲಿನ ಜನಜೀವನ ಸಸ್ಯ ಮತ್ತು ಪ್ರಾಣಿವರ್ಗಗಳ ಕುರಿತು ತಿಳಿಸಿಕೊಡುವ ಮಹತ್ವದ ಚಿತ್ರ ಎನ್ನಬಹುದು.

ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ರಚನೆಯಾದ ಭಿತ್ತಿ ಚಿತ್ರ ಕಲಾ, ಶೈಲಿ, ವಿನ್ಯಾಸ ಮತ್ತು ವಸ್ತುವಿಷಯಗಳು ವೈವಿದ್ಯತೆಯಿಂದ ಕೂಡಿದೆ. ಈ ವೈವಿಧ್ಯತೆಗೆ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಮತ್ತು ಭೌಗೋಳಿಕ ಹಿನ್ನೆಲೆ ಕಾರಣವೆನ್ನಬಹುದು. ಪ್ರಾಗಿತಿಹಾಸ ಕಾಲ, ಪೂರ್ವಭಾವಿ ಇತಿಹಾಸ ಕಾಲಗಳಲ್ಲೂ ಇಲ್ಲಿ ಕಲಾ ಚಟುವಟಿಕೆ ನಡೆದಿದೆ.[೧೭] ಐತಿಹಾಸಿಕ ಕಾಲವನ್ನು ನೋಡಿದಾಗ ಕದಂಬರಿಂದ ಮೈಸೂರು ಒಡೆಯರ ಕಾಲದವರೆಗೂ ಈ ನೆಲದಲ್ಲಿ ಭಿತ್ತಿಚಿತ್ರದ ರಚನೆ ನಡೆದಿದೆ. ಈ ನಾಡಿನ ಜನರಲ್ಲಿ ಬದುಕಿನ ಪ್ರಮುಖ ಭಾಗವೇ ಆಗಿ ಬೆಳೆದು ಬಂದ ಭಿತ್ತಿ ಚಿತ್ರಕಲಾ ಪರಂಪರೆಯ ಬಗ್ಗೆ ಸ್ಥೂಲವಾಗಿ ತಿಳಿದುಕೊಳ್ಳಬಹುದು.

ಹಿರಿಯೂರು ತೇರುಮಲ್ಲೇಶ್ವರ ದೇವಾಲಯದ ಭಿತ್ತಿ ಚಿತ್ರಗಳು

ಚಿತ್ರದುರ್ಗ ಜಿಲ್ಲೆಗೆ ಸೇರಿದ ಹಿರಿಯೂರಿನ ಈ ದೇವಾಲಯದಲ್ಲಿ ಕ್ರಿ.ಶ. ೧೭ನೇ ಶತಮಾನದಲ್ಲಿ ಕೆಂಚಪ್ಪನಾಯಕನಿಂದ ಬರೆಸಲಾದ ಚಿತ್ರಗಳಿವೆ. ಕಿರಾತಾರ್ಜುನೀಯ ಪ್ರಸಂಗ ದಶವಾತರ ಅಷ್ಟದಿಕ್ಪಾಲಕರು ಸೀತಾಕಲ್ಯಾಣ ಮುಂತಾದ ಚಿತ್ರಗಳಿವೆ.

ಈ ಹಿರಿಯೂರಿನಲ್ಲಿ ಒಂದು ದಕ್ಷಿಣ ಕಾಶಿ ಎಂದು ಹೆಸರಾಗಿರುವ ತೇರುಮಲ್ಲೇಶ್ವರ ಎಂಬ ಒಂದು ಐತಿಹಾಸಿಕ ಸುಪ್ರಸಿದ್ದ ದೇವಾಲಯವಿದೆ. ಈ ದೇವಾಲಯದ ಮೇಲ್ಚಾವಣಿಯ ತುಂಬೆಲ್ಲಾ ಭಿತ್ತಿಚಿತ್ರಗಳನ್ನು ರಚಿಸಲಾಗಿವೆ.

ಪ್ರಾರಂಭದಲ್ಲಿ ಈ ತೇರುಮಲ್ಲೇಶ್ವರ ದೇವಸ್ಥಾನಕ್ಕೆ ಮಲ್ಲೇಶ್ವರ ದೇವಾಸ್ಥಾನವೆಂದು ಕರೆದಿದ್ದು ಇದನ್ನು ಕ್ರಿ.ಶ. ೧೮೮೬ರಲ್ಲಿ ರಾಜವೀರ ಕೆಂಚಪ್ಪ ನಾಯಕರ ಆಳ್ವಿಕೆಯಲ್ಲಿ ಈ ದೇವಾಲಯದ ಜಿರ್ಣೋದ್ಧಾರ (ನಿರ್ಮಾಣ)ವಾಗಿದೆ. ಎಂದು ಪೂರ್ವಿಕರಿಂದ ತಿಳಿದುಬಂದಿದೆ. ಎಗಚಿ ಎಂಬ ಊರಿನಿಂದ ಮೂರು ಕಲ್ಲಿನ ತೇರುಗಳು ಕೊಚ್ಚಿ ಬಂದವೆಂದು ಮತ್ತು ಅವುಗಳನ್ನು ಆಗಿನ ಆಡಳಿತ ವರ್ಗದವರು ಅವುಗಳನ್ನು ಮಲ್ಲೇಶ್ವರ ದೇವಾಲಯಕ್ಕೆ ತಂದು ನಿಲ್ಲಿಸಿದ್ದರಿಂದ ಈ ದೇವಾಲಯಕ್ಕೆ ತೇರು ಮಲ್ಲೇಶ್ವರ ದೇವಾಲಯವೆಂದು ಹೆಸರು ಬಂದಿತೆಂದು ಹಿರಿಯರ ಮಾತುಗಳು.

ಈ ತೇರುಮಲ್ಲೇಶ್ವರ ದೇವಾಲಯದ ವಿಸ್ತಿರ್ಣವು ಸುಮಾರು ೩ ಎಕರೆ ಇದ್ದು ಈ ಐತಿಹಾಸಿಕ ದೇವಾಲಯದ ಮುಖ ಜಮಂಟಪದ ಮುಚ್ಚಿಗೆಯಲ್ಲಿ ವಿವಿಧ ವರ್ಣಗಳನ್ನು ಕಥಾ ಭಾಗಗಳನ್ನಾಧರಿಸಿ ಭಿತ್ತಿ ಚಿತ್ರಗಳನ್ನು ರಚನೆ ಮಾಡಲಾಗಿದೆ.[೧೮] ಇವುಗಳು ಸಹ ಈ ಚಿತ್ರಗಳು ಸಹ ಸಿಬಿಯ ಚಿತ್ರಗಳ ಕಾಲದವುಗಳೆಂದೇ ತಿಳಿದುಬಂದಿದೆ. ಈ ಭಿತ್ತಿ ಚಿತ್ರಗಳು ನಶಿಸುತ್ತಿರುವ ಸಂಧರ್ಭದಲ್ಲಿದ್ದು ಸುಮಾರು ಹತ್ತರಿಂದ ಹದಿನೈದು ವರ್ಷಗಳ ಹಿಂದೆ ಚಿತ್ರ ಕಲಾ ಅಕಾಡೆಮಿಯವರು ಈ ಭಿತ್ತಿ ಚಿತ್ರಗಳನ್ನು ಮತ್ತೊಮ್ಮೆ ರೀ ಪೇಟಿಂಗ್ ಮಾಡಿಸಿದರು. ಆದರೂ ಸಹ ಈ ಭಿತ್ತಿಗಳು ಮಂಟಪದ ಮೇಲೆ ಶಿಲ್ಪ ಕೆತ್ತನೆ ಮತ್ತು ಗೋಪುರ ಕಟ್ಟುವ ವೇಳೆಯಲ್ಲಿ ಹರಿದ ನೀರಿನಿಂದ ಅಲ್ಲಿನ ಒತ್ತಡದಿಂದಾಗಿ ಇಂದು ನಶಿಸಿ ಹೋಗುತ್ತಿವೆ. ಈ ನಶಿಸುತ್ತಿರುವ ಭಿತ್ತಿ ಚಿತ್ರಗಳ ಸಂರಕ್ಷಣೆ ಅಗತ್ಯವೆನಿಸಿದೆ. ಚಿತ್ರಪಟ್ಟಿಕೆಯಲ್ಲಿ ಕಂಡುಬರುವಂತಹ ವಿಶ್ವಾಮಿತ್ರನ ತಪಸ್ಸನ್ನು ಭಂಗ ಪಡಿಸಿದ ಮೇನಕೆಯ ದೃಶ್ಯವೆಂದೆನಿಸದಿರದು. ಈ ದೃಶ್ಯದಲ್ಲಿ ಮೇನಕೆಯು ನಗ್ನ ರೂಪದಲ್ಲಿದ್ದು ವಿಶ್ವಾಮಿತ್ರನ ಮುಖದ ಗಡ್ಡ ಮೀಸೆ ಮತ್ತು ತಲೆಯ ಮೇಲೆ ಕೀರಿಟದಂತೆ ಎತ್ತಿ ಕಟ್ಟಿರುವ ಕೂದಲುಗಳನ್ನು ಕಲಾಕಾರನು ರಮ್ಯವಾಗಿ ಚಿತ್ರಿಸಿದ್ದಾನೆ. ಎಡಗಡೆ ಯವುದೋ ಒಬ್ಬ ರಾಜನು ಬಂದು ಮಗುವನ್ನೆತ್ತಿಕೊಂಡಂತೆ ಅಥವಾ ಕೈ ಮುಗಿದು ನಿಂತಿರುವಂತೆ ಕಂಡು ಬರುತ್ತದೆ. ಈ ದೃಶ್ಯ ಸುಂದರ ಚಿತ್ರದ ಹಿಂಭಾಗದ ಹಿನ್ನೆಲೆಯಲ್ಲಿರುವ ಕಾಡಿನ ದೃಶ್ಯವು ಅತ್ಯಂತ ರಮ್ಯವಾಗಿದೆ.[೧೯] ಅದರಲ್ಲಿರುವ ಕರಡಿ, ಜಿಂಕೆ, ನರಿ, ಚಿಗರಿ ಮುಂತಾದ ಪ್ರಾಣಿಗಳನ್ನು ಕಲಾಕಾರನು ನೈಜವಾಗಿಯೇ ಚಿತ್ರಿಸಿದ್ದಾನೆ. ಇದೇ ಚಿತ್ರದ ಕೆಳ ಪಟ್ಟಿಯಲ್ಲಿರುವ ಇನ್ನೊಂದು ಕಾಡಿನ ದೃಶ್ಯದಲ್ಲಿ ಒಂದೆಡೆ ಋಷಿ ಮುನಿಗೆ ಅಗ್ನಿ ಹೋಮವನ್ನು ಮಾಡುತ್ತಿದ್ದು ಅವನು ಗಡ್ಡ ದಾರಿಯಾಗಿದ್ದು ಅವನೆದುರಿಗೆ ಒಬ್ಬ ಮನುಷ್ಯನು ಅಥವಾ ರಾಜನು ಕುಳಿತಿರುವುದನ್ನು

ಗಮನಿಸಿದಾಗ ಅವನ ವೇಷ ಭೂಷಣಗಳಿಂದಾಗಿ ಅವನು ರಾಜನೇ ಇರಬೇಕೆಂದು ಊಹಿಸಲಾಗಿದೆ. ಕೆಳಗೆ ಒಂದೆಡೆಯಲ್ಲಿ ಒಬ್ಬ ಮನುಷ್ಯನು ಮರ ಕಡಿಯುತ್ತಿರುವುದನ್ನು ಕಾಣಬಹುದು. ಅಂತೆಯೇ ಕಾಡಿನಲ್ಲಿರುವ ಪ್ರಾಣಿಗಳನ್ನು ಗಮನಿಸಿದಾಗ ಒಂದೆಡೆ ಆನೆಗಳು ಘೀಳಿಡುತ್ತಿದ್ದು ಮತ್ತೊಂದೆಡೆ ಮೊಲಗಳು ಆಟ ಆಡುತ್ತಿರುವುದು, ಚಿಗರೆ ಮತ್ತು ಜಿಂಕೆಗಳು ವಿಶ್ರಮಿಸುತ್ತಿರುವುದು ಹಾಗೆ ಸಿಂಹವೊಂದು ನಡೆಯುತ್ತಿರುವುದು ಮತ್ತು ಹಸು ಗೂಳಿಗಳು ಎರಡು ರತಿ ಕ್ರೀಡೆಯಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಇವೆಲ್ಲವುಗಳನ್ನು ಗಮನಿಸಿದಾಗ ಅಂದಿನ ಕಲಾಕಾರನ ಪ್ರಾಣಿಗಳ ಬಗೆಗೆ ಬಹು ಅಧ್ಯಯನ ನಡೆಸಿರುವನೆಂದು ತಿಳಿದು ಬರುತ್ತದೆ. ಕಾಡಿನಲ್ಲಿರುವ ಮರಗಿಡಗಳ ಚಿತ್ರಣವಂತೂ ಬಹು ಸುಗಮವಾಗಿ ಮೂಡಿ ಬಂದಿದೆ.

ಪಕ್ಕದ ಪಟ್ಟಿಕೆಯಲ್ಲಿ ಒಂದು ಯುದ್ಧಕ್ಕೆ ಹೊರಟಿರುವ ಸೈನಿಕರುಗಳಂತೆ ಕಂಡುಬರುತ್ತದೆ. ಮುಂದೆ ಆನೆ ಮತ್ತು ಒಂಟೆ ಮೇಲೆ ಸೇನಾಧಿಕಾರಿಗಳು ಕುಳಿತು ಹೊರಟಿರುವ ಅವರನ್ನು ಹಿಂಬಾಲಿಸಿ ಕಾಲಾಳುಗಳು ಅಥವಾ ಪಾದಾಚಾರಿಗಳಿಂದ ಸೈನಿಕರುಗಳು ಕೈಯಲ್ಲಿ ಶಸ್ತ್ರಾಸ್ತ್ರಗಳು ಹಿಡಿದು ಅವರೊಂದಿಗೆ ನಡೆದಿದ್ದಾರೆ. ಕೊನೆಯಲ್ಲಿ ಸ್ತ್ರೀಯೊಬ್ಬಳು ಸೀರೆಯನ್ನುಟ್ಟು ಅವರುಗಳ ಹಿಂದೆ ನಡೆದಿದ್ದಾರೆ. ಅವರು ತೊಟ್ಟಿರುವ ವಸ್ತ್ರಗಳು, ತಲೆಗೆ ಹಾಕಿರುವ ಅಥವಾ ಕಟ್ಟಿರುವ ರುಮಾಲುಗಳು ಉದ್ದ ತೋಳಿನ ಬಟ್ಟೆಗಳು ಇವೆಲ್ಲವನ್ನು ಮತ್ತು ಕೆಲವರ ಮುಖಗಳಲ್ಲಿ ಗಡ್ಡ ಮತ್ತು ಮೀಸೆಗಳನ್ನು ಸಹ ಕಲಾಕಾರನು ನೈಪುಣ್ಯತೆಯಿಂದ ಚಿತ್ರಿಸಿದ್ದಾನೆ. ಇನ್ನೊಂದು ದೃಶ್ಯದಲ್ಲಿ ಬೇಡರ ಕಣ್ಣಪ್ಪನ ದೃಶ್ಯವೆಂದೆನಿಸದಿರದು. ಅಂತೆಯೇ ಶಿವನ ಕಣ್ಣಿನಲ್ಲಿ ರಕ್ತ ಬಂದಾಗ ಅವನ ಕಣ್ಣಿಗೆನೂ ಆಗಿರುವುದೆಂದು ತಿಳಿದು ಬೇಡನು ತನ್ನ ಕಣ್ಣನ್ನೇ ತೆಗೆದು ಶಿವಲಿಂಗಕ್ಕೆ ಹಾಕುವ ಸಂದರ್ಭದಲ್ಲಿ ತನ್ನ ಕಾಲುಗಳಲ್ಲಿ ಶಿವನ ಕಣ್ಣಿನ ಗುರುತನ್ನು ಹಿಡಿದು ತನ್ನ ಕಣ್ಣುಗಳನ್ನು ಬಾಣದಿಂದ ಕಿತ್ತು ತೆಗೆದು ಶಿವನಿಗೆ ಅರ್ಪಿಸುವ ಒಂದು ದೃಶ್ಯವು ಇಲ್ಲಿ ಕಲಾಕಾರನ ಕೈಚಳಕದಿಂದ ಮೂಡಿ ಬಂದಿದೆ. ಅವನ ಹಿಂದೂ ಮುಂದು ಈರ್ವರು ವ್ಯಕ್ತಿಗಳನ್ನು ಇಲ್ಲಿ ಗಮನಿಸಬಹುದು. ಚಿತ್ರವನ್ನು ಒಳಪಾರ್ಶ್ವದಲ್ಲಿ ತೊಡೆಯ ಮೇಲೆ ಕೂಡಿಸಿಕೊಂಡು ನಂದಿಯ ಮೇಲೆ ಪ್ರಯಾಣಿಸುವುದನ್ನು ಕಲಾಕಾರನು ಚಿತ್ರಿಸಿದ್ದಾನೆ.

ಅಂತೆ ಈ ನಂದೀಶ್ವರನ ಸುತ್ತಲೂ ಅಲ್ಲಿ ಸೈನಿಕರುಗಳು ಮತ್ತು ಜನ ಸಾಮಾನ್ಯರನ್ನು ಚಿತ್ರಿಸಲಾಗಿದೆ. ಇನ್ನೊಂದು ಚಿತ್ರದಲ್ಲಿ ರಾಮಲಕ್ಷ್ಮಣರ ಒಂದು ಕಲಾಕೃತಿಯನ್ನು ಚಿತ್ರಿಸಿದ್ದು ಈ ಚಿತ್ರವು ಸರಿಯಾಗಿ ಗುರುತಿಸಲು ಸಹ ಆಗುತ್ತಿಲ್ಲ. ಅಂತೆಯೇ ಅದು ಅಸ್ಪಷ್ಟವಾಗಿ ಕಾಣಿಸುತ್ತದೆ. ಅನೇಕ ಚಿತ್ರಗಳು ನಶಿಸುವ ಹಂತವನ್ನು ತಲುಪಿವೆ.

ಭಿತ್ತಿ ಚಿತ್ರಗಳ ವಿವರಣೆ:

ಹೊರನೋಟಕ್ಕೆ ದೇವಾಲಯವು ಸಾಧಾರಣವಾಗಿ ಕಂಡು ಬಂದರು ಸಹ ಒಳನವರಂಗವನ್ನು ಸಮೀಪಿಸುತ್ತಿದ್ದಂತೆ ಕಲಾ ಲೋಕದ ಇನ್ನೊಂದು ಮುಖವು ದೇವಾಲಯದ ಮುಚ್ಚುಗೆಯಲ್ಲಿ ಕಂಡು ಬರುವ ಚಿತ್ರಗಳು ಆ ಕಾಲದ ಸಂಸ್ಕೃತಿಯನ್ನು ವ್ಯಕ್ತಪಡಿಸುವಲ್ಲಿ ಈ ಭಿತ್ತಿ ಚಿತ್ರಗಳು ಪೂರಕ ಆಕಾರಗಳಾಗಿವೆ. ಇಲ್ಲಿ ಕಂಡುಬರುವ ಚಿತ್ರಗಳ ವಸ್ತು ವಿಷಯಗಳನ್ನು ಐದು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಧಾರ್ಮಿಕ, ಸಾಮಾಜಿಕ, ನೈಸರ್ಗಿಕ, ವ್ಯಕ್ತಿಗತ ಹಾಗೂ ಲೈಂಗಿಕ ಈಗೆ ಈ ಚಿತ್ರಗಳು ವಿಜಯನಗರ, ಸಿಬಿ ಶ್ರೀರಂಗಪಟ್ಟಣದಲ್ಲಿನ ಚಿತ್ರಗಳಿಗೆ ಸಮಾಂತರವಾಗಿ ರಚನೆಗೊಂಡಿವೆ.[೨೧]

ಬ್ರಹ್ಮ ವಿಷ್ಣು ಮಹೇಶ್ವರ:

ಪೌರಾಣಿಕ ಸನ್ನಿವೇಶಗಳು ಹಾಗೂ ಮಹಾಭಾರತ, ರಾಮಾಯಣ ಪುರಾಣ, ಭಾಗವತಗಳನ್ನಾಧರಿಸಿದ ಆನೇಕಾನೇಕ ದೇವಾಧಿದೇವತೆಗಳು ಮತ್ತು ಅವರಿಗೆ ಸಂಬಂಧಿಸಿದ ಘಟನೆಗಳನ್ನು ಚಿತ್ರಿಸಲಾಗಿದೆ. ಅಂದಿನ ಕಲಾಕಾರರು ದೇವಿ ಪ್ರೇರಣೆ ಪಡೆದು ಸೇವಾ ಭಾವನೆಯಿಂದ ರಚಿಸಿರುವುದರಿಂದ ಇಂದು ಇಲ್ಲಿಗೆ ಬರುವ ಭಾವಕರಿಗೆ ಭಕ್ತಿಯ ವಾತಾವಣದಲ್ಲಿ ತಲ್ಲೀನರಾಗಲು ಸಹಾಯವಾಗುವಂತೆ ನವರಂಗದ ಕೆಲವು ಭಾಗವನ್ನು ಒಂದೊಂದು ಪೌರಾಣಿಕ ಘಟನೆಗೆ ಮೀಸಲಿಡಲಾಗಿದೆ. ಮಧ್ಯಭಾಗದಲ್ಲಿರುವ ಬ್ರಹ್ಮ, ವಿಷ್ಣು, ಮಹೇಶ್ವರ ಚಿತ್ರವು ವಿಶೇಷವಾಗಿದ್ದು ಅವರವರ ವಾಹನಗಳು, ಹಾಗೂ ಭಕ್ತಾಧಿಗಳನ್ನು ಸಹ ಚಿತ್ರಿಸಲಾಗಿದೆ. ವಿಶೇಷವಾದ ಕೆಂಪು, ಕಂದು, ಹಳದಿ, ಹಾಗೂ ಬಾಹ್ಯರೇಖೆಯು ಕಪ್ಪು ವರ್ಣಗಳಿಂದ ರಚಿತವಾಗಿದೆ. ಹಿನ್ನೆಲೆಯಲ್ಲಿ ವಿಶೇಷವಾದ ನಕ್ಷೆಗಳು ವಿವಿಧ ರೇಖಾ ವಿನ್ಯಾಸವನ್ನು ಕಂಡುಬರುತ್ತವೆ. ಅಂಗ ರಚನೆಯು ವಿಶೇಷವಾಗಿದ್ದು ಚಿತ್ರಗಳ ಸಂಯೋಜನೆ ಹಾಗೂ ಮುಖ್ಯ ವಸ್ತು ವಿಷಯ ಕುರಿತು ವಿಶೇಷ ಹೊತ್ತು ನೀಡಲಾಗಿದೆ. ಚಿತ್ರದ ಕೆಲವು ಭಾಗಗಳಲ್ಲಿ ದಪ್ಪನೆಯ ಕಪ್ಪು ಬಾಹ್ಯ ರೇಖೆಯನ್ನು ಎಳೆದಿದ್ದು ಕೆಲವು ಕಡೆಗಳಲ್ಲಿ ಅತಿ ಸಣ್ಣ ರೇಖೆಯನ್ನು ಎಳೆಯಲಾಗಿದೆ. ವಿಶೇಷವಾಗಿ ಕಲಾಕಾರನು ಕೌಶಲ್ಯವನ್ನು ಗಮನಿಸಿದರೆ ಹಂಪಿಯ ವಿರುಪಾಕ್ಷ ಹಾಗೂ ಸಿಬಿಯ ಭಿತ್ತಿ ಚಿತ್ರಗಳು ನೆನಪಿಗೆ ಬರುವಂತೆ ರಚಿಸಿದ್ದಾನೆ.

ಶಿವಪಾರ್ವತಿ ಚಿತ್ರ:

ಚಿತ್ರ ಸಂಖ್ಯೆ ೫ರಲ್ಲಿ ವಿಶೇಷವಾಗಿ ಸಂಪೂರ್ಣ ಪಟ್ಟಿಕೆಯನ್ನು ಈ ಚಿತ್ರಕ್ಕೆ ಮೀಸಲಿಟ್ಟು ರಚಿಸಲಾಗಿದೆ. ತನ್ನ ತೊಡೆಯ ಮೇಲೆ ಪಾರ್ವತಿಯನ್ನು ಕುಳಿಸಿಕೊಂಡು ಕುತಿರುವ ಶಿವ ಪಾರ್ವತಿಯ ಚಿತ್ರವು ಭಕ್ತಿ ಪ್ರಧಾನವಾಗಿದ್ದು ಕೆಂಪು, ಹಳದಿ, ನೀಲಿ ಮತ್ತು ಕಪ್ಪು ವರ್ಣಗಳಿಂದ ರಚನೆಗೊಂಡಿದೆ. ಪಕ್ಕದಲ್ಲಿಯೇ ಗರುಡ ಹಾಗೂ ಇನ್ನೊಂದು ಭಾಗವು

ಸಂಪೂರ್ಣ ನಶಿಸಿರುವುದರಿಂದ ಆ ಚಿತ್ರವನ್ನು ಯಾವುದೆಂದು ಗುರುತಿಸಲು ಸಾಧ್ಯವಾಗದಾಗಿದೆ. ಹಿಂಬದಿಯಲ್ಲಿ ಕೈಲಾಸ ಪರ್ವತ ಅಥವಾ ದೇವಾಲಯದ ಗೋಪುರದಂತೆ ಕಂಡು ಬರುವ ಹಳದಿ ವರ್ಣದ ಚಿತ್ರವು ವಿಶೇಷ ಅರ್ಥಗಳನ್ನು ನೀಡುತ್ತದೆ. ಹಾಗೆಯೇ ಸುತ್ತಲು ಚೌಕಾಕಾರದ ಕಟ್ಟಿನಿಂದ ಕೂಡಿದ್ದ ಇದರ ಮೇಲ್ಭಾಗದಲ್ಲಿ ಅನೇಕ ಹೂಬಳ್ಳಿಯ ಚಿತ್ರಗಳನ್ನು ರಚಿಸಲಾಗಿದೆ ಹಾಗೂ ಕೆಳಭಾಗದಲ್ಲಿ ಶಿವನನ್ನು ನೋಡುತ್ತಿರುವ ನಂದಿಯ ಚಿತ್ರವು ವಿಶೇಷ ಅಲಂಕಾರಗಳಿಂದ ರಚಿತವಾಗಿದೆ.

ವಿಶ್ವಾಮಿತ್ರ ಮತ್ತು ಮೇನಕೆ:

ಚಿತ್ರದಲ್ಲಿ ಸಂಖ್ಯೆ ೬ರಲ್ಲಿ ಆಯಾತಾಕಾರದ ದೊಡ್ಡ ಪಟ್ಟಿಕೆಯಲ್ಲಿ ವಿಶ್ವಮಿತ್ರ ಮತ್ತು ಮೇನಕೆಯ ಚಿತ್ರವನ್ನು ಗಮನಿಸಿಸಬಹುದಾಗಿದೆ. ಈ ಚಿತ್ರವು ವಿಶೇಷವಾಗಿ ಮುಖವು ನಗ್ನ ಸ್ತ್ರೀಯಾಗಿ ಕಾಮೋದ್ದಿಪನ ಭಂಗಿಯಲ್ಲಿ ನಿಂತಿರುವ ಮೇನಕೆಯನ್ನು ನೋಡುತ್ತಿರುವಂತೆ ಚಿತ್ರಿಸಲಾಗಿದೆ. ಅವನ ಎಡಗೈಯಲ್ಲಿ ಮಂತ್ರ ಜಪಮಣಿ ಹಿಡಿದಿದ್ದರು ಬಲಗೈಯು ಅವಳನ್ನು ಆಲಂಗಿಸುವ ಹಾಗೆ ಕಂಡುಬರುತ್ತದೆ.

ಹಾಗೂ ವಿಶೇಷವಾಗಿ ಮೈತುಂಬಾ ವಿಭೂತಿ ಬಳಿದಿದ್ದು ಅವನ ಮುಂಬದಿಯಲ್ಲಿಯೇ ಹುಲಿಯೊಂದು ಅವನನ್ನು ನೋಡುವಂತಿದೆ. ಮೇನಕೆಯ ಅಂಗ ರಚನೆಯು ಪರಿಪೂರ್ಣವಾಗಿಲ್ಲದಿದ್ದರು ಸಹ ಭಾವಪೂರ್ಣವಾಗಿದೆ. ಹಿಂಭಾಗದಲ್ಲಿ ನೈಸರ್ಗಿಕ ಗಿಡ ಮರ ಪ್ರಾಣಿ ಪಕ್ಷಿ ಸಂಕುಲ ಕಾಣಬಹುದಾಗಿದ್ದು. ಕೆಂಪು, ಹಳದಿ, ಬಿಳಿ, ಕಪ್ಪು ಮತ್ತು ಕಂದು ಬಣ್ಣಗಳಿಂದ ವಿಶೇಷವಾಗಿ ರಚಿತವಾಗಿದೆ.

ಯಮನ ಚಿತ್ರ:

ವಿಶೇಷವಾದ ತ್ರಿಕೋನಾಕಾರದ ಪಟ್ಟಿಕೆಯಲ್ಲಿ ಈ ಯಮನ ಚಿತ್ರವನ್ನು ರಚಿಸಲಾಗಿದ್ದು ಒಬ್ಬ ಮನುಷ್ಯನ ಪ್ರಾಣಕ್ಕಾಗಿಯೇ ಯಮಲೋಕದಿಂದ ಬಂದಿರುವಂತೆ ಚಿತ್ರಿಸಲಾಗಿದೆ. ಅವನ ವಾಹನವಾದ ಕೋಣದ ಮೇಲೆ ಕುಳಿತು ಎಡಗೈಲಿ ಗದೆ ಹಿಡಿದು ಕುಳಿತಿರುವಂತೆ ಚಿತ್ರಿಸಲಾಗಿದೆ. ಯಮನ ಎಲ್ಲಾ ಅಂಗ ರಚನೆಯನ್ನು ವಿಶೇಷವಾಗಿ ಕಲಾಕಾರನು ರಚಿಸಿದ್ದು. ಹಿಂಭಾಗದಲ್ಲಿ ಯಾವುದೇ ದೇವತೆಯ ಚಿತ್ರವನ್ನು ಸಹ ಕಾಣಬಹುದಾಗಿದೆ. ಹಾಗೆಯೇ ನೈಸರ್ಗಿಕ ಚಿತ್ರಗಳು, ನಕ್ಷೆಗಳು, ಸಹ ಹಳದಿ, ಬಿಳಿ, ನೀಲಿ ವರ್ಣದಿಂದ ಕೂಡಿದ್ದು ಕೆಂಪುವರ್ಣವನ್ನು ಅಧಿಕವಾಗಿ ಬಳಸಲಾಗಿದೆ.

ವಿಷ್ಣುವಿನ ಅವತಾರ :

ಚಿತ್ರ ೯ರಲ್ಲಿ ಈ ಚಿತ್ರದಲ್ಲಿ ಕಂಡುಬರುವಂತೆ ಸನ್ನಿವೇಶವು ಸಿಂಹದೇಹ ಹಾಗೂ ಆನೆಯ ತಲೆಯಿಂದ ಕೂಡಿದ್ದು ವಿಷ್ಣುವನ್ನು ಮೇಲೆ ಕೂರಿಸಲಾಗಿದೆ. ಹಾಗೆಯೇ ಮುಂಭಾಗದಲ್ಲಿ

ಯಾರೂ ಸೈನಿಕನಂತೆ ಕತ್ತಿ ಹಿಡಿದು ನಿಂತಿರುವ ವ್ಯಕ್ತಿಯನ್ನು ಸಹ ಕಾಣಬಹುದಾಗಿದೆ. ಇದು ಸಹ ತ್ರಿಕೋನಾಕಾರದ ಪಟ್ಟಿಯಲ್ಲಿ ಚಿತ್ರಿಸಿದ್ದು ಸುತ್ತಲೂ ನಕ್ಷೆ ಚಿತ್ರವನ್ನು ರಚಿಸಲಾಗಿದೆ. ಕೆಂಪು, ಹಳದಿ, ನೀಲಿ, ಬಿಳಿ ಮತ್ತು ಕಪ್ಪು ವರ್ಣದಿಂದ ಕೂಡಿದೆ.

ಯುದ್ಧ ಸನ್ನಿವೇಶ:

೧೨, ೧೩, ೧೪, ೧೫, ೧೬, ೧೭ನೇ ಚಿತ್ರಗಳನ್ನು ವಿಶೇಷವಾಗಿ ಯುದ್ಧ ಸನ್ನಿವೇಶಗಳನ್ನು ತ್ರಿಕೋನಾಕಾರದ ಪಟ್ಟಿಕೆಗಳಲ್ಲಿ ರಚಿಸಲಾಗಿದೆ. ಈ ಎಲ್ಲಾ ಚಿತ್ರಗಳನ್ನು ಗಮನಿಸಿದಾಗ ಅಭಿಮನ್ಯುವಿನ ಯುದ್ದದ ಚಿತ್ರವಿರಬೇಕೆನಿಸಿದರೆ ತಪ್ಪಿಲ್ಲಾ. ಕುದುರೆ ಏರಿರುವ ಸವಾರನು ವಿಶೇಷವಾದ ರಾಜದಿರುಸುವಿನಲ್ಲಿ ಕುತಿದ್ದು ಕೈಯಲ್ಲಿ ಖಡ್ಗ ಮತ್ತು ಗುರಾಣಿ ಹಿಡಿದು ಯುದ್ದಕ್ಕೆ ನಿಂತಿರುವಂತೆ ಚಿತ್ರಿಸಲಾಗಿದೆ. ಹಿಂಬದಿಯನ್ನು ತೋರಿಸುವುದಕ್ಕಾಗಿಯೇ ಚಿಕ್ಕ ಚಿಕ್ಕ ಸೈನಿಕರು ಹಾಗೇ ಯಾವುದೇ ರಾಣಿಯ ಚಿತ್ರವನ್ನು ಸಹ ಕಾಣಬಹುದಾಗಿದೆ. ಇಲ್ಲಿಯೂ ಸಹ ಅದೇ ವರ್ಣಗಳನ್ನು ವಿಶೇಷವಾಗಿ ಪ್ರಯೋಗಿಸಲಾಗಿದೆ ಅಲ್ಲದೆ ಇದೇ ಕೆಲವು ಯುದ್ದ ಸನ್ನಿವೇಶಗಳನ್ನು ೧೬, ೧೭ನೇ ಚಿತ್ರಗಳಲ್ಲಿ ಕಾಣಬಹುದಾಗಿದೆ. ಕೆಲವು ಚಿತ್ರವನ್ನು ಗಮನಿಸಿದಾಗ ಟಿಪ್ಪುವಿನ ರೀತಿಯಲ್ಲಿ ಕಂಡುಬರುತ್ತದೆ.

ಮೆರವಣಿಗೆ ದೃಶ್ಯ:

ಉದ್ದನೆಯ ಪಟ್ಟಿಕೆಯಲ್ಲಿ ರಚಿತಗೊಂಡಿರುವ ಮೆರವಣಿಗೆಯ ಚಿತ್ರವು ಆನೆಗಳು, ಕುದುರೆ, ವಾದ್ಯಗಾರರು ಹಾಗೂ ಹಿಂಬದಿಯಲ್ಲಿ ಟಿಪ್ಪುವು ಕುದುರೆ ಆರಿಸಿಕೊಂಡು ಬರುವಂತೆ ಚಿತ್ರಿಸಿದ್ದಾರೆ.[೨೨] ವಿಶೇಷ ಅಲಂಕಾರಗಳಿಂದ ಕೂಡಿದ ಈ ಚಿತ್ರವು ವಿವಿಧ ವರ್ಣಗಳಿಂದ ರಚಿತವಾಗಿದೆ.

ಹಾಗೂ ಹಿಂಭಾಗದಲ್ಲಿ ಹೂವಿನ ತೋರಣದಂತೆ ಚಿತ್ರಿಸಲಾಗಿದ್ದು ಸಂಪೂರ್ಣ ನಶಿಸುವ ಹಂತದಲ್ಲಿದೆ. ಈ ಚಿತ್ರವನ್ನು ೨೦ ರಲ್ಲಿ ಗಮನಿಸಬಹುದಾಗಿದೆ. ೪, ೬, ೭, ೮ನೇ ಚಿತ್ರಗಳಲ್ಲಿ ವಿಶೇಷವಾಗಿ ನೈಸರ್ಗಿಕ ವಸ್ತು ವಿಷಯಗಳಿಂದ ಕೂಡಿದೆ.[೨೩] ಅಲ್ಲದೆ ಅಂದಿನ ಸಾಮಾಂತರ ಅನೇಕ ಚಿತ್ರಗಳು ಹಾಗೂ ನೈಸರ್ಗಿಕ ಚಿತ್ರಗಳಲ್ಲಿ ಅಲ್ಲಲ್ಲಿ ಲೈಂಗಿಕ ಚಿತ್ರಗಳನ್ನು ಸಹ ಕಾಣಬಹುದಾಗಿದೆ. ಈ ಎಲ್ಲಾ ಚಿತ್ರಗಳು ನಶಿಸುವ ಹಂತದಲ್ಲಿದ್ದು ಇವುಗಳ ರಕ್ಷಣೆ ಅಗತ್ಯವೆನಿಸಿದೆ.

ಅಡಿಟಿಪ್ಪಣಿಗಳು

೧. ಅನಂತರಂಗಾಚಾರ್ ಎನ್, ಭಾರತೀಯ ಶಿಲ್ಪ ಶಾಸ್ತ್ರದ ಸಂಕ್ಷಿಪ್ತ ಪರಿಚಯ, ೧೯೮೪, ಪು.೩೦೮

೨. ದೇವರಕೊಂಡಾರೆಡ್ಡಿ (ಕನ್ನಡ ಅನುವಾದ) ಭಾರತೀಯ ವಾಸ್ತುವಿದ್ಯೆ, ಪು.೧

೩. ಅದೇ, ಪು.೩.೫

೪. ಅದೇ, ಪು.೬

೫. ಅದೇ, ಪು.೭

೬. ಎಫಿಗ್ರಾಫಿಯ ಕರ್ನಾಟಿಕ ಸಂಪುಟ.೧೧ (ಹಳೆಯ) ಸಂ.೮೭, ೧೯೦೩ ಹಿರಿಯೂರು, ಪು.೩೦೫

೭. ಅಪರ್ಣಾ ಕು.ಸ., ದೇವಾಲಯ ವಾಸ್ತುಶಿಲ್ಪ ಪರಿಚಯ, ೧೯೯೯, ಪು.೧೭

೮. ಜ್ಞಾನಾನಂದ ಜಿ, ೨೦೦೧, ಶಿಲ್ಪದರ್ಶನ, ಸಂ.೧, ಪು.೩

೯. ರಾಮಚಂದ್ರರಾವ್ ಸಾ. ಕೃ., ೧೯೯೪ ಸಂಪ್ರದಾಯ ಶಿಲ್ಪಕಲೆ, ಶಿಲ್ಪಕಲಾ ಪ್ರಪಂಚ, ತಿಪ್ಪೆಸ್ವಾಮಿ ಸಿ.ಆರ್ (ಪ್ರ.ಸಂ) ಪು.೩೫

೧೦. ಮರಿಶಾಮಾಚಾರ್ ಎನ್, ೧೯೯೪, ಶಿಲ್ಪ ಮತ್ತು ವಿಶ್ವಕರ್ಮ, ಶಿಲ್ಪಕಲಾ ಪ್ರಪಂಚ, ತಿಪ್ಪೇಸ್ವಾಮಿ ಪಿ.ಆರ್ (ಪ್ರ.ಸಂ) ಪು.೧೯

೧೧. ತಿಪ್ಪೇರುದ್ರಸ್ವಾಮಿ ಎಚ್., ೨೦೦೭, ಕರ್ನಾಟಕ ಸಮೀಕ್ಷೆ, ಪು. ೫೨೩

೧೨. ಜ್ಞಾನಾನಂದ ಜಿ., ೨೦೦೧ ಪೂರ್ವೋಕ್ತ, ಪು.೩

೧೩. ಅದೇ ಪು.೪

೧೪. ದೇವರಕೊಂಡಾರೆಡ್ಡಿ, ೧೯೯೪, ಗಂಗರ ಶಿಲ್ಪಕಲೆ, ಶಿಲ್ಪಕಲಾ ಪ್ರಪಂಚ, ತಿಪ್ಪೆಸ್ವಾಮಿ ಪಿ ಆರ್ (ಪ್ರ.ಸಂ.) ಪು. ೧೭೧

೧೫. ವಿನೋದಾ ಪಾಟೀಲ, ೨೦೦೩, ಶಿಲ್ಪಗಳಲ್ಲಿ ಶಿವಭಕ್ತರು, ಪು.೧

೧೬. ನರಸಿಂಹನ್ ಅ ಲ., ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ೧೯೯೮, ಪು.೧೪೯

೧೭. ಸುಂದರ ಅ, ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಕಲೆ, ೧೯೯೪, ಪು. ೧೫೯

೧೮. ಸುಂದರ ಅ., ವಿಶಿಷ್ಟವರ್ಣ ಚಿತ್ರಗಳ ಆಗರ ಬಾದಾಮಿ, ೧೯೮೩, ಪು. ೩೧

೧೯. ಶ್ರೀಶೈಲ ಆರಾಧ್ಯ, ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸಿಕ ಚಿತ್ರಗಳು ೧೯೯೩, ಪು.೩೯

20. Manual. A, O, P, Agrawal, *Wall Paintings,* 2001, p. 192

21. Veenashekar, *Sibi Mural Painting,* 1999, p. 16

೨೨. ಯೋಗೀಶ್ ಹೆಚ್, ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ (ಅಪ್ರಕಟಿತ ಎಂ.ಫಿಲ್ ಪ್ರಬಂಧ), ಕವಿವಿ, ಹಂಪಿ, ೨೦೦೮, ಪು.೬೨

೨೩. ತಿಪ್ಪೆಸ್ವಾಮಿ ಪಿ ಆರ್., ಕಲಾಕೋಶ, ೧೯೯೪, ಪು.೧೬೭

□□□

ಅಧ್ಯಾಯ : ನಾಲ್ಕು

ಶಾಸನಗಳು ಮತ್ತು ಸ್ಮಾರಕ ಶಿಲ್ಪಗಳು

೪.೧. ಶಾಸನಗಳು

೪.೨. ಸ್ಮಾರಕ ಶಿಲ್ಪಗಳು

೪.೩. ಸ್ಮಾರಕಗಳು

ಅಧ್ಯಾಯ : ನಾಲ್ಕು

ಶಾಸನಗಳು ಮತ್ತು ಸ್ಮಾರಕ ಶಿಲ್ಪಗಳು

೪.೧ ಶಾಸನಗಳು

ಶಾಸನ ಎಂದರೇನು? ಶಾಸನಗಳ ಅರ್ಥ

ಬಹುಕಾಲ ಉಳಿಯುವ ಶಿಲೆ, ಕಲ್ಲು ತಾಮ್ರ, ಬೆಳ್ಳಿ, ಮುಂತಾದ ಲೋಹಗಳ ಮೇಲೆ ಕೊರೆಯಲ್ಪಟ್ಟ, ಬರಹಗಳೆ ಶಾಸನಗಳೆಂದು ಕರೆಯುತ್ತಾರೆ.[೧] 'ಶಾಸನ' ಎಂಬ ಸಂಸ್ಕೃತ ಪದಕ್ಕೆ 'ಆಜ್ಞೆ' (ರಾಜಾಜ್ಞೆ) ಎಂಬುದು ಮೂಲಾರ್ಥ, 'ಶಾಸ್' ಎಂಬ ಧಾತುವಿಗೆ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂಬ ಅರ್ಥಗಳಿವೆ. 'ಶಾಸನ' ಎಂಬುದಕ್ಕೆ ಈಗಲೂ 'ಕಾನೂನು' ಎಂಬ ಅರ್ಥ ಪ್ರಚಲಿತವಾಗಿರುವುದನ್ನು ಗಮನಿಸಬಹುದು.[೨] ಪ್ರಾಚೀನ ಭಾರತದ ಆಡಳಿತ ಪದ್ಧತಿಯ ಬಗ್ಗೆ ತಿಳಿಸುವ ಗ್ರಂಥಗಳಾದ ಶುಕ್ರನೀತಿ ಸಾರ, ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದ ಗ್ರಂಥಗಳು 'ಶಾಸನ' ಎಂಬ ಪದವನ್ನು ರಾಜಾಜ್ಞೆ ಎಂಬ ಅರ್ಥದಲ್ಲಿ ಪ್ರಯೋಗ ಮಾಡಿದೆ.[೩] ಶಾಸನ ಎಂಬುದು ಮೂಲಭೂತವಾಗಿ ದಾನಕ್ಕೆ ಸಂಬಂಧಪಟ್ಟ ರಾಜಾಜ್ಞೆಯಾಗಿತ್ತು. ಶಾಸನಕ್ಕೆ ಸಮಾನಾರ್ಥದಲ್ಲಿ ಬಳಕೆಯಾಗುತ್ತಿರುವ ಇಂಗ್ಲೀಷ್ ಶಬ್ದ ಎಂದರೆ Inscription, ಮುಂದೆ ಅದನ್ನು Inscribe ಎಂದು ಕರೆದರು. Inscribe ಎಂದರೆ ಕೆತ್ತುವುದು ಎಂಬ ಅರ್ಥವಾಗಿದೆ.[೪] ಈ ವ್ಯಾಪಕ ಅರ್ಥದಲ್ಲಿ ಡಿ.ಸಿ. ಸರ್ಕಾರ್‌ರವರು 'ಶಾಸನವೆಂದರೆ ಯಾವುದಾದರೊಂದು ಪದಾರ್ಥದ ಮೇಲೆ ಕೊರೆದ ಯಾವುದೇ ಬರಹವೆಂದು ಅಕ್ಷರಶಃ ಅರ್ಥವಾಗುತ್ತದೆ ಎಂದಿದ್ದಾರೆ.[೫] ಶಾಸನಗಳನ್ನು ಕೇವಲ ಸಂಕುಚಿತ ಅರ್ಥದಲ್ಲಿ ಬಳಕೆ ಮಾಡದೇ ಅದನ್ನು ವಿಶಾಲಾರ್ಥದಲ್ಲಿ ಬಳಕೆ ಮಾಡಿದ್ದಾರೆ, ಶಾಸನವು ಇತಿಹಾಸದ ಆಧಾರಕ್ಕೆ ಮೂಕ ಸಾಕ್ಷಿಯಾಗಿದೆ. ಕೇವಲ ಸಾಹಿತ್ಯ ನಿರ್ಮಾಣ ಮಾತ್ರ ಶಾಸನಗಳ ಉದ್ದೇಶವಾಗಿರದೆ, ದಾನಶಾಸನ, ಪ್ರಶಸ್ತಿ ಶಾಸನ, ವೀರಗಲ್ಲು, ಮಹಾಸತಿಗಲ್ಲು, ರಾಜಾಜ್ಞೆಗಳು ಅಥವಾ ಆಡಳಿತ ವ್ಯವಸ್ಥೆಯ ಹೊರಡಿಸಿರುವ ಆಜ್ಞೆಗಳು, ಮುಂತಾದ ವಿಶಾಲಾರ್ಥದಲ್ಲಿ ಶಾಸನಗಳು ತನ್ನ ಕೊಡುಗೆಯನ್ನು ನೀಡುತ್ತಾ ಬಂದಿವೆ.[೬] ಶಾಸನ ಒಂದು ಐತಿಹಾಸಿಕ ಮತ್ತು ಪಾರಂಪರಿಕ ಮಾಹಿತಿಯನ್ನು ನೀಡುವ ಪ್ರಮುಖ ಆಧಾರವೆಂದೇ ಹೇಳಬಹುದು.

ಶಾಸನ ಉದ್ದೇಶ:

ಶಾಸನಗಳನ್ನು ಉದ್ದೇಶ ದಾನ-ದತ್ತಿಗಳನ್ನು ತಿಳಿಸುವುದು ರಾಜನ ಪ್ರಶಸ್ತಿಯನ್ನು ವರ್ಣಿಸುವುದು ಆಗಿದ್ದರೂ, ಅಂದಿನ ಸಂಸ್ಕೃತಿಯನ್ನು ತಿಳಿದುಕೊಳ್ಳುವುದು ಇದರ ಮುಖ್ಯ ಉದ್ದೇಶ ಶಾಸನಗಳಲ್ಲಿ ಕಾಲನಿರ್ದೇಶನಗಳಿಲ್ಲದಿದ್ದರೂ ಲಿಪಿ ದೃಷ್ಠಿಯಿಂದ ಕಾನನಿರ್ದೇಶನ ಮಾಡುವುದು ಇದರ ಇನ್ನೊಂದು ವಿಶೇಷತೆ. ಈ ಶಾಸನಗಳು ಸಮಕಾಲೀನ ದಾಖಲೆಗಳಾಗಿದ್ದರಿಂದ ಕೆಲವೊಮ್ಮೆ ಸಾಹಿತ್ಯಿಕ ಕೃತಿಗಳಲ್ಲಿ ಸಿಗದಂತಹ ಕೆಲವೊಂದು ಘಟನಾವಳಿಗಳು ಶಾಸನಗಳಿಂದ ದೊರೆಯುತ್ತವೆ. ಬೀದಿಗಳಲ್ಲಿ, ಉದ್ಯಾನವನಗಳಲ್ಲಿ ನಾಲ್ಕು ದಾರಿಗಳು ಕೂಡುವ ಸ್ಥಳದಲ್ಲಿ ಬಹುಕಾಲ ಉಳಿಯುವಂತೆ ಶಾಸನಗಳನ್ನು ನೆಟ್ಟಿರುವುದನ್ನು ಕಾಣುತ್ತೇವೆ. ಶಾಸನ ಅಧ್ಯಯನದಲ್ಲಿ ಗದ್ಯವೆ ಪ್ರಧಾನವಾದರೂ ಭಾಷಾದೃಷ್ಠಿಯಿಂದ ಲಿಪಿ ದೃಷ್ಟಿಯಿಂದ ನೋಡಿದಲ್ಲಿ ಇದರ ಚಾರಿತ್ರಿಕ ಬದಲಾವಣೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

ಹಿರಿಯೂರು ತಾಲೂಕಿನಲ್ಲಿ ೨೦ ಶಾಸನಗಳು ವಿವಿಧ ಕಡೆಗಳಲ್ಲಿ ಪ್ರಕಟಗೊಂಡಿವೆ. ಹಿರಿಯೂರು ಪಟ್ಟಣಕ್ಕೆ ಸಂಬಂಧಿಸಿದ ಹಾಗೆ ೫ ಶಾಸನಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದ್ದು ಕ್ರಿ.ಶ.೧೦೬೦-೧೧೫೦ರ ಹಿರಿಯೂರು – ಮರಡಿಪುರಗಳ ಶಾಸನದಲ್ಲಿ ದೇವರ ದಾಸಿಮಯ್ಯನ (ವಚನಕಾರ) ಉಲ್ಲೇಖವಿರುವುದರಿಂದ ಹಿರಿಯೂರು ಕೇಶವನಾಯ್ಕನ ಸ್ಥಾಪನೆಗೆ ಮೊದಲೇ ಇದ್ದಿತೆಂದು ತಿಳಿಯಬಹುದಾಗಿದೆ. ಇದರಿಂದಾಗಿ ಹಿರಿಯೂರು ಪಟ್ಟಣದಲ್ಲಿ ದೊರೆತಿರುವ ಶಾಸನಗಳ ಪಾಠದ ಸಾರಾಂಶವನ್ನು ವಿವರಿಸಲಾಗುವುದು.

ದಾನ ಶಾಸನಗಳು

ನಮ್ಮ ನಾಡು ದಾನಗಳ ತವರೂರು, ಇಲ್ಲಿಯ ಜನರು ಹಸಿದವರಿಗೆ ಅನ್ನ ನೀಡುವುದು, ಬಾಯಾರಿದವರಿಗೆ ನೀರು ಕೊಡುವುದು, ಒಂದು ಪುಣ್ಯದ ಕೆಲಸವೆಂದು ತಿಳಿದಿದ್ದರು, ಅಂತಹ ಕೆಲಸಗಳಿಂದ ಪುಣ್ಯ ಲಭಿಸುತ್ತದೆ. ಸ್ವರ್ಗ ಪ್ರಾಪ್ತಿಯಾಗುತ್ತದೆ. ಎಂಬ ನಂಬಿಕೆ ನಮ್ಮ ಪೂರ್ವಜರಲ್ಲಿ ಇತ್ತು. ಕಾಲಾನಂತರ ಇಂತಹ ದಾನಗಳು ಅನ್ಯರಿಂದ ಅಪಹರಿಸಲ್ಪಡುತ್ತಿದ್ದುದರಿಂದ ಇದನ್ನು ಗಮನಿಸಿದ ರಾಜರು ಕೊಟ್ಟಂತಹ ದಾನಗಳನ್ನು ಶಾಸನಗಳಲ್ಲಿ ದಾಖಲಿಸಲಾಗುತ್ತಿತ್ತು. ನಂತರ ದಾನ ನೀಡಿದ ಜನರು ತಮ್ಮ ಹೆಸರು ಉಳಿಯಲಿ ಎಂಬ ಕಾರಣದಿಂದ ತಾವುಗಳು ದಾನಶಾಸನಗಳನ್ನು ಹಾಕಿಸಲು ಪ್ರಾರಂಭಿಸಿದರು. ಇದರ ಫಲವಾಗಿ ದಾನಶಾಸನಗಳು ಹೆಚ್ಚು ಹುಟ್ಟಿದವು, ಹಿರಿಯೂರು ಪಟ್ಟಣದಲ್ಲೂ ದಾನಶಾಸನಗಳಿರುವುದನ್ನು ಕಾಣಬಹುದಾಗಿದೆ.

ಹಿರಿಯೂರು ಪಟ್ಟಣದ ಶಾಸನಗಳ ವಿವರ

ಸಂಖ್ಯೆ : ೦೧

ಸ್ಥಳ : ಹಿರಿಯೂರ ಹಳೆ ಊರಿನಲ್ಲಿರುವ ವೀರಭದ್ರ ದೇವಾಲಯದ ಮುಂಭಾಗದಲ್ಲಿ ನೆಟ್ಟಕಲ್ಲು

ಕಾಲಮಾನ : ಕ್ರಿ.ಶ. ೧೨-೧೪ನೇ ಶತಮಾನ

ಪ್ರಮಾಣ : ೪.೬*೧.೪ ಉದ್ದ ಮತ್ತು ಅಗಲ

ಪ್ರಕಟಣೆ : ಎ.ಕ.ಸಂ.೧೧, (ಹಳೆಯ) ಶಾ.ಸಂ.೪೦

ಶಾಸನ ಪಾಠದ ಸಾರಾಂಶ: ನಳಸಂವತ್ಸರದಪು ಶ್ಯಶು ೧ ಲುಶ್ರೀಮಂನ್ಮಹಾಮಂಡಲ್ಲೇಶರ ರಾಮ, ರಾಜಯ ಎರಿದಿಂಮರಾಜಯನವರ ಕಾರ್‍ಯ್ಯಕೆ ಕರ್ತರಾದ ಕಾಮಗೆತಿ ತಿಮ್ಮಣ ನಾಯಕರು ಹಿರಿಯೂರ ರತಂಮಡಿಯವರಿಗಲಾ ದೇವದಾಯಬ್ರಾಂಮ್ಮದಾಯದವರಿಗೂ ಸರ್ವಮಾನ್ಯದ ಶಾಸನನಿಂಮದೇವಸ್ತಾನವನೂ ಪೂಜೆಮಾಡಿಕೊಂಡು ಯರಿದಿಂಮರಾಜಯಗೆ ಪುಣ್ಯವಾಗಬೇಕೆಂದು ಪ್ರಾಕುತೆರುವರೊಕವನೂ ಸರ್ವಮಾನ್ಯವಾಗಿಬಿಟ ಉಯಿದಕೆ ಅವನೊಬ್ಬ ತಪಿದರೂಯರಹುಸಮ.......... ಹೊರಗು ಆವ.......... ರೂತಂಮ.[೭]

ಸಂಖ್ಯೆ : ೦೨

ಸ್ಥಳ : ಹಿರಿಯೂರು ಪಟ್ಟಣದ ದೊಡ್ಡಪೇಟೆ ದಳವಾಯಿ ಮನೆಜಗಲಿ ಮೇಲೆ ನೆಟ್ಟಕಲ್ಲು

ಕಾಲಮಾನ : ಕ್ರಿ.ಶ. ೧೪ನೇ ಶತಮಾನ

ಪ್ರಮಾಣ : ೨ * ೧.೬ ಉದ್ದ ಮತ್ತು ಅಗಲ

ಪ್ರಕಟಣೆ : ಎ.ಕ.ಸಂ.೧೧, (ಹಳೆಯ) ಶಾ.ಸಂ.೪೧

ಶಾಸನ ಪಾಠದ ಸಾರಾಂಶ: ಯಾದಚಿಂನ ಪನಾಯಕರ ಕಾರ್‍ಯ್ಯಕೆಕರ್ತ್ತರಾದ ಮಲಪನಾಯಕರು ಹಿರಿಯೂರ ಸೀಮೆಯ ಉಪಲಿಕರಿಗೆ ಕೊಟ್ಟ... ನೀಉನಂಹಿ.[೮]

ಸಂಖ್ಯೆ : ೦೩

ಸ್ಥಳ : ವೆಂಕಟರಮಣ ದೇವಾಲಯದ ಮುಂದೆ

ಕಾಲಮಾನ : ಕ್ರಿ.ಶ. ೧೪ನೇ ಶತಮಾನ

ಪ್ರಮಾಣ : ೩ * ೧.೬ ಉದ್ದ ಮತ್ತು ಅಗಲ

ಪ್ರಕಟಣೆ : ಎ.ಕ.ಸಂ.೧೧, (ಹಳೆಯ) ಶಾ.ಸಂ.೪೯

ಶಾಸನ ಪಾಠದ ಸಾರಂಶ : ಶುಭಮಸ್ತು ಬ್ರಾಂಹಣನಾದಂಥವನು ತಿರುಮಲ ದೇವರತೀರ್ಥಪ್ರಸಾದವನುವಲ್ಲದವನು ಚಾಂಡಾಲ.[೯]

ಸಂಖ್ಯೆ : ೦೪

ಸ್ಥಳ : ತೇರುಮಲ್ಲೇಶ್ವರ ದೇವಾಲಯದ ಉತ್ತರಭಾಗದಲ್ಲಿ

ಕಾಲಮಾನ : ಕ್ರಿ.ಶ. ೧೪-೧೫ನೇ ಶತಮಾನ

ಪ್ರಕಟಣೆ : ಎ.ಕ.ಸಂ.೧೧, (ಹಳೆಯ) ಶಾ.ಸಂ.೪೬

ಪ್ರಮಾಣ : ೫ * ೧.೬ ಉದ್ದ ಮತ್ತು ಅಗಲ

ಶಾಸನ ಪಾಠದ ಸಾರಂಶ : ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನ ಶಕೆ ವರುಷಂಗಳು ೧೫೫೪ನೇಯ ಆಂಗೀರ ಸಂವತ್ಸರ.......... ಪಂಚಾಳದೇವರಿಗೆ.......... ನಾಸನದಕ್ರಮ ಯೆಂತೆಂದರೆ.......... ಯಿಂದಪಡುವಣಬಾಗಿಲು ನಕಮಾಡಿದಮೇರೆಯೊಳಗೆ ಶುಭ ಶೋಭನ ಮೆರವಳಿಗೆ ಮಾಡಿಕೊಂಡಬುದುಯೆಂದು ಮೇರೆಮಾಡಿದ.......... ಶಾಸನ ಶುಭಮಸ್ತು.[೧೦]

ಸಂಖ್ಯೆ : ೦೫

ಸ್ಥಳ : ತೇರುಮಲ್ಲೇಶ್ವರ ದೇವಾಲಯದ ಉತ್ತರಭಾಗದ ಅದೇ ಸ್ಥಳದಲ್ಲಿ ಮತ್ತೊಂದು ಕಲ್ಲು

ಕಾಲಮಾನ : ಕ್ರಿ.ಶ. ೧೪-೧೫ನೇ ಶತಮಾನ

ಪ್ರಕಟಣೆ : ಎ.ಕ.ಸಂ.೧೧, (ಹಳೆಯ) ಶಾ.ಸಂ.೪೭

ಪ್ರಮಾಣ : ೫*೧.೬ ಉದ್ದ ಮತ್ತು ಅಗಲ

ಶಾಸನ ಪಾಠದ ಸಾರಾಂಶ : ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನ ಶಕ ವರುಷಗಳು ೧೫೫೪ ನೇ ಅಂಗೀರ ಸಂವತ್ಸರ.......... ಪಂಚಾಳದೇವರಿಗೆ .... ನಾಸನದ ಕ್ರಮಯೆಂತೆಂದರೆ................ಯಿಂದ ಪಡುವಣಬಾಗಿಲುತನಕ ಮಾಡಿದ ಮೇರೆಯೊಳಗೆ ಶುಭ ಶೋಭನ ಮೆರವಳಿಗೆ ಮಾಡಿಕೊಂಬುದುಯೆಂದು ಮೇರೆಮಾಡಿದ...............ಶಾಸನ ಶುಭಮಸ್ತು.[೧೧]

ಸಂಖ್ಯೆ : ೦೬

ಸ್ಥಳ : ತೇರುಮಲ್ಲೇಶ್ವರ ದೇವಾಲಯದ ಉತ್ತರಭಾಗದ ಅದೇ ಸ್ಥಳದಲ್ಲಿ ಮತ್ತೊಂದು ಕಲ್ಲು

ಕಾಲಮಾನ : ಕ್ರಿ.ಶ ೧೪-೧೫ನೇ ಶತಮಾನ

ಪ್ರಕಟಣೆ : ಎ.ಕ.ಸಂ.೧೧, ಶಾ.ಸಂ.೪೮

ಪ್ರಮಾಣ : ೫*೧.೬ ಉದ್ದ ಮತ್ತು ಅಗಲ

ಶಾಸನ ಪಾಠದ ಸಾರಾಂಶ : ಶುಭಮಸ್ತು ನಮಸ್ತುಂಗ ಶಿರಸ್ತುಚ್ಯಂಚಂದ್ರಚಾಮರಚಾರವೇತ್ರೈ ಲೋಕ್ಯ ನಗರಾರಂಭಂ ಮೂಲಸ್ತಾಂಭಾಯ ಶಂಭವೇ । ಸ್ವಸ್ತಿ ಶ್ರೀವಿಜಯಾಭ್ಯುದಯಶಾಲಿವಾಹನ ಶಕವರುಷಂಗಳು ೧೪೮೯ ನೆಯ ಪ್ರಭವ ಸಂವತ್ಸರದ ಮಾಗಶು ೧೪ ಮಂಗಳವಾರದಲು ಶ್ರೀಮಂನ್ಮಹಾ ರಾಜಾದಿರಾಜ ರಾಜ ಪರಮೇಶ್ವರ ಶ್ರೀವೀರಪ್ರತಾಪ ಶ್ರೀಸದಾಶಿವರಾಯರು ವಿದ್ಯಾನಗರಿಯ ಪಟ್ಟಣದಲು ಪೃಥ್ವಿರಾಜ್ಯಂಗೆಯ್ಯತಿರಲು ಶ್ರೀಮನ್ಮಹಾನಾಯಕಚಾರ್‍ಯ್ಯಭಾಶೆಗೆ ತಪ್ಪುವಯರಗಂಡಮರಹೊಕರಕಾವಹರತಿ ಆ.......... ಯಕಯನವಂಕೊಮಾರಕೆಂಪಚನಾಯ....... ಮಾನ್ಮಹಾದೇವಾಧಿ ದೇವಹಿರಿಯೂರ ತಿರಮಲ........... ಹಿರಿಯೂರ............ ಸ್ತಳವನು ಸವಿರಂಣ್ಯೋದಕಧಾ...... ಪುಣ್ಯ........ ವನು......... ಪಾದಕೆಸಮರ್ಪಿಸಿದ ಧರ್ಮ..... ಕಂದಿಕೆರೆ....... ಸೆಟ್ಟಗೆ ಕಾಣಾಚಿ...... ಯಾಗಿ...... ಕೆರೆಹಿರೆಗದೆಮಾನ್ಯ ನಾಪಾಲನಯೋರ್ಮಧ್ಯೆ ದಾನಾಚ್ಛೆಯೋನುಪಾ ನಂದಾನ ಸ್ವರ್ಗಮವಾಪ್ನೋತಿ ಪಾಲನಾ (ದ) ಚುತಂಪದು.......... ದನಳಿಪಿದವರು ತಂಮತಾಯನುತಂದೆಯನು.[೧೨]

೪.೨ ಸ್ಮಾರಕ ಶಿಲ್ಪಗಳು

ವೀರಗಲ್ಲುಗಳು

ಕರ್ನಾಟಕದ ಶಾಸನಗಳಲ್ಲಿ ದೊರೆಯುವಂತಹ ಮೂಲ ಸಾಮಾಗ್ರಿಗಳನ್ನು ವಿಭಿನ್ನವಾದ ದೃಷ್ಟಿಯಿಂದ ವಿಶ್ಲೇಷಿಸಿದ ಯಶಸ್ಸು ಎಂ.ಚಿದಾನಂದಮೂರ್ತಿಯವರಿಗೆ ಸಲ್ಲುತ್ತದೆ. ಇವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಉಲ್ಲೇಖಿಸಿರುವ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದು ಔಚಿತ್ಯವೆಂದೆನಿಸುತ್ತದೆ. ರಾಜರು ಕಾಲದಿಂದ ಕಾಲಕ್ಕೆ ಆಡಳಿತ ನಡೆಸಿರುವುದಕ್ಕೆ ಇತಿಹಾಸವೆಂಬ ಭಾವನೆ ಬಹಳ ಪ್ರಚಲಿತವಾಗಿದೆ. ಜನತೆ ಬಾಳಿ ಬದುಕಿದ ರೀತಿ, ಅನುಸರಿಸಿದ ಧರ್ಮ, ಬೆಳೆಸಿದ ಕಲೆ, ಅವರ ಜೀವನ ಸಮಸ್ಯೆಗಳು ಅವರ ಜೀವನದ ಮೌಲ್ಯಗಳನ್ನು ಇತ್ಯಾದಿಗಳ ವಿವರಣೆಯೇ ಆ ದೇಶದ ಮತ್ತು ಜನತೆಯ ಇತಿಹಾಸ.[೧೨] ಈ ರೀತಿಯ ಇತಿಹಾಸವನ್ನು ಒದಗಿಸುವಲ್ಲಿ ವೀರಗಲ್ಲುಗಳು ಬಹಳ ಪ್ರಮುಖವಾದವು. ನಿಧನವಾದ ವ್ಯಕ್ತಿಯನ್ನು ಅಥವಾ ಸಂಸ್ಕಾರ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿಯೋ, ಮಡಿದವರ ಸ್ಮರಣಾರ್ಥವಾಗಿಯೋ ಕೆಲವಾರು ಸಂಕೇತಗಳನ್ನೋ ಗುರುತುಗಳನ್ನೋ ಒಂದು ನಿಗದಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ಇವು ಸಾಮಾನ್ಯವಾಗಿ ಆಯಾ ದೇಶಗಳಲ್ಲಿನ ಧರ್ಮ, ನಂಬಿಕೆ, ಸಾಮಾಜಿಕ, ಪ್ರತಿಷ್ಠೆಗಳನ್ನು ಅನುಸರಿಸಿಯೇ ಬೆಳೆದಿದೆ. ಪ್ರಪಂಚದಾದ್ಯಂತ ಇಂತಹ ಸ್ಥಳಗಳ ಮೇಲೆ ತಮ್ಮದೇ ಅದಂತಹ ಸ್ಮಾರಕಗಳನ್ನು ಕಟ್ಟಿರುವುದನ್ನು ಕಾಣಬಹುದು.[೧೩]

ವೀರರು ತಮ್ಮ ಸ್ವಾರ್ಥಕ್ಕಾಗಿ ಮಡಿಯದೆ ಸಮಾಜದ ಒಳಿತಿಗಾಗಿ ಪ್ರಾಣತ್ಯಾಗ ಮಾಡಿದ್ದರಿಂದ ಇವರ ಸ್ಮರಣಾರ್ಥವಾಗಿ ಮಾಡಿರುವ ಸ್ಮಾರಕ ಶಿಲ್ಪಗಳೇ ವೀರಗಲ್ಲುಗಳು.[೧೪] ಅಂದರೆ ಇಚ್ಛಾಮರಣವನ್ನು ಆಹ್ವಾನಿಸಿದವರ ಗೌರವಾರ್ಥ ನೆಟ್ಟ ನಿಸಿಧಿಗಳ ಜೊತೆ ಜೊತೆಗೆ ರಣರಂಗದಲ್ಲಿ ಮಡಿದ ಯೋಧರ ವೀರಗಲ್ಲುಗಳೂ ಸೇರಿಕೊಳ್ಳ ತೊಡಗಿದವೆಂದರ್ಥ. ಯುದ್ಧವನ್ನು ತೀವ್ರವಾಗಿ ಪ್ರೀತಿಸಿ ಕೊನೆಯುಸಿರಿರುವವರೆಗೂ ಕಾದಾಡಿದ ಮಾನವಗಂಧ ಹಸ್ತಿಪಿಟ್ಟುಗನ, ವೈರಿ ಸೈನ್ಯಕ್ಕೆ ಕಠೋರನಾದ ಬೋಯಿಗನ ಭಾಗಿಯೂರಿನಲ್ಲಿ ವೀರಮರಣ ಹೊಂದಿದ ಸಾವಿಯಬ್ಬೆಯ ವೀರಗಲ್ಲುಗಳು ಇದಕ್ಕೆ ನಿದರ್ಶನಗಳು.[೧೫]

ಅವರು ಮಾಡಿದ ಹೋರಾಟ ಇಂದಿನ ತಮ್ಮ ದೃಷ್ಟಿಯಲ್ಲಿ ಏನಾದರೂ ಆಗಿರಲಿ ಸಮಾಜದ ಒಳಿತಿಗಾಗಿ ಜೀವನದ ಹಂಗನ್ನು ತೊರಿದ ಅವರ ಧೀಮಂತಿಕೆಯನ್ನು ನಿಷ್ಠೆ, ಸ್ವಾಮಿಭಕ್ತಿ, ಸ್ವಾಭಿಮಾನಗಳಿಂದ ಕೂಡಿದುದಾಗಿದೆ.

ಸಂಖ್ಯೆ : ೦೧

ಶಿಲ್ಪ : ವೀರಗಲ್ಲು

ಸ್ಥಳ : ಗಾಂಧೀ ವೃತ್ತದ ಬಳಿ

ಎತ್ತರ : ೨ ೧/೨ * ೨ ಉದ್ದ ಮತ್ತು ಅಗಲ

ಕಾಲಮಾನ : ಕ್ರಿ.ಶ. ೧೩ನೇ ಶತಮಾನ

ಹಿರಿಯೂರು ಪಟ್ಟಣದಲ್ಲಿನ ಪ್ರಮುಖ ರಸ್ತೆಯ ಸಮೀಪದ ಗಾಂಧೀ ವೃತ್ತದ ಬಳಿ ಕಣಿವೆ ಮಾರಮ್ಮನ ದೇವಾಲಯದ ಮುಂಭಾಗದಲ್ಲಿ ಒಂದು ಪ್ರಾಚೀನ ವೀರಗಲ್ಲು ಕಂಡುಬಂದಿದ್ದು ಕಪ್ಪು ಬಣ್ಣದ ಗ್ರಾನೈಟ್ ಕಲ್ಲಿನಿಂದ ನಿರ್ಮಿಸಿದ ಶಿಲೆಗಳಲ್ಲಿ ವೀರನ ಮತ್ತು ಸತಿಯ ಚಿತ್ರಣಗಳು ಮಾತ್ರ ಲಿಪಿ ಇಲ್ಲದ್ದಾಗಿದೆ. ಈ ಸ್ಮಾರಕ ಶಿಲ್ಪದ ಬಲಭಾಗದಲ್ಲಿ ಯುದ್ದದ ಸಂದರ್ಭದ ಮಡಿದವರಲ್ಲಿ ಶತ್ರುಗಳ ಜೊತೆ ಹೋರಾಡಿ ಮಡಿದ ವೀರನ ಚಿತ್ರದಲ್ಲಿ ವೀರನು ವೀರತನದಿಂದ ಹೋರಾಡಿ ಮಡಿದುದ್ದನು ತನ್ನ ಎಡಗಾಲನ್ನು ಮುಂದೆ ಮಾಡಿ ಎಡ ಕೈಯಲ್ಲಿ ಎತ್ತರವಾದ ಬಿಲ್ಲನ್ನು ಹಿಡಿದಿದ್ದಾನೆ. ಎದೆ ತೊಳು ಕೈಕಾಲುಗಳಲ್ಲಿ ಆಭರಣಗಳಿವೆ ಜೊತೆಗೆ ಕಾಲಿನ ಮುಂದಡಿಯವರೆಗೂ ಧರಿಸಿರುವ ವಸ್ತ್ರವಲ್ಲದೆ ಶಿರದಲ್ಲಿ ಶಿರೋಮುಡಿ ಮತ್ತು ಕಿವಿಗಳಲ್ಲಿ ಕುಂಡಗಳಿವೆ. ಈತನ ವೇಷಭೂಷಣಗಳಿಂದ ಇವನೋರ್ವ ಪ್ರಮುಖ ನಾಯಕನಾಗಿರುವಂತಿದೆ. ವೀರನ ಚಿತ್ರಣದ ಎದುರಿಗೆ ಈತನ ಪತ್ನಿಯು ವೈಭವಯುತವಾದ ಉಡುಗೆ-ತೊಡುಗೆ ಹುಟ್ಟಿದ್ದು ಬಲಗೈಯಲ್ಲಿ ನಿಂಬೆ ಹಣ್ಣನ್ನು ಹಿಡಿದು ನಿಂತಿರುವ ಚಿತ್ರಣವಿದೆ.

ವೀರನು ತನ್ನ ಬೇಟೆಯಲ್ಲಿ ಹೋರಾಡಿ ಮಡಿಯಲಾಗಿದೆ ಈತನ ಸತಿಯು ಅಂದಿನ ಪದ್ಧತಿ ಮತ್ತು ನಂಬಿಕೆಯಂತೆ ಚಿತೆಯನ್ನೇರಿ ಸಹಗಮನ ಪದ್ದತಿ ಅನುಸರಿಸುತ್ತಿದ್ದಾಳೆ. ಹಿರಿಯೂರಿನ ಮುಖ್ಯ ಸ್ಥಳದಲ್ಲಿ ಹಿಂದೊಮ್ಮೆ ಯುದ್ದ ಮತ್ತು ಸಹಗಮನ ನಡೆದಿರುವುದು ಅತ್ಯಂತ ಗಮನಾರ್ಹ ಅಂಶವಾಗಿದೆ.

ಸಂಖ್ಯೆ : ೨

ಶಿಲ್ಪ : ವೀರಗಲ್ಲು

ಸ್ಥಳ : ಸಿದ್ದನಾಯಕನ ವೃತ್ತದ ಹಳೇ ಲೈಬ್ರರಿ ಹತ್ತಿರ

ಎತ್ತರ : ೩ * ೩ ಉದ್ದ ಮತ್ತು ಅಗಲ

ಕಾಲಮಾನ : ಕ್ರಿ.ಶ ೧೫ನೇ ಶತಮಾನ

ಹಿರಿಯೂರಿನ ಪ್ರಾಚೀನ ಬೀದಿಗಳಲ್ಲಿ ಒಂದಾಗಿರುವ ಶ್ರೀತೇರುಮಲ್ಲೇಶ್ವರ ದೇವಾಲಯದ ಬಳಿಯ ಸಿದ್ಧನಾಯಕನ ವೃತ್ತದ ಹಳೇ ಲೈಬ್ರರಿ ಮುಂದೆ ವೀರಗಲ್ಲನ್ನು ನಿಲ್ಲಿಸಲಾಗಿದೆ. ಈ ವೀರಗಲ್ಲು ಗ್ರಾನೈಟ್ ಕಲ್ಲಿನ ಮಾಧ್ಯಮದಿಂದ ಮಾಡಿದ ವೀರಗಲ್ಲಾಗಿದೆ ಇದರಲ್ಲಿ ವೀರನು ಕುದುರೆಯ ಮೇಲೆ ಕುಳಿತು ಬಲಗೈಯಲ್ಲಿ ಖಡ್ಗವನ್ನು ಹಿಡಿದ್ದಿದ್ದಾನೆ. ಎಡಗೈಯಲ್ಲಿ ಕುದುರೆಯ ಜೀನನ್ನು ಹಿಡಿದು, ಅಲಂಕೃತವಾದ ಚಲಿಸುವ ಸ್ಥಿತಿಯನ್ನು ತನ್ನ ಎಡಗಾಲಿನಿಂದ ಮಡಿದ ಶತ್ರುವಿನ ರುಂಡವನ್ನು ತುಳಿಯುತ್ತಿದ್ದಾನೆ.

ಸಂಖ್ಯೆ : ೩

ಶಿಲ್ಪ : ವೀರಗಲ್ಲು

ಸ್ಥಳ : ಕಲ್ಲಯ್ಯನ ಬಡಾವಣೆ

ಎತ್ತರ : ೩ * ೧$^{೧/೨}$ ಉದ್ದ ಮತ್ತು ಅಗಲ

ಕಾಲಮಾನ : ಕ್ರಿ.ಶ ೧೫ನೇ ಶತಮಾನ

ಈ ವೀರಗಲ್ಲಿನಲ್ಲಿ ವೀರನೊಬ್ಬ ನಿಂತಿರುವ ಚಿತ್ರಣವಿದೆ. ವೀರನು ಎರಡು ಕೈಗಳನ್ನು ಇಳಿಬಿಟ್ಟಿದ್ದು. ಖಡ್ಗವನ್ನು ನೆಲಕ್ಕೆ ತಾಕುವಂತೆ ಇಳಿ ಬಿಟ್ಟಿದ್ದಾನೆ ಬಲ ಹಾಗೂ ಎಡ ಕೈಗಳಲ್ಲಿ ಆಯುಧ ಪ್ರಯೋಗ ಪರಿಣಿತ ಇವನಾಗಿದ್ದನು ಎಂಬುವುದನ್ನು ಈ ವೀರಗಲ್ಲಿನ ಶಿಲ್ಪದಲ್ಲಿ ತಿಳಿಸುತ್ತದೆ. ಉತ್ತಮವಾದ ಶಿರದ ತುರುಬನ್ನು ಹೊಂದಿದ್ದು, ವದನದಲ್ಲಿ ಮೀಸೆ ಇದೆ ಕೊರಳಲ್ಲಿ ಹಾರ, ನಡುವಿನಲ್ಲಿ ಬಿಚ್ಚುಗತ್ತಿ ಇದ್ದು ಹಾಗೂ ಉತ್ತಮವಾದ ಪೋಶಾಕನ್ನು ಧರಿಸಿದ್ದಾನೆ. ಶಾಂತ ಸ್ವಭಾವದ ಲಕ್ಷಣ ಇವನ ಮುಖದಲ್ಲಿದೆ, ಅಂದರೆ ಗೋಗ್ರದನ ಕಾರಣಕ್ಕೆ

ಶತೃಗಳ ಜೊತೆ ಹೋರಾಡಿ ಮಡಿದಿದ್ದಾನೆ. ಕಾರಣ ಸ್ಪಷ್ಟವಾಗಿದೆ. ಮೇಲೆ ಸೂರ್ಯ ಚಂದ್ರರರ ಚಿತ್ರಗಳಿವೆ.

ಸಂಖ್ಯೆ : ೪

ಶಿಲ್ಪ : ವೀರಗಲ್ಲು

ಸ್ಥಳ : ಕಲ್ಲಯ್ಯನ ಬಡಾವಣೆ

ಎತ್ತರ : ೨$^{೧/೪}$ * ೨$^{೧/೪}$ ಉದ್ದ ಮತ್ತು ಅಗಲ

ಕಾಲಮಾನ : ೧೦ನೇ ಶತಮಾನ

ವೀರನೊಬ್ಬನ ಚಿತ್ರಣವಿರುವ ವೀರಗಲ್ಲು ಇದೆ ಮಾಧ್ಯಮದ ದೃಷ್ಟಿಯಿಂದ ನೋಡುವುದಾದರೆ ಗಟ್ಟಿಯಾದ ಕಲ್ಲು ಇದಾಗಿದ್ದು ವೀರನು ಇಲ್ಲಿ ಒರೆ ಭಂಗಿಯಲ್ಲಿ ನಿಂತಿದ್ದು. ಬಲಭಾಗದ ಕೈಯಲ್ಲಿ ಇಳಿಬಿಟ್ಟ ಖಡ್ಗ ಹಿಡಿದಿದ್ದಾನೆ, ನಡುವಿನಲ್ಲಿ ಬಿಚ್ಚುಗತ್ತಿ ಇದೆ. ಉಡುಪಿನಲ್ಲಿ ಅಲಂಕಾರವಿಲ್ಲದಿದ್ದರು ತನ್ನ ಎಡಗೈಯನ್ನು ನಡುವಿನ ಅಸ್ತ್ರವನ್ನು ಬಳಿಸಿ ಹಿಡಿದುಕೊಂಡಿದ್ದಾನೆ. ಮುಂಗೈ ಮತ್ತು ತೋಳುಗಳಲ್ಲಿ ತೊಳುಬಂದಿಗಳಿವೆ. ಶಿರದಲ್ಲಿ ತುರುಬು ಕರ್ಣದಲ್ಲಿ ಕುಂಡಗಳಿವೆ, ವದನದಲ್ಲಿ ಮೀಸೆ ಇದ್ದು ವೀರತನ ಎದ್ದು ಕಾಣುತ್ತದೆ. ಗೋಗ್ರದನ ಕಾರಣಕ್ಕೆ ಶತೃಗಳೊಡನೆ ಹೋರಾಡಿ ಮಡಿದಿದ್ದಾನೆ. ಈ ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ ಚಂದ್ರರರ ಚಿತ್ರಣವಿದೆ.

ಸಂಖ್ಯೆ : ೫

ಶಿಲ್ಪ : ವೀರಗಲ್ಲು

ಸ್ಥಳ : ಕಲ್ಲಯ್ಯನ ಬಡಾವಣೆ

ಎತ್ತರ : ೪$^{೧/೨}$ * ೩$^{೧/೨}$ ಉದ್ದ ಮತ್ತು ಅಗಲ

ಕಾಲಮಾನ : ಕ್ರಿ.ಶ ೧೩ನೇ ಶತಮಾನ

ಈ ಒಂದು ವೀರಗಲ್ಲಿನಲ್ಲಿ ಹುಲಿಯು ತನ್ನ ಬಾಯಿಯನ್ನು ತೆರೆದು ವೀರನ ಎಡಗಾಲಿನ ಮೇಲೆ ಹೆಜ್ಜೆಯನ್ನು ಇಟ್ಟಿದೆ. ವೀರನು ಹುಲಿಯ ಬಾಯಲ್ಲಿ ತನ್ನ ಕೈ ಹಾಕಿಕೊಲ್ಲುತ್ತಿದ್ದಾನೆ. ಬಲಗೈನಿಂದ ಹುಲಿಯನ್ನೇ ಇರಿದಿರುವುದು ಖಡ್ಗದ ಚಿತ್ರಣದಿಂದ ಸ್ಪಷ್ಟವಾಗಿದೆ. ಹುಲಿಯನ್ನು ಕೊಂದು ಹತನಾಗಿದ್ದಾನೆ, ಇವನ ಆಕರ್ಷಕ ವೇಷಭೂಷಣಗಳನ್ನು ಗಮನಿಸಿದರೆ ಇವನೊಬ್ಬ ಪ್ರಮುಖ ಆಡಳಿತಗಾರನೆಂಬುದು ಸ್ಪಷ್ಟವಾಗುತ್ತದೆ. ಈ ವೀರಗಲ್ಲು ಹೊಯ್ಸಳರ ಕಾಲದ ವೀರಗಲ್ಲುಗಳನ್ನು ಇದು ಹೋಲುತ್ತದೆ.

ವೀರ ಮಾಸ್ತಿಕಲ್ಲು

ವೀರ ಮಾಸ್ತಿಕಲ್ಲುಗಳು ಮಹಾಸತಿ ಸ್ಮಾರಕ ಶಿಲ್ಪಗಳ ಒಂದು ಭಾಗವಾಗಿದೆ. ಯುದ್ಧವೊಂದರಲ್ಲಿ ಹೋರಾಡಿ ಮಡಿದ ವ್ಯಕ್ತಿಯ ಪತ್ನಿಯು ಸಹಗಮನ ಮಾಡಿದ್ದಾರೆ. ಅಂತಹ ಸಂದರ್ಭಗಳಲ್ಲಿ ಹೋರಾಡಿ ಮಡಿದ ವೀರನಿಗೂ ಪ್ರಾಮುಖ್ಯತೆ ಇರುವುದರಿಂದ ಆ ವೀರರ ಶಿಲ್ಪವನ್ನು ಪ್ರಧಾನವಾಗಿ ಕಾಣುವಂತೆ ಕೆತ್ತಿರುತ್ತಾರೆ. ಆತನ ಪತ್ನಿಯು ಸಹಗಮನ ಮಾಡಿರುವುದರಿಂದ ಆ ಮಹಾಸತಿಗೂ ಪ್ರಮುಖ್ಯತೆ ಇರುತ್ತದೆ. ಅದ್ದರಿಂದ ವೀರ ಮತ್ತು ಆತನ ಪತ್ನಿ ಇಬ್ಬರ ಶಿಲ್ಪಗಳಿಗೂ ಪ್ರಾಮುಖ್ಯತೆ ಇರುವಂತೆ ಕೇತ್ತಿರುತ್ತಾರೆ. ವೀರನು ಆಯುಧ ಪಾಣಿಯಾಗಿ ಹೋರಾಟದ ಭಂಗಿಯಲ್ಲಿ ನಿಂತಿರುತ್ತಾನೆ. ಆತನ ಪತ್ನಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಆಭಯ ಹಸ್ತವನ್ನು ತೋರುತ್ತಿರುವಂತೆ ನಿಂತಿರುತ್ತಾಳೆ. ಇಂತಹ ಮಾಸ್ತಿಗಲ್ಲನು ವೀರಮಾಸ್ತಿಗಲ್ಲು ಎಂದು ಕರಿಯಲಾಗುತ್ತದೆ.[೧೬] ಅದು ವೀರನ ಮರಣದ ಸ್ಮಾರಕವಾಗಿರುವುದರಿಂದ ಅದು ವೀರಗಲ್ಲು ಹೌದು, ಮಹಾಸತಿಯೊಬ್ಬಳ ಮರಣದ ಸ್ಮಾರಕವಾಗಿರುವುದರಿಂದ ಅದು ಮಾಸ್ತಿಕಲ್ಲು ಹೌದು, ಅದು ವೀರಗಲ್ಲು ಮತ್ತು ಮಾಸ್ತಿಕಲ್ಲು ಎರಡು ಆಗಿರುವುದರಿಂದ ಇಂತಹ ಸ್ಮಾರಕ ಶಿಲ್ಪವನ್ನು ವೀರ ಮಾಸ್ತಿಕಲ್ಲು ಎಂದು ಕರೆಯುತ್ತಾರೆ.

ಸಂಖ್ಯೆ : ೧

ಶಿಲ್ಪ : ವೀರ ಮಾಸ್ತಿಕಲ್ಲು

ಸ್ಥಳ : ಕಲ್ಲಯ್ಯನ ಬಡಾವಣೆ

ಎತ್ತರ : ೩ ೧/೨ * ೨ ೧/೪ ಉದ್ದ ಮತ್ತು ಅಗಲ

ಕಾಲಮಾನ : ಕ್ರಿಶ ೧೪ನೇ ಶತಮಾನ

ಹಿರಿಯೂರು ಪಟ್ಟಣದ ಕಲ್ಲಯ್ಯ ಬಡಾವಣೆ ಬಳಿಯಲ್ಲಿಯೇ ಇರುವ ಜಲಶುದ್ಧೀಕರಣ ಘಟಕದ ಆವರಣದಲೊಂದು ವೀರ ಮಾಸ್ತಿಕಲ್ಲನ್ನು ನಿಲ್ಲಿಸಲಾಗಿದೆ. ಬಳಿಯಲ್ಲಿ ಇರಿಸಿದ್ದ ಸ್ಮಾರಕವನ್ನು ಇತ್ತೀಚೆಗೆ ಸ್ಥಳಾಂತರಿಸಲಾಗಿದೆ. ಈ ವೀರಮಾಸ್ತಿಕಲ್ಲು ಗ್ರಾನೈಟ್ ಕಲ್ಲಿನ ಮಧ್ಯಭಾಗವನ್ನು ಹದಮಾಕೊಂಡು ಚಿತ್ರವನ್ನು ಈ ಸ್ಮಾರಕ ಶಿಲ್ಪದಲ್ಲಿ ಕೆತ್ತಲಾಗಿದೆ. ಈ ಸ್ಮಾರಕದಲ್ಲಿ ವೀರ ಮತ್ತು ಸತಿಯರ ಚಿತ್ರಗಳಿದ್ದು ಎಡಭಾಗದಲ್ಲಿ ವೀರನ ಚಿತ್ರವಿದೆ. ಈ ವೀರನು ವೀರಾವೇಷದಿಂದ ಬಿಲ್ಲನ್ನು ಎಡಗೈಯಲ್ಲಿ ಹಿಡಿದುಕೊಂಡಿದ್ದಾನೆ. ಬಲಗೈಯಲ್ಲಿ ಬಾಣ ಹೂಡಲು ಸಿದ್ಧನಾಗಿದ್ದು ನಡುವಿನಲ್ಲಿ ಬಿಚ್ಚುಗತ್ತಿ ಇದೆ ಶಿರದಲ್ಲಿ ಶಿರಮುಡಿ ಕರ್ಣಕುಂಡಗಳು ಕೊರಳಲ್ಲಿ ಮತ್ತು ನಡುವಿನಲ್ಲಿ ಆಭರಣಗಳಿದ್ದು. ವೀರಗಚ್ಚೆಯ ಪೋಷಾಕು ಇವನಿಗೆ ಇವೆ.

ಯುದ್ಧದಲ್ಲಿ ವೀರ ಶತ್ರುಗಳ ಈತನ ಬಲಬದಿಯಲ್ಲಿರುವ ಮಡಿದಿದ್ದಾನೆ. ಕಾರಣ ತಿಳಿದುಬಂದಿಲ್ಲ ಈತನ ಬಲಬದಿಯಲ್ಲಿರುವ ಸತಿಯು ನರ್ತನ ಭಂಗಿಯಲ್ಲಿ ನಿಂತಿದ್ದು,

ಬಲಗೈಯಲ್ಲಿ ಹಣ್ಣನ್ನು ಹಿಡಿದಿದ್ದಾಳೆ. ಪತಿಯ ಮರಣದ ಕಾರಣದಿಂದಾಗಿ ಈ ಸತಿಯು ಚಿತೆ ಏರಿ ಸಹಗಮನ ಪದ್ದತಿ ಅನುಸರಿಸಿ ಸಾವಿನಲ್ಲೂ ಪತಿಯನ್ನು ಹಿಂಬಾಲಿಸಿದ್ದಾಳೆ.

೪.೩. ಸ್ವರ್ಗ ಸ್ವೀಕೃತ ಮಾತೆಯ ದೇವಾಲಯ (ಕ್ಯಾಥೊಲೀಕ್ ಚರ್ಚ್)

ಸ್ವರ್ಗ ಸ್ವೀಕೃತ ಮಾತೆಯ ದೇವಾಲಯ. ಇದು ಶಿವಮೊಗ್ಗ ಧರ್ಮಕ್ಷೇತ್ರದ ಚಿತ್ರದುರ್ಗ ವಲಯದ ಹಿರಿಯೂರಿನ ಕೇಂದ್ರವಾಗಿದೆ. ನೂತನ ದೇವಾಲಯದ ಉದ್ಘಾಟನೆ ೧೭-೦೮-೨೦೧೧ರಂದು ಶಿವಮೊಗ್ಗ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಪರಮ ಪೂಜ್ಯ ವಂದನೀಯ ಗುರುಗಳಾದ ಜೇರಾಲ್ಡ್ ಐಸಾಕ್ ಲೋಬೋ ಉದ್ಘಾಟನೆ ಮಾಡಿದರು.

ದೇವಸ್ಥಾನದ ನಾಮಾಂಕಿತದ ಅರ್ಥ

ಯೇಸು ಕ್ರಿಸ್ತನ ತಾಯಿಯಾದ ಮಾತೆ ಮೆರಿಯಮ್ಮನವರು ತಮ್ಮ ಮರಣಾನಂತರ ದೇಹ ಸಮೇತ ಸ್ವರ್ಗಕ್ಕೆ ಎತ್ತಲ್ಪಟ್ಟರು. ಅಥವಾ ಸ್ವರ್ಗದಿಂದ ಸ್ವೀಕರಿಸಲಟ್ಟರು. ಈ ಘಟನೆಯ ನೆನಪಿಗಾಗಿ ಹಿರಿಯೂರಿನ ದೇವಾಲಯಕ್ಕೆ ಈ ಹೆಸರನ್ನು ಇಡಲಾಗಿದೆ. ಪ್ರತಿವರ್ಷ ಅಗಸ್ಟ್ ೧೫ರಂದು ಪ್ರಪಂಚದಾದ್ಯಂತ ಮಾತೆ ಮೆರಿಯಮ್ಮನವರು ಸ್ವರ್ಗವನ್ನು ಸ್ವೀಕರಿಸಿದ ದಿನವನ್ನಾಗಿ ಮಿಜೃಂಭಣೆಯಿಂದ ಆಚರಿಸಲಾಗುತ್ತದೆ. ಅದೇ ದಿನ ತಮ್ಮ ದೇವಾಲಯದಲ್ಲಿ ಕೂಡ ಸ್ವರ್ಗ ಸ್ವೀಕೃತ ಮಾತೆಯ ವಾರ್ಷಿಕ ಹಬ್ಬವನ್ನು ಆಚರಿಸುತ್ತೇವೆ. ಅದೇ ದಿನ ಸಂಜೆ ಹಿರಿಯೂರಿನ ಪ್ರಮುಖ ಬೀದಿಗಳಲ್ಲಿ ಮಾತೆಯ ಅಲಂಕೃತ ತೇರಿನ ಮೆರವಣಿಗೆ ನೂರಾರು ಭಕ್ತಾದಿಗಳೊಂದಿಗೆ ನಡೆಯುತ್ತದೆ.

ನೂತನ ದೇವಾಲಯ (ಚರ್ಚ್) ನಿರ್ಮಾಣಗೊಂಡ ರೀತಿ

"ಶ್ರಮವೇ ದೇವರ ಸೇವೆ, ಶ್ರಮವೇ ದೇವರ ಭಕ್ತಿ, ಶ್ರಮವೇ ದೇವರ ಪೂಜೆಯು, ಶ್ರಮವೇ ಜೀವನದ ನಿರ್ಮಾತೃ, ಶ್ರಮವೇ ಶೇಷ್ಠ ಸಿದ್ದಿದಾಯಕ." ಹಿರಿಯರ ಈ ನುಡಿಗಳನ್ನು ಅರ್ಥೈಸಿಕೊಂಡ ಹಿರಿಯೂರಿನ ಸಮಸ್ತ ಕ್ರೈಸ್ತ ಭಾಂದವರು, ಧರ್ಮಗುರುಗಳು ಮತ್ತು ಧರ್ಮಭಗಿನಿಯರುಗಳ ಸತತ ಐದಾರು ವರ್ಷಗಳ ಶ್ರಮದಿಂದ ಧರ್ಮಾಧ್ಯಾಕ್ಷರ ಮುಂದಾಳತ್ವದಲ್ಲಿ ೧೭-೦೮-೨೦೧೧ ರಂದು ಹಿರಿಯೂರಿನ ಹೃದಯ ಭಾಗದಲ್ಲಿ ಸ್ವರ್ಗ ಸ್ವೀಕೃತ ಮಾತೆಯ ಈ ಅದ್ಭುತ ನವ ದೇವಾಲಯ ಉದ್ಘಾಟನೆಯಾಯಿತು. ದೃಢವಾದದೊಂದು ಗುರಿ, ಆ ಗುರಿಯ ಹಿಂದೆ ಅದನ್ನು ಸಾಧಿಸಿಯೇ ತೀರಬೇಕೆಂಬ ತೀವ್ರವಾದ ಆಕಾಂಕ್ಷೆ, ಅದಕ್ಕೆ ಆ ಭಗವಂತನ ಆಶೀರ್ವಾದ, ಮಾತೆಯ ಅನುಗ್ರಹ ಹಾಗೂ ಜಾತಿ ಮತ ಭೇಧವಿಲ್ಲದೆ ನೂರಾರು ಧಾನಿಗಳು ಅಭಯ ಈ ನಮ್ಮ ದೇವಾಲಯ ನಿರ್ಮಾಣದ ಯಶಸ್ಸಿನ ರಹಸ್ಯಗಳಾಗಿವೆ.

ಪ್ರಾರ್ಥನಾ ಸಮಯ

ದೇವಾಲಯದಲ್ಲಿ ಪ್ರತಿದಿನ ಬೆಳಿಗ್ಗೆ ಅಥವಾ ಸಂಜೆ ಪೂಜೆ ಮತ್ತು ಜಪಸರ ನಡೆಯುತ್ತದೆ. ಭಾನುವಾರಗಳಲ್ಲಿ ಬೆಳಿಗ್ಗೆ ೮ ಗಂಟೆಯಿಂದ ಜಪಸರ ಮತ್ತು ಆಡಂಭರದ ಗಾಯನ ಬಲಿಪೂಜೆ ನಡೆಯುತ್ತದೆ. ಬೆಳಿಗ್ಗೆ ೬ ಗಂಟೆಯಿಂದ ರಾತ್ರಿ ೮ ಗಂಟೆಯವರೆಗೆ ದೇವಾಸ್ಥಾನದ ಬಾಗಿಲು ತೆರೆದಿರುತ್ತದೆ. ಈ ಸಮಯದಲ್ಲಿ ಯಾರು ಬೇಕಾದರೂ ಬಂದು ದೇವಾಲಯದಲ್ಲಿ ನಿಶ್ಯಬ್ಧವಾಗಿ ಪ್ರಾರ್ಥನೆ ಮಾಡಬಹುದು. ಆದರೆ ಯಾವುದೇ ರೀತಿ ಗದ್ದಲ ಗಲಾಟೆಗೆ ಅವಕಾಶವಿಲ್ಲ.

ಶಿಕ್ಷಣ ವ್ಯವಸ್ಥೆ

ಹಿರಿಯೂರು, ಕೆಲವೇ ಕೆಲವು ಕ್ಯಾಥೋಲಿಕ್ ಕ್ರೈಸ್ತ ಕುಟುಂಬಗಳಿರುವ ಒಂದು ಪುಟ್ಟ ಧರ್ಮಕೇಂದ್ರ, ೦೧–೦೬–೧೯೭೨ರಲ್ಲಿ ಅಂದಿನ ಧರ್ಮ ಕೇಂದ್ರದ ಗುರುಗಳು ಶಿಕ್ಷಣ ಇಲಾಖೆಯ ಅನುಮತಿ ಪಡೆದು ಅಸಂಪ್ಷನ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು, ಅಂದಿನಿಂದ ಇಂದಿನವರೆಗೆ ಈ ನಮ್ಮ ಶಾಲೆಯ ಅಗಾಧವಾಗಿ ಬೆಳೆದುನಿಂತಿದೆ. ಅಸಂಪ್ಷನ್ ಕನ್ನಡ ಮತ್ತು ಆಂಗ್ಲ ನರ್ಸರಿ, ಪ್ರಾಥಮಿಕ, ಪ್ರೌಢಶಾಲೆಗಳು ಇಂದು ಸುಮಾರು ಎರಡು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಸುಮಾರು ನಲವತ್ತು ವರ್ಷಗಳಿಂದ ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣವನ್ನು ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ.

ಸ್ವರ್ಗ ಸ್ವೀಕೃತ ಮಾತೆಯ ಶಿರದಲ್ಲಿರುವ ಈ ಮುಕುಟವೇ ನಮ್ಮ ಶಾಲೆಯ ಚಿಹ್ನೆಯಾಗಿದೆ. ಈ ನಮ್ಮ ಶಾಲೆ ಬುದ್ಧಿವಂತರಿಗೆ ಮಾತ್ರ ಇರುವ ಶಾಲೆಯ ಹಿಂದುಳಿದ ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡಲು ಪ್ರಯತ್ನಿಸುವುದೇ ನಮ್ಮ ಶಾಲೆಯ ಮುಖ್ಯ ಧ್ಯೇಯವಾಗಿದೆ. ಎಲ್ಲಾ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಈ ನಮ್ಮ ಶಾಲೆಯು ಸತತವಾಗಿ ಶ್ರಮಿಸುತ್ತಾ ಬಂದಿದೆ ಮತ್ತು ಈಗಲೂ ಶ್ರಮಿಸುತ್ತಿದೆ. ಎಲ್ಲ ವರ್ಗದ ಜನರೂ ನಮ್ಮ ಶಾಲೆಯಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಎಂಬುದಾಗಿ ಚರ್ಚ್‌ನ ಪಾಧರ್ ಪೌಲ್ಡ್ ಡಿಸೋಜ ಮಾಹಿತಿ ನೀಡಿದರು.[೧೭]

ಸಂಖ್ಯೆ : ೧

ಸ್ಮಾರಕ : ಸ್ವರ್ಗ ಸ್ವೀಕೃತ ಮಾತೆಯ ದೇವಾಲಯ (ಕ್ಯಾಥೋಲಿಕ್ ಚರ್ಚ್)

ಸ್ಥಳ : ಹುಳಿಯಾರು ರಸ್ತೆ ಹತ್ತಿರ

ಕಾಲಮಾನ : ಕ್ರಿಶ ೧೯೭೨

ಅಭಿಮುಖ : ಉತ್ತರ

ಹಿರಿಯೂರಿನ ಹೃದಯ ಭಾಗದಲ್ಲಿ ಸ್ವರ್ಗ ಸ್ವೀಕೃತ ಮಾತೆಯ ಈ ಅದ್ಭುತ ನವ ದೇವಾಲಯವಿದೆ. ಈ ಸ್ವರ್ಗ ಸ್ವೀಕೃತ ಮಾತೆಯ ದೇವಾಲಯವು ಸ್ಥಳವಿನ್ಯಾಸದಲ್ಲಿ ಗರ್ಭಗುಡಿಯಂತಹ ಚಿಕ್ಕದಾದ ನಾಲ್ಕು ಅಡಿ ಎತ್ತರವಾದ ಬಲಿಪೀಠವಿದೆ ಮತ್ತು ನವರಂಗದ ಸ್ಥಳ ವಿಸ್ತಾರವಾದ ಪ್ರಾರ್ಥನೆ ಮಾಡುವ ಸ್ಥಳವಿದೆ ಹಿಂದೆಯೇ ಮುಖಮಂಟಪದಲ್ಲಿ ನಾಲ್ಕು ಎತ್ತರವಾದ ಕಂಬಗಳಿಂದ ಕೂಡಿದೆ. ಈ ಚರ್ಚ್‌ನ ಒಳಗಡೆ ಹಜಾರವಾದ ಪ್ರಾರ್ಥನಾಲಯವಿದ್ದು ತುಂಬಾ ವಿಸ್ತಾರವಾದ ಪ್ರಾರ್ಥನಾಲಯವಾಗಿದೆ. ಹಾಗೆಯೇ ಹಜಾರವಾದ ಪ್ರಾರ್ಥನಾಲಯದ ಎರಡು ಭಿತ್ತಿಗಳಲ್ಲಿ ದ್ವಾರಬಾಗಿಲುಗಳನ್ನು ಕಾಣುತ್ತೇವೆ. ಮತ್ತು ಗರ್ಭಗುಡಿಯಂತಿರುವ ಚರ್ಚಿನ ಮಧ್ಯದಲ್ಲಿ ಎರಡು ಎತ್ತರವಾದ ಕಂಬಗಳಿದ್ದು ಅ ಕಂಬಗಳ ಸುತ್ತಲೂ ಎಲೆ ಬಳ್ಳಿಯಾಕರದ ಆಲಂಕಾರವನ್ನು ಮಾಡಲಾಗಿದೆ. ಈ ಪೀಠದ ಪಕ್ಕದಲ್ಲಿಯೇ ಏಸುಕ್ರಿಸ್ತನ ಜೀವನದ ಭಾವ ಚಿತ್ರಗಳನ್ನು ಕಾಣಲಾಗುವುದು.

ಈ ಸ್ಮಾರಕದ ಏರುವಿನ್ಯಾಸದಲ್ಲಿ ಅಧಿಷ್ಠಾನ ಭೀತ್ತಿ ಮತ್ತು ಮೂರು ಎತ್ತರವಾದ ಗೋಪುರಗಳನ್ನು ಹೊಂದಿದೆ ಹಾಗೆಯೇ ಮುಖವಂಟಪದ ಮೇಲಿನ ಮಧ್ಯಭಾಗದಲ್ಲಿ ಸುಂದರವಾದ ಏಸುಕ್ರಿಸ್ತನ ಶಿಲ್ಪವನ್ನು ನಿಲ್ಲಿಸಲಾಗಿದೆ. ಈ ಕ್ಯಾಥೋಲಿಕ್ ಚರ್ಚ್ "ನಿಯೋ ಕ್ಲಾಸಿಕಲ್ ಶೈಲಿಯಲ್ಲಿ" ನಿರ್ಮಾಣಮಾಡಲಾಗಿದೆ. ಈ ಚರ್ಚಿನ ತಾರಸಿಯ ಮೇಲೆ ಕೆಲವು ಅಪೋಸಲ್‌ಗಳ (ಕ್ರಿಸ್ತನ ಅನುಯಾಯಿಗಳು) ಮೂರ್ತಿಗಳಿವೆ. ಈ ಚರ್ಚ್ ಹೊರಗಿನಿಂದ ಅತ್ಯಂತ ದೊಡ್ಡದಾಗಿ ಕಾಣುತ್ತದೆ ಮತ್ತು ಚರ್ಚಿನ ಒಳಭಾಗದಲ್ಲಿ ಹಲವಾರು ಏಸುಕ್ರೀಸ್ತನ ವಿಖ್ಯಾತ ಕಲಾಕೃತಿಗಳನ್ನು ಕಾಣಬಹುದು. ಈ ಚರ್ಚಿನ ಮಧ್ಯಭಾಗದ ಪ್ರಾರ್ಥನೆ ವೇದಿಕೆಯಲ್ಲಿ ಬಲೀಪೀಠವಿದ್ದು ಬಲಿಪೂಜೆಯು ನಡೆಯುತ್ತದೆ ಈ ಬಲಿಪೀಠವು ಜಾಲಿಯ ಮರದ ಹಲಗೆಯಿಂದ ಮಾಡಿದ್ದು ತುಂಬಾ ಸುಂದರವಾಗಿದೆ. ಮತ್ತು ವರ್ಷದಲ್ಲಿ ಒಂದು ಬಾರಿ ಬಲಿಪೀಠದ ಮೇಲೆ ಏಸುಕ್ರಿಸ್ತನ ನೆನಪಿಗಾಗಿ ಈ ಬಲಿಪೀಠದ ಮೇಲೆ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಚರ್ಚಿನ ಫಾಧರ್ ಪ್ರಾರ್ಥನೆಯ ಪೂಜೆ ಅಥವಾ ಬಲಿಯ ಪೂಜೆ ಅದಾ ನಂತರ ಚರ್ಚಿನ ಎಲ್ಲರಿಗೂ ಅ ದ್ರಾಕ್ಷಾರಸದ ರಸವನ್ನು ಎಲ್ಲಾರ ಬಾಯಿಗೆ ಒಂದೊಂದು ಚಮಚವನ್ನು ಹಾಕುತ್ತಾರೆ ಇದೇ ಈ ಚರ್ಚಿನ ವಿಶೇಷ ಪೂಜೆಯಾಗಿದ್ದು ಪ್ರತಿದಿನವು ಜಪಸ ಆಡಂಭರದ ಗಾಯನಗಳು ನಡೆಯುತ್ತಿರುತ್ತವೆ.

ಸಂಖ್ಯೆ : ೨

ಸ್ಮಾರಕ : ಜುಮ್ಮಾ ಮಸೀದಿ

ಸ್ಥಳ : ಶ್ರೀತೇರುಮಲ್ಲೇಶ್ವರ ದೇವಾಲಯದ ಬಳಿ

ಕಾಲಮಾನ : ಕ್ರಿ.ಶ ೧೨ನೇ ಶತಮಾನ

ಅಭಿಮುಖ : ಉತ್ತರ

ಶ್ರೀತೇರುಮಲ್ಲೇಶ್ವರ ಗುಡಿಯ ಬಳಿ ಬಹಳ ಹಿಂದೆ ಕಟ್ಟಲಾದ ಈ ಮಸೀದಿಯು ತುಂಬಾ ಪ್ರಾಚೀನವಾದ ಮಸೀದಿಯಾಗಿದ್ದು. ಇದನ್ನು ಇತ್ತಿಚ್ಚಿಗೆ ಸುಮಾರು ೩೦-೪೦ ವರ್ಷಗಳ ಹಿಂದೆ ಖಾದರ್ ರಾವುತರ್, ಗೌರಪುರ ಷರೀಪ್ ಜಾನರ ನೇತೃತ್ವದಲ್ಲಿ ಕಟ್ಟಿಸಿದರೆಂದು ತಿಳಿದು ಬರುತ್ತದೆ.

ಈ ಜುಮ್ಮಾ ಮಸೀದಿಯು ಚೌಕಾಕಾರವಾಗಿದ್ದು ಅಧಿಷ್ಠಾನ, ಭಿತ್ತಿ ಮತ್ತು ಪ್ರಸ್ತಾರ ಹಾಗೂ ಶಿಖರವನ್ನು ಹೊಂದಿದ್ದು ಪ್ರಾರ್ಥನೆ (ನಮಾಜ್) ಮಾಡುವ ಜಾಗವು ತುಂಬಾ ವಿಸ್ತಾರವಾದ ಹಜಾರವಾಗಿದ್ದು ಮುಖ ಮಂಟಪದಲ್ಲಿ ದ್ವಾರಬಾಗಿಲು ಮತ್ತು ಬಾಗಿಲ ಮೇಲೆ ಮತ್ತೋಂದು ಅಂತಸ್ತನ್ನು ಕಟ್ಟಲಾಗಿದ್ದು ಮುಂಭಾಗದಲ್ಲಿ ಎರಡು ಚಿಕ್ಕದಾದ ಕಂಬಗಳು ಇವೆ ಮತ್ತು ಮಧ್ಯದಲ್ಲಿ ಸುಂದರವಾದ ವೃತ್ತಾಕಾರವಾದ ಗುಮ್ಮಟವನ್ನು ನಿರ್ಮಿಸಿದ್ದಾರೆ. ಅದರ ಹಿಂದಿನ ಭಾಗದಲ್ಲಿ ಒಂದು ಎತ್ತರವಾದ ಕಂಬದ ಗೋಪುರ ಹಾಗೂ ಅದರ ಪಕ್ಕದಲ್ಲಿ ಇನ್ನೊಂದು ಚಿಕ್ಕದಾದ ಕಂಬದ ಗೋಪುರವನ್ನು ನಿರ್ಮಿಸಲಾಗಿದ್ದು ಈ ಜುಮ್ಮಾ ಮಸೀದಿಯ ಸ್ಮಾರಕವು ಸಂಪೂರ್ಣವಾಗಿ ಇಸ್ಲಾಂಮಿಕ್ ಶೈಲಿಯಲ್ಲಿ ನಿರ್ಮಿಸಲಾಗಿದೆ. ಹಾಗಾಗಿ ಹಿರಿಯೂರು ಪಟ್ಟಣದಲ್ಲಿ ಜುಮ್ಮಾ ಮಸೀದಿಯು ತುಂಬಾ ಪ್ರಾಚೀನವಾದ ಮಸೀದಿಯಾಗಿದೆ. ಮಸೀದಿಯಲ್ಲಿ ಮುಸ್ಲಿಂ ಬಾಂಧವರು ಪ್ರತಿ ಶುಕ್ರವಾರ ನಮಾಜ್‌ನ್ನು ಮಾಡುತ್ತಾರೆ. ಹಾಗೆಯೇ ಪ್ರತಿ ವರ್ಷವು ಮೋಹರಂ ಹಬ್ಬವನ್ನು ಸಾಮೂಹಿಕವಾಗಿ ಎಲ್ಲಾ ಜನಾಂಗದವರು ಸೇರಿ ಮೊಹರಂ ಆಚರಣೆ ಮಾಡುತ್ತಾರೆ.

ಸಂಖ್ಯೆ : ೩

ಸ್ಮಾರಕ : ಶಾಂತಿನಾಥ ಬಸದಿ

ಸ್ಥಳ : ಶ್ರೀಶೈಲ ವೃತ್ತದಲ್ಲಿ

ಕಾಲಮಾನ : ಕ್ರಿ.ಶ ೧೯೬೯-೭೦

ಅಭಿಮುಖ : ಪೂರ್ವ

ಹಿರಿಯೂರು ಪಟ್ಟಣದ ಶ್ರೀಶೈಲ ವೃತ್ತದ ಶಂಕರಜ್ಞಾನ ಮಂದಿರದ ಬಳಿ ೧೯೬೯-೭೦ ರಲ್ಲಿ ೧೬ನೇ ತೀರ್ಥಂಕರಾದ ಶ್ರೀ ಶಾಂತಿನಾಥಸ್ವಾಮಿ ೩೪ನೇ ತೀರ್ಥಂಕರರಾದ ವರ್ಧಮಾನ ತೀರ್ಥಂಕರ ಬಸದಿಯನ್ನು ಜೈನ ಧರ್ಮೀಯರು ಸ್ಥಾಪಿಸಿದ್ದಾರೆ.

ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಸಭಾಮಂಟಪ ಹಾಗೂ ಮುಖಮಂಟಪವನ್ನು ಹೊಂದಿದೆ ಗರ್ಭಗೃಹದಲ್ಲಿ ೩ ಅಡಿ ಎತ್ತರದ ಪೀಠದ ಮೇಲೆ ೨೪ನೇ ತೀರ್ಥಂಕರರಾದ ವರ್ಧಮಾನ ಮಹಾವೀರನ ಮೂರ್ತಿಶಿಲ್ಪವಿದೆ ಮತ್ತು ಅಂತರಾಳದ ಮುಂದಿನ ಭಾಗದಲ್ಲಿ

ಸಭಾಮಂಟಪವು ಇದ್ದು ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ ಮತ್ತು ಅಂತರಾಳದ ಬಾಗಿಲು ಪಕ್ಕದಲ್ಲಿ ಬಲಭಾಗ ಮತ್ತು ಎಡಭಾಗದಲ್ಲಿ ಯಕ್ಷ ಯಕ್ಷಿಣಿಯರು ಹಾರವನ್ನು ಹಿಡಿದು ನಿಂತಿರುವ ಶಿಲ್ಪವನ್ನು ಕಾಣಬಹುದಾಗಿದೆ. ಹಾಗೆಯೇ ಮುಖಮಂಟಪ್ಪದ ಭಿತ್ತಿಗೆ ಹೊಂದಿಕೊಂಡಂತೆ ಭಾವಣಿ ಮೇಲ್ಭಾಗದಲ್ಲಿ ಸುಂದರವಾದ ಶಾಂತಿನಾಥ ಮೂರ್ತಿಶಿಲ್ಪವನ್ನು ಇರಿಸಲಾಗಿದ್ದು ಮುಖಮಂಟಪದಲ್ಲಿ ಎರಡು ಕಂಬಗಳಲ್ಲಿ ಯಕ್ಷ ಯಕ್ಷಣಿಯರ ಉಬ್ಬು ಶಿಲ್ಪಗಳು ಹೂವಿನ ಹಾರವನ್ನು ಹಿಡಿದು ನಿಂತಿರುವುದನ್ನು ಕಾಣಲಾಗುವುದು.

ಏರುವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಶಾಲಾ ಮತ್ತು ಶಿಖರವನ್ನು ಹೊಂದಿದೆ. ಈ ಬಸದಿಯ ಶಿಖರ ಶೈಲಿಯು ತುಂಬಾ ಅದ್ಭುತವಾದ ಶಿಖರ ಶೈಲಿಯನ್ನು ನೋಡಿದರೆ ನಾಗರ ಶೈಲಿಯ ಶಿಖರದ ಹೋಲಿಕೆ ಕಾಣಬಹುದಾಗಿದ್ದು ಶಿಖರದ ಸುತ್ತಲು ಆಮಲಕಗಳನ್ನು ಇರುವುದನ್ನು ಕಾಣಬಹುದಾಗಿದೆ. ಈ ರೀತಿಯಾಗಿ ಹಿರಿಯೂರು ಪಟ್ಟಣದಲ್ಲಿ ಜೈನ ಧರ್ಮಿಯರು ಸುಂದರವಾದ ೨೪ನೇ ತೀರ್ಥಂಕರನಾದ ವರ್ಧಮಾನ ತೀರ್ಥಂಕರ ಬಸದಿಯನ್ನು ನಿರ್ಮಿಸಿದ್ದು ಇದು ಹಿರಿಯೂರು ಪಟ್ಟಣದಲ್ಲಿನ ಸ್ಮಾರಕಗಳಲ್ಲಿ ಈ ಒಂದು ಸ್ಮಾರಕವು ಪ್ರಮುಖವಾದ ಸ್ಮಾರಕವಾಗಿದೆ. ಇದರಿಂದಾಗಿ ಜೈನ ಧರ್ಮಿಯರು ಭಾದ್ರಪದ ಮಾಸದಲ್ಲಿ ಬಿದಿಗೆಯ ದಿನ ಸ್ವಾಮಿಯ ರಥೋತ್ಸವ ನಡೆಯುತ್ತದೆ. ದೇವಾಲಯದ ವತಿಯಿಂದ ಜೈನ ಸನ್ಯಾಸಿಗಳಿಗಾಗಿ, ಗುರುಗಳಿಗಾಗಿ, ಜೈನಬಂಧುಗಳಿಗಾಗಿ ೧೯೭೫ರಲ್ಲಿ ವೃತ್ತವನ್ನು ಕಟ್ಟಿಸಿದ್ದಾರೆ.

ಅಡಿಟಿಪಣಿಗಳು

೧. ಶೇಷಶಾಸ್ತ್ರಿ ಆರ್. ಶಾಸನ ಪರಿಚಯ, ೨೦೦೫, ಪು, ೧.

೨. ಸಿ.ಪಿ.ಕೆ. ಶಾಸನ ಶಾಸ್ತ್ರ ಪ್ರವೇಶ, ೨೦೦೧, ಪು, ೨೫.

೩. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ೧೯೬೬, ಪು,೧೩.

೪. ಇಂದುಮತಿ ಪಿ. ಪಾಟೀಲ, ಪ್ರಾಚೀನ ಭಾರತದ ಇತಿಹಾಸ, ೨೦೦೮, ಪು, ೫೪.

೫. ಸಿ.ಪಿ.ಕೆ., ಪೂರ್ವೋಕ್ತ. ೨೦೦೧, ಪು, ೫.

೬. ಶೇಷಶಾಸ್ತ್ರಿ, ಪೂರ್ವೋಕ್ತ, ಪು, ೫.

೭. ಎಫಿಗ್ರಾಫಿಯ ಕರ್ನಾಟಿಕ, ಸಂ, ೧೧, (ಹಳೆಯದು) ೧೯೦೩ ಶಾಸನ ಸಂ.೪೦, ಪು.೩೦೩.

೮. ಎ.ಕ. ಸಂ.(ಹಳೆಯ), ಅದೇ, ೧೯೦೩, ಶಾಸನ ಸಂ. ೪೧, ಪು, ೩೦೩.

೯. ಅದೇ, ಶಾಸನ ಸಂ. ೪೯, ಪು, ೩೦೩.

೧೦. ಅದೇ ಶಾಸನ ಸಂ. ೪೬, ಪು, ೩೦೫.

೧೧. ಅದೇ ಶಾಸನ ಸಂ. ೪೭, ಪು, ೩೦೫.

೧೨. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ೧೯೬೬, ಪು, ೧.

೧೩. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ೨೦೦೪, ಪು, ೧೪.

೧೪. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ೧೯೯೯, ಪು, ೧೨.

೧೫. ಷ. ಶೆಟ್ಟರ್ ಸಾವನ್ನು ಸ್ವಾಗತಿಸಿ–೧, ೨೦೦೫, ಪು, ೧೪.

೧೬. ಮಂಜುನಾಥ ಎಂ.ಜಿ., ಮಾಸ್ತಿಕಲ್ಲು ವೀರಗಲ್ಲು, ಮತ್ತು ನಿಸಿದಿಗಲ್ಲು ಶಾಸನಗಳು, ೨೦೧೧, ಪು, ೪.

೧೭. ಪೌಲ್ಡ್ ಡಿಸೋಜ, ಮೋಕ್ಷದರಾಣಿ ಚರ್ಚ್‌ನ ಫಾದರ್ ನೀಡಿದ ಮಾಹಿತಿ ಹಿರಿಯೂರು.

❑❑❑

ಅಧ್ಯಾಯ : ಐದು

ನಂಬಿಕೆ ಮತ್ತು ಆಚರಣೆಗಳು

೫.೧. ನಂಬಿಕೆ ಮತ್ತು ಆಚರಣೆಗಳು

೫.೨. ಜಾತ್ರೆಗಳು

ಅಧ್ಯಾಯ : ಐದು

ನಂಬಿಕೆ ಮತ್ತು ಆಚರಣೆಗಳು

೫.೧. ನಂಬಿಕೆ ಮತ್ತು ಆಚರಣೆಗಳು

ನಂಬಿಕೆ ಮತ್ತು ಆಚರಣೆಯು ಸಂಸ್ಕೃತಿಯು ಒಂದು ಭಾಗ, ಆಚರಣೆ ಎಂದರೆ ಪ್ರತಿಯೊಂದು ಸಮುದಾಯವು ಪರಂಪರಾಗತವಾಗಿ, ರೂಢಿಸಿಕೊಂಡು ಒಂದಿರುವ ನಿರ್ದಿಷ್ಟ ಸ್ಥಳದಲ್ಲಿ ಮತ್ತು ಕಾಲದಲ್ಲಿ ನಡೆಯುವ ಕ್ರಿಯೆಯಾಗಿದೆ. ಮಾನವನ ಉಗಮದೊಂದಿಗೆ ಆರಂಭಗೊಂಡಿರುವ ಆಚರಣೆಗಳು, ಆತನ ಬದುಕಿನಲ್ಲಿ ಇಂದಿಗೂ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ನಂಬಿಕೆಯ ಭೌತಿಕ ರೂಪ ಆಚರಣೆ, ನಂಬಿಕೆಗಳನ್ನು ಅಂಗೀಕರಿಸಿದಾಗ ಅವು ಆಚರಣೆಯನ್ನು ದೃಢಪಡಿಸಿ ಪುನಶ್ಚೇತನಗೊಳಿಸುತ್ತವೆ. ಮಾನವ ಹುಟ್ಟಿನಿಂದ ಸಾಯುವವರೆಗೂ ತನ್ನ ಜೀವನದ ವಿವಿಧ ಹಂತಗಳಲ್ಲಿ ಹಾಗೂ ಕಾಲದ ಪರಿವರ್ತನೆಯನ್ನು ಅನುಸರಿಸಿ ವಿವಿಧ ರೀತಿಯ ಆಚರಣೆಗಳನ್ನು ನಡೆಸುತ್ತಾನೆ. ಪ್ರತಿಯೊಂದು ಕಾಲಘಟ್ಟದಲ್ಲಿಯೂ ಜನತೆಯ ಮುಖ್ಯೋದ್ಧೇಶವಾಗಿತ್ತೆಂಬುದನ್ನು ಮರೆಯಲಾಗದು.[೧] ಆಚರಣೆಗಳು ಧಾರ್ಮಿಕ ಸಂಬಂಧಿಯಾದ ಕ್ರಿಯಾ ರೂಪಗಳು.[೨] ಮಾನವನ ಬದುಕನ್ನು ರೂಪಿಸುವಲ್ಲಿ ಸಂಸ್ಕೃತಿಯ ಪೋಷಣೆಯಲ್ಲಿ ನಾಗರಿಕತೆಯನ್ನು ಬೆಳೆಸುವಲ್ಲಿ ಸಂಪ್ರದಾಯ ಆಚರಣೆಗಳು ಮಹತ್ವದ ಪಾತ್ರವಹಿಸಿವೆ. ಸಂಪ್ರದಾಯ, ಆಚರಣೆ, ವಿಧಿ, ನಿಷೇಧ ಉವುಗಳನ್ನು ಸ್ಥಳಿಯ ಉದಾಹರಣೆಯೊಂದಿಗೆ ಇತಿಹಾಸದಲ್ಲಿ ಅರ್ಥೈಯಿಸಬಹುದು. ಇವುಗಳಿಂದ ಮಾನವನ ಬೌದ್ಧಿಕ, ಮಾನಸಿಕ, ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸನ್ನಿವೇಶಗಳ ಸ್ಥಿತಿಗಳನ್ನು ತಿಳಿಯಬಹುದು.

ಆಚರಣೆ ಎಂಬುದು ಧಾರ್ಮಿಕ ಕ್ರಿಯೆಯ ಮುಂದುವರಿದ ರೂಪ, ಅತೀಂದ್ರಿಯ ಶಕ್ತಿ ಅಥವಾ ಶಕ್ತಿಗಳಿಂದ ಅನುಗ್ರಹ ಪಡೆಯಲು ಕೈಗೊಂಡ ಕ್ರಿಯೆ ಇದಾಗಿದೆ. ಎಂದು ಮೋನಿಕಾ ವಿಲ್ಸನ್ ಹೇಳುತ್ತಾರೆ.[೩] ಕ್ರಮವತ್ತಾದ. ವಿಧಿ ಪೂರ್ವಕವಾದ, ಪರಂಪರಾಗತವಾಗಿ ನಡೆದು ಬಂದ ರೀತಿಯಲ್ಲಿ ನಡೆವ ಇಂತಹ ಕ್ರಿಯೆಗಳ ಹಿನ್ನಲೆಯಲ್ಲಿ ನಂಬಿಕೆ ಆಳವಾಗಿ ಬೇರು ಬಿಟ್ಟಿರುತ್ತದೆ. ಧರ್ಮ ಇದರ ಅಡಿಗಲ್ಲು, ಧಾರ್ಮಿಕ ವಿಧಿಗಳಿಂದ ತಾನು ನಂಬಿದ ಪವಿತ್ರ ವಸ್ತುಗಳ ಪ್ರೀತಿಯನ್ನು ಸಂಪಾದಿಸಬಹುದೆಂದು ಮನುಷ್ಯ ಎಣಿಸುತ್ತಾನೆ. ಇದು ಕ್ರಮವತ್ತಾದ

ಅರ್ಚನಾ ಕ್ರಮವೂ ಹೌದು. ಲೌಕಿಕ ಹಿನ್ನೆಲೆಯಲ್ಲಿ ಸಂಪ್ರದಾಯ ನಿಷ್ಠ ರೀತಿಯಲ್ಲಿ ನಡೆಸುವ ಒಂದು ಕ್ರಿಯೆಯೂ ಆಗಿರುತ್ತದೆ. ಧಾರ್ಮಿಕ ಪಾವಿತ್ರ್ಯದ ಜೊತೆಗೆ ಅತಿಮಾನುಷ ಶಕ್ತಿಗಳ ಭಯವೂ ಮಿಗಿಲಾದುದೇ ಅದುದರಿಂದ ಆಚರಣೆಗಳನ್ನು ಅತ್ಯಂತ ಶ್ರದ್ಧೆಯಿಂದ ನಡೆಸಲಾಗುತ್ತದೆ.

ಆಚರಣೆಗಳು ಮಾನವ ಜೀವನದ ಅಂಗಗಳಾಗಿ ಬೆಳೆದು ಸಂಪ್ರದಾಯವಾಗಿ ಮಾರ್ಪಾಡುತ್ತವೆ. ಅನಾದಿಕಾಲದಿಂದಲೂ ಈ ರೀತಿಯ ಆಚರಣೆಗಳನ್ನು ನಡೆಸಿಕೊಂಡು ಬಂದಿರುವುದನ್ನು ಕಾಣಬಹುದು. ಕಾಲಕಾಲಕ್ಕೆ ಹೊಸ ಹೊಸ ಆಚರಣೆಗಳು ಪ್ರವೇಶ ಮಾಡುತ್ತಿರುತ್ತವೆ. ಇವೆಲ್ಲವೂ ಮಾನವನ ಮಾನಸಿಕ ನೆಮ್ಮದಿಗಾಗಿ ಮಾಡಿಕೊಂಡಿರುವ ಚಿಕಿತ್ಸೆ ಸ್ವರೂಪದ ಸಾಧನಗಳು. ನಾಗರಿಕತೆಯ ಬೆಳಬಣಿಗೆಯಲ್ಲಿ ಮಾನವನ ಕೃಷಿ ಆಧಾರಿತ ಬದುಕು ಇಮ್ಮಡಿಗೊಳಿಸಿಕೊಂಡಂತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಹಿರಿಯೂರು ಪಟ್ಟಣದಲ್ಲಿ ಕಂಡುಬರುವ ನಂಬಿಕೆ ಮತ್ತು ಆಚರಣೆಗಳು ಆ ಪ್ರದೇಶದ ಎಲ್ಲಾ ಸನ್ನಿವೇಶಗಳನ್ನು ಅವಲಂಬಿಸಿರುತ್ತದೆ.

ಬನದಮ್ಮ ದೇವಾಲಯದ ನಂಬಿಕೆ

ಈ ದೇವಾಲಯವು ಪಾಳೆಗಾರರ ಕಾಲದಲ್ಲಿ ಪ್ರಮುಖ ದೇವತೆಯಾಗಿ ವಿಜೃಂಭಣೆಯಿಂದ ಪೂಜಿಸಲ್ಪಡುತ್ತಿದ್ದು ಈ ದೇವಿಯ ದೇವಾಲಯ ಅತ್ಯಂತ ಪ್ರಾಚೀನವೆಂದು ಹೇಳುತ್ತಾರೆ. ಆದರೆ ಆಗಿನ ದೇವಾಲಯ ಈಗಿಲ್ಲ. ಈ ದೇವಿಯ ವಿಶೇಷವೆಂದರೆ ದೇವಿಗೆ ಗಂಟೆ ಬಾರಿಸುವಂತಿಲ್ಲ. ಒಂದು ವೇಳೆ ತಮಟೆ, ಉರುಮೆ ವಗೈರೆ ಬಾರಿಸಿದರೆ, ಅವು ಅಲ್ಲಿಯೇ ಒಡೆದು ಹೋಗುತ್ತವೆ ಎನ್ನುವ ನಂಬಿಕೆ ಇದೆ.[೪]

ಜಾಮೀಯ ಮಸೀದಿಯ ನಂಬಿಕೆ

ತೇರುಮಲ್ಲೇಶ್ವರ ಗುಡಿಯ ಬಳಿ ಬಹಳ ಹಿಂದೆ ಕಟ್ಟಲಾದ ಈ ಮಸೀದಿಯಲ್ಲಿ ಮೊಹರಂ ಹಬ್ಬ ಆಚರಿಸುತ್ತಾರೆ. ಆಗ ಇಲ್ಲಿ ಅಲಾವಿ ಗುಂಡಿಯಲ್ಲಿ ಬೆಳಗಿನಜಾವ ತನ್ನಷ್ಟಕ್ಕೆ ತಾನೇ ಅಗ್ನಿ ಹೊತ್ತಿಕೊಳ್ಳುತ್ತದೆಯಂತೆ. ಇದನ್ನು ಪರೀಕ್ಷಿಸಲು ಹೋದರೆ ಅನಾಹುತವಾಗುತ್ತದೆ ಎನ್ನುವ ನಂಬಿಕೆ ಇದೆ.[೫]

ಶ್ರೀತೇರುಮಲ್ಲೇಶ್ವರ ದೇವಾಲಯದ ಕರ್ಪೂರದಾರತಿ ನಂಬಿಕೆ

ಭಕ್ತಾದಿಗಳು ಕರ್ಪೂರದಾರತಿ ಕಾರ್ಯದಲ್ಲಿ ಸುಮಂಗಲಿಯರು ತಮ್ಮ ಹರಕೆಗಳನ್ನು ಪೂರೈಸುತ್ತಾರೆ. ಹಾಗೂ ಹೊಸ ಬೇಡಿಕೆಗಳನ್ನು ಸಲ್ಲಿಸುತ್ತಾರೆ. ಉದಾಹರಣೆಗೆ ಮದುವೆಯಾಗದ ಮಹಿಳೆಯರು ಕರ್ಪೂರ ಹಚ್ಚಿ ಬೇಡಿಕೊಂಡರೆ ಮದುವೆಯಾಗುವ ಯೋಗ ಬರುತ್ತದೆಂದು,

ಮಕ್ಕಳಾಗದವರಿಗೆ ಮಕ್ಕಳಾಗುತ್ತದೆಂಬ ಇತ್ಯಾದಿ ನಂಬಿಕೆ ಇದೆ. ಹಾಗೆಯೇ ಶ್ರೀತೇರುಮಲ್ಲೇಶ್ವರ ಸ್ವಾಮಿಗೆ ಕರ್ಪೂರದಾರತಿ ಮಾಡಿದ ನಂತರ ಸ್ವಾಮಿಗೆ ಗಂಗಾಭಿಷೇಕ ಮತ್ತು ರುದ್ರಾಭಿಷೇಕಗಳನ್ನು ಸಹ ಮಾಡಲಾಗುತ್ತದೆ. ಮರುದಿನ ರಾತ್ರಿ ಚುಟುಗುಮಲ್ಲೇಶ್ವರ ಸ್ವಾಮಿ ದೇವಸ್ಥಾನಕ್ಕೆ ಅಡ್ಡ ಪಲ್ಲಕ್ಕಿಯಲ್ಲಿ ಶ್ರೀತೇರುಮಲ್ಲೇಶ್ವರ ಸ್ವಾಮಿ ಹೋಗಿಬರುತ್ತದೆ. ಈ ಚುಟುಗುಮಲ್ಲಪ್ಪ ದೇವಾಲಯಕ್ಕೆ ಹೋಗಿಬರುವುದಕ್ಕೆ ಐತಿಹ್ಯವಿದ್ದು. ಈ ದೇವಾಲಯ ಹಿಂದೆ ಶ್ರೀತೇರುಮಲ್ಲೇಶ್ವರ ಸ್ವಾಮಿಯ ಸೂಳೆಯ ಮನೆಯಾಗಿದ್ದಿತಂತೆ. ಸ್ವಾಮಿ ಹೋಗಿ ಬರುವುದರಿಂದ ಮೈಲಿಗೆಯಾಗಿದೆ ಎಂಬ ನಂಬಿಕೆಯಿಂದ ಸಂಜೆ ವಸಂತೋತ್ಸವ ಓಕಳಿ ಪಾರ್ವತೋತ್ಸವಗಳನ್ನು ನಡೆಸುವ ನಂಬಿಕೆಯು ಇದೆ.

ಶ್ರೀತೇರುಮಲ್ಲೇಶ್ವರ ದೇವಾಲಯದ ಶಿವ ಧನಸ್ಸು ನಂಬಿಕೆ

ದೇವಸ್ಥಾನದಲ್ಲಿ ಸುಮಾರು ೨೦ ಅಡಿ ಉದ್ದದ ಬಹಳ ಭಾರವಾದ ಒಂದು ಶಿವ ಧನಸ್ಸಿದೆ. ರಥೋತ್ಸವದ ದಿನ ಬೆಳಿಗ್ಗೆ ಮಹಾಭಿಷೇಕದ ನಂತರ ಶಿವ ಧನಸ್ಸನ್ನು ವೇದಾವತಿ ನದಗೆ ಒಯ್ದು ಗಂಗಾಸ್ನಾನ ಮಾಡಿಸಿ, ಪೂಜೆಸಲ್ಲಿಸುತ್ತಾರೆ. ಪೂಜಾರಿಯು ನದಿದಡದ ಮೇಲೆ ನಿಂತು ಉತ್ತ ದಿಕ್ಕಿನ ಹರ್ತಿಕೋಟೆಯ ವೀರಭದ್ರ ದೇವರ ಅಪ್ಪಣೆ ಕೋರುತ್ತಾರೆ. ಅಂದರೆ ವೇದಾವತಿ ನದಿ ದಡದಲ್ಲಿ ಗಂಟೆ ಬಾರಿಸಿದರೆ ಒಂಬತ್ತು ಮೈಲಿ ದೂರದ ಹರ್ತಿಕೋಟೆಗೆ ಶಬ್ದ ಕೇಳಿಬರುತ್ತಿತ್ತು. ಇದರಿಂದ ಹರ್ತಿಕೋಟೆಯ ಜನರು ರಥೋತ್ಸವ ಇದೆ ಎಂದು ತಿಳಿಯುತ್ತಿದ್ದರು. ಪೂಜೆ ಮುಗಿಸಿ ಶಿವಧನಸ್ಸನ್ನು ಹಿಂದಕ್ಕೆ ತರುವಾಗ ಹಗುರವಾಗಿತ್ತೆಂದರೆ ಒಳ್ಳೆಯ ಮಳೆ-ಬೆಳೆ ಆಗುತ್ತದೆಂದು, ಧನಸ್ಸು ಭಾರವಾದರೆ ಬರಗಾಲವೆಂದು, ಅಲ್ಲದೆ ಮಕ್ಕಳಿಲ್ಲದವರು ಧನಸ್ಸಿಗೆ ಹೆಗಲುಕೊಟ್ಟರೆ ಮಕ್ಕಳಾಗುತ್ತವೆಂಬ ಪ್ರತೀತಿ ಇದೆ. ಹೀಗೆ ಈ ಶಿವಧನಸ್ಸನ್ನು ದೇವಸ್ಥಾನದ ಹತ್ತಿರ ಹೊತ್ತು ತಂದ ನಂತರವೇ ರಥ ಎಳೆಯುತ್ತಾರೆ. ಈ ಧನಸ್ಸನ್ನು ಮಲ್ಲಮ್ಮ ಊರು ಗೋಲಾಗಿ ಬಳಸುತ್ತಿದ್ದಾರೆಂದು ಮತ್ತು ಈ ಧನಸ್ಸು ಪ್ರತಿ ವರ್ಷ ರಾಗಿಕಾಳಿನಷ್ಟು ಬೆಳೆಯುತ್ತದೆ ಎಂಬ ನಂಬಿಕೆ ಇದೆ.

ಜನರ ನಂಬಿಕೆ

ವೈದಿಕ ಬ್ರಾಹ್ಮಣರು ಚಿತಾಭಸ್ಮವನ್ನು ತಂದು ಎರಡು ನದಿಗಳು ಸೇರುವ ಜಾಗದಲ್ಲಿ ಬೀಡುವುದು ವಾಡಿಕೆ. ವೇದಾವತಿ ಮತ್ತು ಸುವರ್ಣಮುಖಿ ಎಂಬ ಈ ಎರಡು ನದಿಗಳು ಕೃಷ್ಣ ನದಿಯನ್ನು ಸಂಗಮಿಸಿ ಕೊನೆಗೆ ಬಂಗಾಳ ಕೊಲ್ಲಿಯನ್ನು ತಲುಪುವುದರಿಂದ ಭಸ್ಮವನ್ನು ಈ ಭಾಗದಲ್ಲಿ ಲೀನಗೊಳಿಸಿದರೆ ಮರಣ ಹೊಂದಿದವರು ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆಂಬುದು ಜನರ ನಂಬಿಕೆಯಾಗಿದೆ.[೬]

ಆಚರಣೆಗಳು

ಮೊಹರಂ

ಹಿರಿಯೂರು ಪಟ್ಟಣದಲ್ಲಿ ಜಾಮೀಯ ಮಸೀದಿಯಲ್ಲಿ ಮೊಹರಂ ಹಬ್ಬವನ್ನು ಆಚರಿಸುವುದನ್ನು ಕಾಣಬಹುದು. ಇದನ್ನು ಹಿಂದೂಗಳು ಪೀರಲ ದೇವರ ಹಬ್ಬವನ್ನಾಗಿ ಆಚರಿಸುವರು ಹಿರಿಯೂರು ಪಟ್ಟಣದ ಪ್ರದೇಶದಲ್ಲಿ ಮೊಹರಂನ್ನು ಬಹಳ ವೈಭವದಿಂದ ಆಚರಿಸಲಾಗುವುದು. ಹಿರಿಯೂರು ಪಟ್ಟಣದ ಜನರು ಈ ಮೊಹರಂನಲ್ಲಿ ಭಾಗವಹಿಸುವುದು ಇದರ ವಿಶೇಷ. ಇಲ್ಲಿ ಪೀರಲ ದೇವರ ಮಸೀದಿಗಳನ್ನು ಹೊನ್ನೂರಸ್ವಾಮಿ ಗುಡಿಯೆಂದು ಹಿಂದುಗಳು ಭಾವಿಸಿರುವುದು ಕಂಡುಬರುತ್ತದೆ. ಹಿಂದೂ ಮುಸ್ಲಿಂರು ಹಿರಿಯೂರು ಪಟ್ಟಣದಲ್ಲಿ ಮೊಹರಂ ದಿನದಂದು ಕಠಿಣ ನಿಯಮಗಳನ್ನು ಪಾಲಿಸುತ್ತಿರುವುದು ಗಮನಾರ್ಹ ಅವರು ಹಬ್ಬದ ಆಚರಣೆಯ ಸಂದರ್ಭದಲ್ಲಿ ಮಧ್ಯ-ಮಾಂಸವನ್ನು ತ್ಯಜಿಸುತ್ತಾರೆ. ಹೆಣ್ಣು ಮಕ್ಕಳು ಹೂವು ಮುಡಿಯುವುದಿಲ್ಲ ಮತ್ತು ಅವರು ಬರಿಗಾಲಲ್ಲಿ ನಡೆಯಬೇಕು. ಹಬ್ಬದ ದಿನದಂದು ಇವರು ತಮ್ಮ ಮನೆಗಳ ಬಾಗಿಲು ಮುಚ್ಚುವುದಿಲ್ಲ ಮತ್ತು ಅಂದು ವಿಶೇಷವಾಗಿ ಸಂತಾನ ಭಾಗ್ಯವಿಲ್ಲದವರಿಗೆ ಉಡಿ ತುಂಬುವ ಪದ್ಧತಿ ನಡೆಯುತ್ತದೆಂದು ತಿಳಿದಬರುತ್ತದೆ.[೭] ಅದೇ ರೀತಿ ಹಿರಿಯೂರು ಪಟ್ಟಣದ ಸುತ್ತಮುತ್ತಲಿನ ಪರಿಸರದಲ್ಲಿಯು ಸಹ ಹಿಂದೂ-ಮುಸ್ಲಿಂರು ಮೊಹರಂ ಹಬ್ಬದ ಸಂದರ್ಭದಲ್ಲಿ ಕೆಲವು ನಿಯಮಗಳನ್ನು ಆಚರಿಸುತ್ತಾರೆ. ಇವರು ಹಬ್ಬದ ಕೊನೆಯ ದಿನ ಉಪವಾಸ ವ್ರತವನ್ನು ಕೈಗೊಳ್ಳುತ್ತಾರೆ.

ಹಿರಿಯೂರು ಪಟ್ಟಣದಲ್ಲಿ ಮೂರು ಪೀರಲ ಮಸೀದಿಗಳಿದ್ದು, ದೊಡ್ಡ ಮಸೀದಿ ನಡುಲ ಮಸೀದಿ ಮತ್ತು ಕೊನೆಯ ಮಸೀದಿಗಳೆಂದು ಕರೆಯುತ್ತಾರೆ. ವಲಿಸಾಬ್, ಯಾಹುಸಾಬ್ ಮತ್ತು ಫಕ್ರುದ್ದೀನ್ ಸಾಬ್ ಎಂಬುವರು ಈ ಮಸೀದಿಗಳ ಮೌಲ್ಲಾಗಳು, ಮಸೀದಿಗಳ ಎದುರಿಗೆ ಒಂದು ಅಲಾವಿ ಕುಣಿಯನ್ನು ತೆಗೆಯುವುದು ಪ್ರತಿವರ್ಷ ನವೆಂಬರ್ ತಿಂಗಳಲ್ಲಿ ನಡೆಯುವ ಮೊಹರಂ ಹಬ್ಬದ ದಿನ ಕಾಣಬಹುದು. ಹತ್ತುದಿನಗಳ ಕಾಲ ಈ ಹಬ್ಬವನ್ನು ಇವರು ಆಚರಿಸುತ್ತಾರೆ. ಚಂದ್ರನ ದರ್ಶನ ಎಂಬ ಹಬ್ಬದ ಮೊದಲ ಕಾರ್ಯದ ನಂತರ ಅಲಾವಿ ಕುಣಿಗೆ ಗುದ್ದಲಿ ಹಾಕಿ ಪೂಜೆಯಿಂದ ಪ್ರಾರಂಭವಾಗುತ್ತದೆ. ಇದಾದ ನಾಲ್ಕನೆ ದಿನ ಪೆಟ್ಟಿಗೆಯಲ್ಲಿರುವ ಪಾಂಜಾ ಮೂರ್ತಿಗಳಿಗೆ ಮೌಲ್ಲಾಗಳು ಮಸೀದಿಯಲ್ಲಿ ನೈವೇದ್ಯ ಇಟ್ಟು ಪೂಜೆ ಮಾಡುತ್ತಾರೆ. ಸರಗಸ್ತಿ ಎಂಬ ಆಚರಣೆಯನ್ನು ಏಳನೇ ದಿನದಂದು ಅಂದರೆ ಹಸೇನ-ಹುಸೇನ ಎಂಬ ಎರಡು ದೇವರುಗಳನ್ನು ಮಸೀದಿಯಲ್ಲಿ ಕೂರಿಸುತ್ತಾರೆ. ಕೆಂಡಾರ್ಚನೆಯ ಸೇವೆಯನ್ನು ಮಾಡುವುದು ಮೊಹರಂ ಹಬ್ಬದ ವಿಶೇಷ, ಇದನ್ನು ಹಬ್ಬದ ಒಂಬತ್ತನೇ ದಿನ ರಾತ್ರಿ ಅಲಾಯಿ ಕುಣಿಗೆ ಕಟ್ಟಿಗೆಗಳನ್ನು ಹಾಕಿ ಬೆಂಕಿ ಹಚ್ಚಿಕೆಂಡವನ್ನು ಸಿದ್ಧಪಡಿಸುತ್ತಾರೆ. ಕುಣಿಗೆ ಪೂಜೆ ಮಾಡಿ ಕೆಂಡ ಹಾಯುವ ಹರಕೆಗಳನ್ನು ಭಕ್ತರು ಈಡೇರಿಸುತ್ತಾರೆ. ನೃತ್ಯ, ಕಲಾವಿದರು

ಅಥವಾ ವೇಷಾಧಾರಿಗಳು ಕುಣಿಯ ಸುತ್ತ ಇಡೀ ರಾತ್ರಿ ನೃತ್ಯ ಮಾಡುತ್ತಾರೆ. ಈ ನೃತ್ಯವನ್ನು ಮೊಹರಂ ಕುಣಿತವೆಂದು ಕರೆಯುತ್ತಾರೆ. ಈ ಕುಣಿತದಲ್ಲಿ ಹಿರಿಯೂರು ಪಟ್ಟಣದ ಜನರು ಮತ್ತು ಸುತ್ತಮುತ್ತಲಿನ ಗ್ರಾಮದ ಜನರು ಭಾಗವಹಿಸುತ್ತಾರೆ.

ಮೊಹರಂ ಕುಣಿತ

ನೃತ್ಯಕಲಾವಿದರು ವಿವಿಧ ವೇಷಗಳನ್ನು ಧರಿಸಿ ನೃತ್ಯ ಮಾಡುವುದು ಮೊಹರಂ ವಿಶೇಷ. ಈ ನೃತ್ಯವನ್ನು ಹಾಡಿನ ಕುಣಿತ ಮತ್ತು ಹಲಗೆಯ ಕುಣಿತವೆಂದು. ಎರಡು ಪ್ರಕಾರಗಳಲ್ಲಿ ವಿಭಾಗಿಸುವುದು ಕಂಡುಬರುತ್ತದೆ.[೮] ಅಂದರೆ ಹಾಡಿಗೆ ತಕ್ಕಂತೆ ಅಥವಾ ಹಲಗೆಯ ನಾದಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕುಣಿಯುವುದು. ಪಟ್ಟಣದಲ್ಲಿ ಹಲಿಗೆ ಸದ್ದಿಗೆ ಕುಣಿಯುವ ಹುಲಿ, ಅಳ್ಳೊಳ್ಳಿ, ಬವ್ವಾ ವೇಷಧಾರಿಗಳು ಮೊಹರಂನಲ್ಲಿ ವಿಶೇಷವಾಗಿ ಕಂಡುಬರುತ್ತಾರೆ. ಇವರು ಮುಖಕ್ಕೆ ಕಪ್ಪು ಮಸಿ, ಬಳಿದು, ಸೊಂಟಕ್ಕೆ ಗೆಜ್ಜೆಸರ, ತಲೆಗೆ ಟೋಪಿ ಕೈಯಲ್ಲಿ ಬಟ್ಟೆ ಹಿಡಿದು ಹಲಗೆ ಸದ್ದಿಗೆ ತಕ್ಕಂತೆ ಕುಣಿಯುತ್ತಾರೆ. ಇಂತಹ ವೇಷಧಾರಿಗಳು ಐದು ದಿನಗಳ ಕಾಲ ಬೆಳಿಗ್ಗೆ ಹಿಂದ ಸಂಜೆಯವರೆಗೆ ಮನೆ-ಮನೆಗೆ ತೆರಳಿ ಕುಣಿದು ಅವರಿಂದ ಕಾಣಿಕೆ ಪಡೆಯುವುದು ವಾಡಿಕೆ. ಇದೇ ರೀತಿ ಹಿರಿಯೂರು ಪಟ್ಟಣದಲ್ಲಿ ಸಮವಸ್ತ್ರ ಧರಿಸಿದ ಯುವಕರು ಕೈಯಲ್ಲಿ ಗದೆ, ಛತ್ರಿ, ಕೊರಳಲ್ಲಿ ಹಾರ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಮಟೆ ಅಥವಾ ಹಲಗೆಯ ಸದ್ದಿಗೆ ತಕ್ಕಂತೆ ಹೆಜ್ಜೆ ಹಾಕುವುದು ಕಂಡುಬರುತ್ತದೆ.

ಇವರ ಕುಣಿತವು ಯುದ್ದದಲ್ಲಿ ಇಮಾಂಹುಸೇನ್ ವಿರುದ್ದ ಯಜೇದನ ಮತ್ತು ಸೈನಿಕರು ಗೆದ್ದ ನೆನಪಿಗಾಗಿ ಹಲಗೆಯ ನಾದಕ್ಕೆ ಹೆಜ್ಜೆಯನ್ನು ಹಾಕುತ್ತಾ ಕುಣಿಯುವ ದೃಶ್ಯವನ್ನು ನೆನಪಿಸುತ್ತದೆ. ಇದನ್ನು ಕೆಲವು ಪ್ರದೇಶಗಳಲ್ಲಿ ಇಮಾಂಹುಸೇನ್ ಮತ್ತು ಅವರ ಅನುಯಾಯಿಗಳಾದ ಹುತಾತ್ಮರ ಬದುಕನ್ನು ಕುರಿತು ಶ್ಲೋಕ ಗೀತೆಗಳನ್ನು ಕಟ್ಟಿ ಹಾಡುತ್ತಾರೆ.

ನಾವನ್

ಸಂಕಷ್ಟಗಳಿಗೆ ಅಥವಾ ರೋಗಗಳಿಗೆ ಒಳಗಾಗಿರುವ ವ್ಯಕ್ತಿಗಳನ್ನು ಮೌಲ್ಲಾಗಳು ಮೊಹರಂ ಹಬ್ಬದ ಸಂದರ್ಭದಲ್ಲಿ ಎಲೆ, ಅಡಿಕೆ, ಬೂದಿ, ನಿಂಬೆಹಣ್ಣನ್ನು ಅವರ ತಲೆಯ ಮೇಲೆ ಇಟ್ಟು ನೀರನ್ನು ಹಾಕಿ ನವಿಲು ಗರಿಗಳಿಂದ ತಲೆಸವರಿ ಆಶೀರ್ವಾದ ಮಾಡುತ್ತಾರೆ ಇದನ್ನು ನಾವನ್ ಎಂದು ಕರೆಯುತ್ತಾರೆ. ಆನೇಕ ಜನರು ಅಂದು ಹಿರಿಯೂರು ಪಟ್ಟಣದಲ್ಲಿ ಮೌಲ್ಲಾಗಳಿಂದ ನಾವನ್ ಪದ್ಧತಿಯನ್ನು ಆಚರಿಸಿಕೊಂಡಿದ್ದು ಕಂಡುಬಂದಿತು. ಹಿಂದೂ-ಮುಸ್ಲಿಂ ಭಾವೈಕ್ಯತಗೆಯ ಪ್ರತೀಕವಾದ ಮೊಹರಂ ಹಬ್ಬವನ್ನು ಮುಸ್ಲಿಂರು ಹೊಸ ವರ್ಷವೆಂದು ಭಾವಿಸುವರು, ಮುಸ್ಲಿಂರು ಹನ್ನೆರಡು ತಿಂಗಳುಗಳಲ್ಲಿ ಮೊಹರಂ ಮೊದಲನೆಯದು. ಈ ತಿಂಗಳ ಮೊದಲ ಹತ್ತುದಿನ ಪವಿತ್ರ ಧರ್ಮರಕ್ಷಣೆಗಾಗಿ ಯುದ್ಧದಲ್ಲಿ ಮಡಿದವರ ಸ್ಮರಣಾರ್ಥವಾಗಿ ಪೀರಲುಗಳನ್ನಾಗಿ

ಮಸೀದಿಯಲ್ಲಿಟ್ಟು ಪೂಜಿಸುವುದು ಗಮನಾರ್ಹ. ಈ ಹಬ್ಬವನ್ನು ಕ್ರಿ.ಶ. ೮ನೇ ಶತಮಾನದಲ್ಲಿ ಮುಸ್ಲಿಂಮರು ಭಾರತದಲ್ಲಿ ಆಚರಿಸತೊಡಗಿರುವುದು ಸಾಹಿತ್ಯಿಕ ಕೃತಿಗಳಿಂದ ತಿಳಿದುಬರುತ್ತದೆ. ಮೊಹರಂ ಹಬ್ಬವನ್ನು ಮಾನವೀಯ ಮೌಲ್ಯ ಮತ್ತು ಸರ್ವಕಾಲಿಕ ಸತ್ಯದ ಹೋರಾಟದ ಪ್ರತೀಕವಾಗಿ ಇಂದಿಗೂ ಆಚರಿಸಿಕೊಂಡು. ಹೀಗಾಗಿ ಈ ಹಬ್ಬದ ವಿಧಿ-ವಿಧಾನಗಳು ಊರಿಂದೂರಿಗೆ ಹಾಗೂ ಜನರಿಂದ ಜನಕ್ಕೆ ವಿಭಿನ್ನವಾಗಿರುವುದನ್ನು ಕಾಣಬಹುದು.

ಪಾಂಜಾವಿಸರ್ಜನೆ

ಮೊಹರಂ ಕೊನೆಯ ಹತ್ತನೇ ದಿನ ಇಮಾಂಹುಸೇನರು ವೀರ ಮರಣ ಹೊಂದಿದ ನೆನಪಿಗಾಗಿ ಅತ್ಯಂತ ವೈಭವದಿಂದ ಆಚರಿಸುವರು. ಅಂದು ಮಸೀದಿಯಲ್ಲಿ ಹುಸೇನ-ಹುಸೇನರಿಗೆ ಅಭಿಷೇಕ, ನೈವೇದ್ಯ, ಮಂಗಳಾರತಿಯನ್ನು, ಅರ್ಪಿಸುತ್ತಾರೆ. ಭಕ್ತರು ಇಷ್ಟಾರ್ಥ ಸಿದ್ದಿಗಾಗಿ ಅಂದು ವಿವಿಧ ಬೇಡಿಕೆಯನ್ನು ದೇವರಲ್ಲಿ ಇಡುತ್ತಾರೆ. ಇವರ ಬೇಡಿಕೆಗಳು ಈಡೇರಿದರೆ ಮರುವರ್ಷ ಮೊಹರಂ ವೇಳೆ ಪಾಂಜಾಗಳನ್ನು ಮಾಡಿಸಿ ಮಸೀದಿಗೆ ನೀಡುತ್ತಾರೆ.

ಅಲ್ಲದೇ ಇನ್ನೂ ಕೆಲವು ಭಕ್ತರು ಬಟ್ಟೆ, ಕೆಂಪು ಸಕ್ಕರೆ, ಲೋಹದ ಕುದುರೆ, ಬೆಳ್ಳಿ, ಛತ್ರಿ, ಹಾಗೂ ಹೂಗಳನ್ನು ನೀಡುತ್ತಾರೆ. ಸಂಜೆ ಐದು ಗಂಟೆಗೆ ಹಸೇನ-ಹುಸೇನ ಪ್ರತಿಮೆಗಳನ್ನು ಹಿರಿಯೂರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದ ನಂತರ ವೇದಾವತಿ ನದಿಯಲ್ಲಿ ಪಾಂಜಾಗಳನ್ನು ವಿಸರ್ಜಿಸುತ್ತಾರೆ. ನೀರಿನಲ್ಲಿ ತೊಳೆದು ಪೀರ್‌ಗಳನ್ನು ಕಟ್ಟಿ ಅದಕ್ಕೆ ಬಟ್ಟೆಸುತ್ತಿ ತಂದು ಮಸೀದಿಯಲ್ಲಿ ಇಡುವುದರೊಂದಿಗೆ ಮೊಹರಂ ಹಬ್ಬ ಕೊನೆಗೊಳ್ಳುವುದನ್ನು ಕಾಣಬಹುದು.

೫.೨ ಜಾತ್ರೆ-ಉತ್ಸವಗಳು

ಜಾತ್ರೆ ಪದದ ಅರ್ಥ

ಕೃಷಿ ಪ್ರಧಾನವಾದ ಬಹುಮುಖ ಸಂಸ್ಕೃತಿಯನ್ನು ಹೊಂದಿದ ಭಾರತ ದೇಶದಲ್ಲಿ ಜನರು ತಮ್ಮ ಬಿಡುವಿನ ಸಂದರ್ಭದಲ್ಲಿ ಗುಂಪುಗಳಾಗಿ ಸೇರಿ ತಮ್ಮ ಕಷ್ಟ-ಸುಖಗಳನ್ನು ಹಂಚಿಕೊಳ್ಳುವುದು ಇನ್ನೂ ಹಲವಾರು ಕೆಲಸ ಕಾರ್ಯಗಳ ಬದಲಾವಣೆ ಮಾಡಿಕೊಳ್ಳುವುದು ಕಾಣುತ್ತೇವೆ. ಈ ಎಲ್ಲಾ ಕೆಲಸಗಳಿಗೆ ಜನಪದರು ಒಂದು ನಿರ್ದಿಷ್ಟವಾದ ಸ್ಥಳ ರೂಪಿಸಿಕೊಂಡು ಅವುಗಳನ್ನು ದೇವರ ಸ್ಥಳ/ಧಾರ್ಮಿಕ ಕ್ಷೇತ್ರಗಳೆಂದು ಕರೆದರು ಭಾರತ ದೇಶವು ವಿಶಾಲವಾದುದರಿಂದ ಹಲವಾರು ಬುಡಕಟ್ಟುಗಳು ಹೊಂದಿರುವುದರ ಪ್ರಯುಕ್ತ ಪ್ರತಿಯೊಂದು ಗ್ರಾಮದಲ್ಲಿ ಒಂದಿಲ್ಲದೊಂದು ದೇವರಗುಡಿ ಗುಡಾರ ಊರ ಹೊರಗೆ ಆಗಲಿ ಊರ ಮಧ್ಯದಲ್ಲಿಯಾಗಲಿ ಇರುವುದು ಕಂಡುಬರುತ್ತದೆ. ಈ ದೇವರುಗಳ ಆರಾಧನೆ, ಆಚರಣೆ, ಜಾತ್ರ-ಉತ್ಸವಗಳು ಒಂದು ನಿರ್ದಿಷ್ಟ

ಕಾಲದಲ್ಲಿ ನಿಯಮಿತವಾಗಿ ಊರ ಜನರು ನೆರೆಹೊರೆಯವರು ರಕ್ತ ಸಂಬಂಧಿಗಳು ಸೇರಿ ನೆರವೇರಿಸುವ ಆಚರಣೆಗೆ ಜಾತ್ರೆ ಎಂದು ಕರೆಯುತ್ತಾರೆ.[೯]

ಜಾತ್ರೆ ಪದದ ನಿಷ್ಪತ್ತಿ

"ಜಾತ್ರೆ" ಎಂಬ ಪದ "ಯಾತ್ರೆ" ಎಂಬ ಸಂಸ್ಕೃತ ಪದದ ತದ್ಭವ ರೂಪವಾಗಿದೆ. ಜಾತ್ರೆ 'ಪರಿಸೆ' 'ಪರ್ಷೆ' ಈ ಪದಗಳು ಸಹ ಕನ್ನಡಕ್ಕೆ ಬಂದಿರುವ ಸಂಸ್ಕೃತ ಪದಗಳೇ ಆಗಿವೆ. ಸಂಸ್ಕೃತದ 'ಪರಿಷತ್' ಪದ ಪರಿಭಾಷೆ ಪರ್ಕ್ಷೆಯಾಗಿ ಕನ್ನಡದಲ್ಲಿ ಬಳಕೆಯಾಗುತ್ತದೆ. 'ಜಾತ್ರೆ' 'ಯಾತ್ರೆ' ಎಂಬ ಎರಡು ಪದಗಳ ನಡುವಿನ ಸಂಬಂಧದ ಬಗ್ಗೆ ವಿದ್ವಾಂಸರು ಚಿಂತಿಸಿರುವುದನ್ನು ಗಮನಿಸುವುದಾದರೆ, ಯಾತ್ರಾ ಸ್ಥಾನಗಳೆಲ್ಲಾ ಜಾತ್ರೆಯ ಸ್ಥಳಗಳಾಗಲಿಕ್ಕಿಲ್ಲ ಆದರೆ ಜಾತ್ರೆಯ ಸ್ಥಳಗಳೆಲ್ಲಾ ಸಾಮಾನ್ಯವಾಗಿ ಯಾತ್ರಾ ಸ್ಥಳವಾಗಿರುತ್ತವೆ. ಇದಕ್ಕೆ ಸಮಂಜಸವಾಗಿ ಸಂಸ್ಕೃತದ ಒಂದು ಉಕ್ತವು ಹೀಗಿದೆ. "ಯಾನೇನ ತ್ರಾಯತ್ ಇತಿಯಾತ್ರಾ" ಇದರ ಅರ್ಥ ಪುಣ್ಯಕ್ಷೇತ್ರ ಧರ್ಶನಕ್ಕೆ ಹೋಗುವವರ ರಕ್ಷೆಯೇ ಯಾತ್ರೆಯಾಗಿದೆ. ನಿಘಂಟುಗಳು ಸಹ ಜಾತ್ರೆ ಕುರಿತಾಗಿ ಪುಣ್ಯಕ್ಷೇತ್ರದ ದರ್ಶನ ಮಾಡುವ ಯಾತ್ರೆಯೆಂದೇ ಉಲ್ಲೇಖಿಸಿರುವುದು ಗಮನಾರ್ಹವಾದ ವಿಷಯವಾಗಿದೆ. ಏಕೆಂದರೆ ಯಾತ್ರೆ ಎಂದರೆ ಯಾವುದೇ ಕಾರ್ಯದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ ಪುಣ್ಯಕ್ಷೇತ್ರ (ಧಾರ್ಮಿಕ ಕ್ಷೇತ್ರ)ಗಳ ದರ್ಶನ ಪಡೆಯುವುದಾಗಿದೆ. ಇದಕ್ಕೆ ನಿದರ್ಶನವಾಗಿ ನಮ್ಮ ಪೂರ್ವಜರು ವರ್ಷಕ್ಕೊಮ್ಮೆ ಇಂತಹ ಸ್ಥಳಗಳಿಗೆ ಒಂದು ನಿರ್ದಿಷ್ಟ ಸಮಯದಲ್ಲಿ ತಾವು ಬೇಡಿಕೊಂಡ ಹರಕೆಗಳನ್ನು ಸಲ್ಲಿಸಲು ಇಂತಹ ಸ್ಥಳಗಳಿಗೆ ಹೋಗುತ್ತಿದ್ದರು.

ಈ ಸ್ಥಳದಲ್ಲಿ ನರೆಯುವ ಜನ ಸಮೂಹಕ್ಕೆ ಜಾತ್ರೆ ಎಂದು ಕರೆಯುತ್ತಾರೆ. ಇಂದು ಇರುವಂತಹ ಸಾರಿಗೆ ಸೌಲಭ್ಯ ಹಾಗೂ ವಾಹನಗಳ ವ್ಯವಸ್ಥೆ ಅಂದು ಇರಲಿಲ್ಲ, ಇಂತಹ ಸಮಯದಲ್ಲಿ ಜನರು ಗುಂಪು ಗುಂಪಾಗಿ ಕಾಲ್ನಡಿಗೆಯಲ್ಲಿ, ಎತ್ತಿನ ಬಂಡಿಗಳಲ್ಲಿ ತಮ್ಮ ಅಗತ್ಯ ವಸ್ತುಗಳೊಂದಿಗೆ ಇಂತಹ ಜಾತೆಗಳಿಗೆ ತೆರಳುತ್ತಿದ್ದರು. ಆದರೆ, ಇಂದಿನ ಆಧುನಿಕ ಯುಗದ ಜಾತ್ರೆಗಳ ಸ್ವರೂಪ ಲಕ್ಷಣಗಳೇ ಬದಲಾಗಿವೆ. ವೈಜ್ಞಾನಿಕ ಯುಗದಲ್ಲೂ ಹಲವಾರು ಜಾತ್ರೆಗಳು ಪ್ರಾರಂಭವಾದರೆ ಜನರು ದೇವರ ಭಯ-ಭಕ್ತಿಯಿಂದ ಭಜನಾ ಮಂಡಳಿಯೊಂದಿಗೆ ಪಾದಯಾತ್ರೆ ಮಾಡುವುದು ಶ್ರೇಯಸ್ಕರ ಎಂದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಇದಕ್ಕೆ ಉದಾಹರಣೆಯಾಗಿ ಫಂಡರಾಪುರ ಜಾತ್ರೆ, ಶ್ರೀಶೈಲ ಮಲ್ಲಿಕಾರ್ಜುನ ಜಾತ್ರೆ ಇತ್ಯಾದಿ, ಈ ಜಾತ್ರೆಗಳಿಗೆ ಜನರು ಸಹಸ್ರಾರು ಸಂಖ್ಯೆಯಲ್ಲಿ ಪಾದಯಾತ್ರೈದರೆ ಹಳ್ಳಿಗಳಲ್ಲಿ ಜರುಗುವಂತಹ ಜಾತ್ರೆಗಳಿಗೆ ನೆರೆ-ಹೊರೆಯ ಹಳ್ಳಿಗಳಿಂದ ಜನರು ತಮ್ಮ ಹರಕೆಯ 'ಕುರುಹು' ಎಂದು ಭಾಪಿಸಿ ಇನ್ನೂ ನಡೆದುಕೊಂಡು ಹೋಗುವ ಪದ್ಧತಿ ಹಲವಾರು ಜಾತ್ರೆಗಳಲ್ಲಿ ಕಂಡುಬರುತ್ತದೆ.[೧೦]

ಜಾತ್ರೆಗಳ ಉಗಮ

ಜಾತ್ರೆಗಳ ಉಗಮದ ಬಗ್ಗೆ ನಿಖರವಾದಿ ಹೇಳುವುದೇ ಕಷ್ಟದ ಕೆಲಸ. ಆದರೆ ಲಭ್ಯವಿರುವ ಇತಿಹಾಸ ಜ್ಞಾನದಿಂದಲೂ ಊಹೆ ಮತ್ತು ಕ್ಲಪನೆಗಳಿಂದಲೂ ಇದು ಕುರಿತು ಬಹುಮಟ್ಟಿಗೆ ಹೇಳಲು ಪ್ರಯತ್ನ ಪಡಬಹುದಾಗಿದೆ. ಪಾಶ್ಚಿಮಾತ್ಯರಲ್ಲಿ feirae ಎಂಬ latin ಶಬ್ದದ ತದ್ಭವ fair ಎಂದು ಪರಿವರ್ತನೆಗೊಂಡು ವ್ಯಾಪಾರ ಕೇಂದ್ರಗಳನ್ನಾಗಿ ಜನರು ಸೇರಿ ತಮ್ಮ ವಹಿವಾಟುಗಳನ್ನು ಸಾದರಪಡಿಸಿಕೊಳ್ಳುತ್ತಿದ್ದರು. ಇವುಗಳು ವರ್ಷದ ನಿರ್ದಿಷ್ಟ ಕಾಲಾವಧಿಯಲ್ಲಿ ಜರುಗುವುದು ಕಂಡು ಪಾಶ್ಚಿಮಾತ್ಯ ಇತಿಹಾಸಕಾರರು ಇವುಗಳಿಗೆ ತಾತ್ಕಾಲಿಕ ಮಾರುಕಟ್ಟೆಗಳೆಂದು ವ್ಯಾಖ್ಯಾನಿಸಿದ್ದಾರೆ. ಆದರೆ ಅಲ್ಲಿಯೂ ಪ್ರಾಚೀನ ಕಾಲದಲ್ಲಿ ಜಾತ್ರೆಗಳು ದೈವ ಸನ್ನಿಧಿಯಲ್ಲಿ ನಡೆಯುತ್ತಿದ್ದವು ಮುಂದೆ ಅದೊಂದು ಧಾರ್ಮಿಕ ಸಂಪ್ರದಾಯವಾಗಿ ಬೆಳೆಯದೇ ಆರ್ಥಿಕ ಚಟುವಟಿಕೆಯಾಗಿ ಬೆಳೆಯಿತು. ಇಂತಹ ಸಂಪ್ರದಾಯಗಳು ಮಂದಗತಿಯಲ್ಲಿ ಸಾಗಿ ಬೆಳೆದು ಮುಂದೆ ಜಾತ್ರೆಯ ರೂಪ ತಾಳಿತು. ಇದು ಪಾಶ್ಚಿಮಾತ್ಯರಲ್ಲಿ ಜಾತ್ರೆಗಳ ಉಗಮದ ಬಗ್ಗೆ ಉಲ್ಲೇಖಿಸಿದರೆ ಭಾರತೀಯರಿಗೆ ಧರ್ಮವೇ ಮೂಲ ಪ್ರೇರಣೆ ಎನ್ನುವುದು ಸರಿಯಾದಿತು. ಇದರ ಹಿನ್ನೆಲೆಯಾಗಿ ಭಾರತೀಯ ಸಂಸ್ಕೃತಿ ಬೆಳೆದು ಬಂದ ಪರಂಪರೆ, ಇಲ್ಲಿ ವಾಸಿಸುವ ಜನ ಇವರ ಬದುಕಿನ ವೈಶಿಷ್ಟಗಳ ಆಧಾರದ ಮೇಲೆ ವಿದ್ವಾಂಸರು ಜಾತ್ರೆಗಳ ಉಗಮಕ್ಕೆ ತಮ್ಮದೇ ಆದ ಹೇಳಿಕೆಗಳನ್ನು ನೀಡಿದ್ದಾರೆ.[೧೧]

ಶಿವಾನಂದ ಗುಬ್ಬಣ್ಣನವರ ಪ್ರಕಾರ ಮಾನವ ಪ್ರಥಮ ಹಂತದಲ್ಲಿ ಮಂಗನಂತಿದ್ದು ಕಾಲ ಬದಲಾದಂತೆ ಸಮಾಜ ವಿಕಾಸಗೊಂಡಂತೆ, ಅವನಲ್ಲಿ ವಿಚಾರ ಮತ್ತು ತಿಳುವಳಿಕೆಗಳು ಬರತೊಡಗಿದವು ಹಾಗೂ ತನ್ನ ಹೊಟ್ಟೆ ಪಾಡಿಗಾಗಿ ಬೇಟೆಯಾಡುವುದನ್ನು ಶುರುಮಾಡಿದ ಅಲೆಮಾರಿ ಜೀವನವನ್ನು ಬಿಟ್ಟು ಬಿಡಾರ ಹಾಕಿ ನೆಲಸತೊಡಗಿದ ಭೂಮಿಯಲ್ಲಿ ಬೆಳೆಗಳನ್ನು ಬೆಳೆಯ ತೊಡಗಿದನು. ಅಂತಹ ಸಮಯದಲ್ಲಿ ಪ್ರಕೃತಿಯಲ್ಲಿ ಗಾಳಿ, ಮಳೆ, ಚಳಿ, ಬಿಸಿಲು, ಗುಡುಗು, ಮಿಂಚು, ಸಿಡಿಲು, ಭೂಕಂಪ, ಬೆಂಕಿ, ಬಿರುಗಾಳಿ, ಹುಟ್ಟು, ಸಾವಿನ ಪ್ರವಾಹ ಮುಂತಾದ ಅದ್ಭುತ ಕಾರ್ಯಗಳ ಕಾರಣವನ್ನು ಕಂಡುಹಿಡಿಯುವುದು ಅತನ ಬುದ್ದಿಶಕ್ತಿಗೆ ನಿಲುಕಲಿಲ್ಲ. ಇದನೆಲ್ಲಾ ಮಾಡುವವನು ಕಣ್ಣಿಗೆ ಕಾಣದಿದ್ದಾಗ ಅವನನ್ನೇ ದೇವರೆಂದು ನಂಬಿ ತಮಗೆ ಉಂಟಾದ ತೊಂದರೆ ಸಮಯದಲ್ಲಿ ಪೂಜಿಸುತ್ತಿದ್ದರು. ಇನ್ನೂ ಹಲವು ಇಂತಹ ನಂಬಿಕೆಗಳು ಅವರಲ್ಲಿ ಸೃಷ್ಟಿಗೊಂಡು ಮುಂದೆ ಇವುಗಳ ಧಾರ್ಮಿಕ ಇತಿಮಿತಿಗಳ ಒಳಗೆ ಬೆಳೆದು ಹೆಮ್ಮರವಾಗಿ ಸಮಾಜದ ಸ್ಥಾಪನೆಗೆ ಸ್ವಲ್ಪಮಟ್ಟಿಗೆ ದಕ್ಕೆಯನ್ನುಂಟು ಮಾಡಿದವು. ಹೀಗೆ ಜಾತ್ರೆಗಳು ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡವು ಎಂಬುವುದು ಪ್ರಾಣಿಶಾಸ್ತ್ರಜ್ಞರಾದ ಶಿವಾನಂದ ಗುಬ್ಬಣ್ಣನವರ ಅಭಿಪ್ರಾಯವಾಗಿದೆ.

ದೇ.ಜ.ಗೌ. ರವರು ವಿಮರ್ಶಾತ್ಮಕವಾಗಿ ಜಾತ್ರೆಗಳ ಬೆಳವಣಿಗೆಗಳ ಕುರಿತು ಪ್ರಾರಂಭದಲ್ಲಿ ಯಾತ್ರೆ ಅಥವಾ ಜಾತ್ರೆ ಸುಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ನಡೆಯುತ್ತಿತ್ತೆಂದು ತೋರುತ್ತದೆ. ಪಾಪ ಪರಿಹಾರಕ್ಕಾಗಿ ದೇಶದ ಮೂಲೆ ಮೂಲೆಗಳಿಂದಲೂ ಜನ ಅಂತಹ ಕ್ಷೇತ್ರಗಳಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆಯುತ್ತಿದ್ದರು. ಕಾಲಾಂತರದಲ್ಲಿ ಕೆಲವು ಹಳ್ಳಿಗಳಲ್ಲಿ ನಿಯತ ಅಥವಾ ಅನಿಯತ ಕಾಲಗಳಲ್ಲಿ ಅದ್ದೂರಿಯಿಂದ ಜರುಗುತ್ತಿದ್ದ ದೊಡ್ಡ ದೊಡ್ಡ ಹಬ್ಬಗಳಲ್ಲಿ ನೆಂಟರಿಷ್ಟರ ಜೊತೆಗೆ ಶ್ರದ್ಧಾವಂತ ಜನರು ಬರಲಾರಂಭಿಸಿದರು. ದೇವರು ಪ್ರಭಾವ ಶಾಲಿಯಾದರಂತೂ ಜನರ ಗದ್ದಲವೂ ಅಧಿಕವಾಗುತ್ತಿತ್ತು. ಒಂದು ದಿನದ ಹಬ್ಬ ಮೂರು ದಿನಗಳಿಗೆ ಹೆಚ್ಚು ಹೆಚ್ಚುತ್ತಾ ಕುಣಿತ ಮರೆತಗಳು ಕೂಡಿಕೊಂಡು ಮದ್ದು ಪಟಾಕಿಗಳ ವೈಭವ ಆಕರ್ಷಕವಾಗಿದ್ದು ಅಂಗಡಿ ಮುಂಗಟ್ಟುಗಳು ಜಮಾಯಿಸಿ ಜನ ಮರುಳಾಗಿ ಪರೀಕ್ಷೆ ಸೇರಿದಾಗ ಅದು ಜಾತ್ರೆಯೆಂಬ ನಾಮಕರಣ ಪಡೆಯಿತು. ಕೊನೆಗೆ ರೈತರ ಜೀವನಾಡಿಯಂತಿರುವ ದನಗಳ ನೆರವಿನೊಂದಿಗೆ ಸಂಘಟನೆಗೊಂಡಾಗ ಆ ಪದದ ಅರ್ಥ ವಿಶಾಲವಾಯಿತು. ಧಾರ್ಮಿಕ ಸ್ವರೂಪದ ಹಬ್ಬ ಕಾಲಕ್ರಮೇಣ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪಡೆದು ಕೊನೆಗೆ ವಾಣಿಜ್ಯ ಮುಖವನ್ನು ರೂಪಿಸಿಕೊಂಡಾಗ ಜಾತ್ರೆಯಾಯಿತು.[೧೨]

ಜಾತ್ರೆಗಳ ಮಹತ್ವ

ಜಾತ್ರೆಗಳು ಗ್ರಾಮೀಣ ಜನರ ಬದುಕಿನ ಒಂದು ಪ್ರಮುಖ ಅಂಗವಾಗಿವೆ. ವರ್ಷದ ನಿರ್ದಿಷ್ಟ ಸಮಯದಲ್ಲಿ ಜಾತ್ರೆ ಜರುಗುವುದರಿಂದ ಆ ಗ್ರಾಮದ ಜನರಲ್ಲದೇ ನೆರೆಯ ಹಳ್ಳಿಗಳಿಂದ ಬರುವಂತಹ ಜನರು ಇದರಲ್ಲಿ ಭಾಗವಹಿಸಿ ಹಲವಾರು ಪ್ರಯೋಜನಗಳನ್ನು ಪಡೆಯುವುದನ್ನು ಗಮನಿಸಬಹುದಾಗಿದೆ.

ಜಾತ್ರೆಗಳು ಆಯಾ ದೇವ ಭಕ್ತರನ್ನು ಅವಲಂಭಿಸಿ ಜರುಗುವುದರಿಂದ ಭಕ್ತರನ್ನಲ್ಲದೆ ಎಲ್ಲ ಧರ್ಮೀಯರನ್ನು ಒಂದು ಕಡೆ ಸೇರುವಂತೆ ಮಾಡುತ್ತದೆ. ಜನಪದರು ತಮಗೆ ಉದ್ಭವಿಸಿದ ಸಮಸ್ಯೆಗಳಿಂದ ಕ್ಷಾಮ, ಬರಗಾಲ, ಕಾಯಿಲೆ, ಮಳೆಯ ಅಭಾವದಿಂದಾಗಿ, ಬಾವಿಗಳ ನೀರಿನ ಮಟ್ಟ ಕಡಿತಗೊಂಡಲ್ಲಿ ಇವುಗಳ ಪರಿಹಾರಕ್ಕಾಗಿ, ದೇವರ ಸನ್ನಿಧಿಯಲ್ಲಿ ಹರಕೆಗಳಲ್ಲಿ ಜನಪದರು ಹೊಂದಿದ ಒಲುಮೆಯ ಸಹಕಾರದಿಂದ ಜಾತ್ರೆಗಳು ಜರುಗುತ್ತವೆ. ಜಾತ್ರೆಗಳು ಧರ್ಮವನ್ನು ಜನಪ್ರೀಯಗೊಳಿಸುವುದಂದಲ್ಲದೇ ಸಾರ್ವಜನಿಕ ಕ್ಷೇಮಾಭಿವೃದ್ಧಿಯನ್ನು ಉಂಟುಮಾಡುತ್ತದೆ. ಹಾಗೆಯೇ ಪ್ರಸ್ತುತ ಹಿರಿಯೂರು ಪಟ್ಟಣದಲ್ಲಿ ನಡೆಯುವ ಜಾತ್ರೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ದಕ್ಷಿಣಕಾಶಿ ಶ್ರೀತೇರುಮಲ್ಲೇಶ್ವರ ಸ್ವಾಮಿಯ ಜಾತ್ರೆ ಮಹೋತ್ಸವ

'ದಕ್ಷಿಣ ಕಾಶಿ' ಎಂದು ಪ್ರಸಿದ್ಧಿ ಪಡೆದಿರುವ ನಗರದ ಶ್ರೀತೇರುಮಲ್ಲೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವವು ಪ್ರತಿವರ್ಷ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಅಂದರೆ

ಮಾಘಮಾಸದಲ್ಲಿ ನಡೆಯುವುದಾಗಿದೆ. ಶ್ರೀತೇರುಮಲ್ಲೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವವು ಐತಿಹಾಸಿಕ ಮಹತ್ವವುಳ್ಳದ್ದಾಗಿದ್ದು ಚಿತ್ರದುರ್ಗ ಪಾಳೆಗಾರರ ಕೆಂಚಪ್ಪನಾಯಕನ ಕಾಲದಿಂದಲೂ ಜಾತ್ರೆಯೂ ಪ್ರತಿವರ್ಷ ನಡೆದುಕೊಂಡು ಬಂದಿದೆ. ಶ್ರೀತೇರುಮಲ್ಲೇಶ್ವರ ಜಾತ್ರೆಯು ಕಂಕಣಧಾರಣೆಯಿಂದ ಆರಂಭವಾಗಿ ೧೬ ದಿನಗಳ ಕಾಲ ನಡೆಯುವುದಾಗಿದೆ. ಪ್ರತಿದಿನವು ಒಂದೊಂದು ವಿಶೇಷ ಆಚರಣೆಯಿದ್ದು ಕಂಕಣವಾದ ನಂತರದ ೯ ದಿನಗಳ ರಾತ್ರಿ ೮.೦೦ ಗಂಟೆ ಸುಮಾರಿಗೆ ಪ್ರತಿದಿನ ಒಂದೊಂದು ವಾಹನಗಳ ಮೇಲೆ ಶ್ರೀಸ್ವಾಮಿಯ ಉತ್ಸವ ಮೂರ್ತಿಯನ್ನು ತೇರು ಬೀದಿಯಲ್ಲಿ ಮೆರವಣಿಗೆ ಮಾಡಲಾಗುತ್ತದೆ.

ಹೀಗೆ ಒಂಬತ್ತು ದಿನಗಳ ಕಾಲ ಗಿಳಿವಾಹನ, ಗಂಡ-ಬೇರುಂಡವಾಹನ, ನವಿಲುವಾಹನ, ಸಿಂಹವಾಹನ, ನಂದಿವಾಹನ, ಸರ್ಪವಾಹನ ಅಶ್ವವಾಹನ, ರಜವಾಹನ, ಬಸವವಾಹನಗಳ ಮೇಲೆ ಉತ್ಸಮೂರ್ತಿಗಳನ್ನು ಕುಳ್ಳಿರಿಸಿ ಉತ್ಸವಗಳನ್ನು ಆಚರಿಸಲಾಗುತ್ತದೆ. ಬಸವ ವಾಹನದ ಉತ್ಸವವನ್ನು ದೊಡ್ಡ ಉಚ್ಚಾಯದ ದಿನವಾಗಿ ಅಂದು ಅಕ್ಕಿ ತಂಬಿಟ್ಟಿನ ಆರತಿಯನ್ನು ಸುಮಂಗಲಿಯದಿಂದ ಪೂಜಿಸುವರು, ಭಕ್ತಾದಿಗಳು ಮುಂಚಿತವಾಗಿಯೇ ತಮ್ಮ ಹೆಸರನ್ನು ನೊಂದಾಯಿಸಿ ಕುಟುಂಬ ಸಮೇತವಾಗಿ ಆಗಮಿಸಿ ಪೂಜಿಸಲ್ಲಿಸುತ್ತಾರೆ.

ನಂತರ ಗಜವಾಹನೋತ್ಸವ (೮ನೇ ದಿನ) ದಂದು ರಾತ್ರಿ ರಥಗಳನ್ನು ಸ್ಥಾಪನೆ ಮಾಡಿ ಮೂರು ರಥಗಳಿಗೂ ೨ ಕಳಶಗಳನ್ನು ಇಟ್ಟು ರಥಗಳನ್ನು ಸಿದ್ದಪಡಿಸಲಾಗುತ್ತದೆ. ನಂತರ ಬಸವವಾಹನೋತ್ಸವ, ಶಿವಧನಸ್ಸಿನ ಪೂಜೆ, ಬ್ರಹ್ಮ ರಥೋತ್ಸವ ಹೀಗೆ ತೇರುಮಲ್ಲೇಶ್ವರ ಸ್ವಾಮಿ ಜಾತ್ರಾಮಹೋತ್ಸವವು ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯುವುದಾಗಿದೆ. ಈ ಜಾತ್ರೆಗೆ ರಾಜ್ಯದ ವಿವಿಧ ಭಾಗಗಳಿಂದ ಭಕ್ತಾದಿಗಳು ಆಗಮಿಸಿ ಜಾತ್ರಾ ಉತ್ಸವದಲ್ಲಿ ಪಾಲ್ಗೊಂಡು ಸ್ವಾಮಿಯ ಕೃಪೆಗೆ ಪಾತ್ರರಾಗುವವರು.

ಜಾತ್ರೆಯ ವಿಶೇಷ ಆಚರಣೆಗಳು/ಸಂಪ್ರದಾಯಗಳು

ಕಂಕಣ ಕಲ್ಯಾಣೋತ್ಸವ

ಮಾಘಮಾಸದ ಅಮವಾಸ್ಯೆಯ ಹಿಂದಿನ ದಿನ ಕಂಕಣವನ್ನು ಕಟ್ಟಲಾಗುತ್ತದೆ. ಕಂಕಣ ಮಹೋತ್ಸವದಂದು ಶ್ರೀತೇರುಮಲ್ಲೇಶ್ವರ, ಉಮಾಮಹೇಶ್ವರ, ಚಂದ್ರಮೌಳೇಶ್ವರ ಸ್ವಾಮಿಯನ್ನು ದೇವಾಲಯದಲ್ಲಿ ಒಂದೆಡೆ ಕೂರಿಸಿ ಜಂಗಮರಿಂದ, ಅರ್ಚಕರಿಂದ, ಕೈವಾಡಸ್ತರಿಂದ ವೇದಾವತಿ ನದಿಯಲ್ಲಿ ಗಂಗಾಪೂಜೆಯನ್ನು ನೆರವೇರಿಸಿದ ನಂತರ ಇವರ ಸಾಕ್ಷಿಯಾಗಿ ಅರ್ಚಕರು ಕಂಕಣವನ್ನು ಸ್ವಾಮಿಗೆ ಮುಟ್ಟಿಸಿ ಪಾರ್ವತಿ ದೇವಿಗೆ ಕಟ್ಟಲಾಗುತ್ತದೆ. ಈ ಪದ್ಧತಿಯನ್ನು ಕಂಕಣಧಾರಣೆ ಅಥವಾ ಕಂಕಣ ಕಲ್ಯಾಣೋತ್ಸವ ಎಂದು ಕರೆಯಲಾಗುತ್ತದೆ.

ಈ ಆಚರಣೆಯ ನಂತರ ದೇವಾಲಯದ ಜಾತ್ರಾ ಉತ್ಸವ ಆಚರಣೆ ಸಮಿತಿಯವರು ಕಂಕಣ ಕಟ್ಟಿಕೊಳ್ಳುತ್ತಾರೆ. ಈ ಕಂಕಣ ಕಟ್ಟಿಕೊಂಡವರು ಜಾತ್ರೆಯು ಮುಗಿಯುವವರೆಗೂ ಮದ್ಯ-ಮಾಂಸಹಾರ ಸೇವಿಸದೆ ಕಟ್ಟುನಿಟ್ಟಿನ ಆಚರಣೆಯಲ್ಲಿರಬೇಕಾಗುತ್ತದೆ. ಹೀಗೆ ಕಂಕಣೋತ್ಸವವು ಜಾತ್ರೆಗೆ ಅಧಿಕೃತ ಚಾಲನೆ ನೀಡುವ ಆಚರಣೆಯಾಗಿದ್ದು ಅಂದಿನಿಂದ ಶ್ರೀಸ್ವಾಮಿಗೆ ಪ್ರತಿನಿತ್ಯ ವಿಶೇಷ ಉತ್ಸವಗಳು ಬ್ರಹ್ಮ ರಥೋತ್ಸವ ನಡೆಯುವವರೆಗೂ ನಡೆಯುವುದಾಗಿದೆ.

ಕಂಕಣೋತ್ಸವ ನಂತರ ೯ ದಿನಗಳ ಕಾಲ ತೇರುಮಲ್ಲೇಶ್ವರರ, ಉಮಾಮಹೇಶ್ವರ, ಚಂದ್ರಮೌಳೇಶ್ವರ ದೇವರುಗಳನ್ನು ವಿವಿಧ ವಾಹನಗಳಲ್ಲಿ ಕೂರಿಸಿಕೊಂಡು ಚಿಕ್ಕಪೇಟೆಯಿಂದ ಶ್ರೀಮೈಲಾರಲಿಂಗೇಶ್ವರ ದೇವಾಸ್ಥಾನದ ಮುಂಭಾಗದ ಮೂಲಕ ಸಿದ್ದನಾಯಕ ವೃತ್ತದ ಊರ ಬಾಗಿಲ ಮೂಲಕ ಮೆರವಣಿಗೆಯಲ್ಲಿ ಕೊಂಡ್ಯೊಯ್ದು ದೇವಾಲಯಕ್ಕೆ ಕರೆತರಲಾಗುತ್ತದೆ. ನಂತರ ಪ್ರಸಾದ ವಿನಿಯೋಗವಿರುತ್ತದೆ. ಹೀಗೆ ೯ ದಿನಗಳವರೆಗೆ ೯ ಬಗೆಯ ವಾಹನಗಳಲ್ಲಿ ಶ್ರೀಸ್ವಾಮಿಯ ಉತ್ಸವಗಳನ್ನು ನಡೆಸಲಾಗುತ್ತದೆ. ಈ ಉತ್ಸವಗಳ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ತಿಳಿಸಲಾಗುತ್ತದೆ.

ಮಂಟಪ ಉತ್ಸವ

ಕಂಕಧಾರಣೆಯ ನಂತರ ಶ್ರೀಸ್ವಾಮಿಯ ಉತ್ಸವ ಮೂರ್ತಿಯನ್ನು ಪುಷ್ಪಾಲಂಕೃತ ಚಿಕ್ಕ ಪೇಟೆಯಿಂದ ಮೈಲಾರಲಿಂಗೇಶ್ವರ ದೇವಾಲಯದ ಮುಂಭಾಗದ ಮೂಲಕ ಹಾದು ಸಿದ್ಧನಾಯಕ ವೃತ್ತದ ಬಳಿಯ ದ್ವಾರಬಾಗಿಲ ಮೂಲಕ ದೇವಾಲಯದವರೆಗೂ ಮೆರವಣಿಗೆಯಲ್ಲಿ ಸ್ವಾಮಿಯನ್ನು ಕೊಂಡೊಯ್ಯಲಾಗುತ್ತದೆ. ಈ ಆಚರಣೆಯನ್ನು 'ಮಂಟಪ ಉತ್ಸವ' ಎಂದು ಕರೆಯಲಾಗಿದೆ. ಉತ್ಸವ ನಂತರ ಸ್ವಾಮಿಯನ್ನ ಮಂಟಪದಿಂದ ಇಳಿಸಿ ವಿಶೇಷ ಪೂಜೆ ಸಲ್ಲಿಸಿ ಹುರಿದುಂಬಿಸಿ ಗುಡಿದುಂಬಿದಲಾಗುತ್ತದೆ. ಹೀಗೆ ೯ ದಿನಗಳವರೆಗೆ ೯ ಬಗೆಯ ವಾಹನಗಳಲ್ಲಿ ಶ್ರೀಸ್ವಾಮಿಯ ಉತ್ಸವವು ನಡೆಯುವುದಾಗಿದೆ.

ಗಿಳಿವಾಹನೋತ್ಸವ

ಜಾತ್ರೆಯ ಎರಡನೇ ದಿನ ಶ್ರೀಸ್ವಾಮಿಯ ಉತ್ಸವ ಮೂರ್ತಿಯನ್ನು ಪುಷ್ಪಾಲಂಕೃತ ಚಿಕ್ಕ ರಥದಲ್ಲಿ ಗಿಳಿಯ ಪ್ರತಿಕೃತಿಯ ಮೇಲೆ ಕೂರಿಸಿ ಪೂಜೆ ಸಲ್ಲಿಸಿ ನೂರಾರು ಭಕ್ತರ ಸಮ್ಮುಖದಲ್ಲಿ ಮೇಳ ವಾದ್ಯಗಳೊಂದಿಗೆ ರಾತ್ರಿ ೮ ಗಂಟೆ ಸುಮಾರಿಗೆ ನಿಗಧಿಪಡಿಸಲಾದ ಮಾರ್ಗ (ಮೇಲೆ ಸೂಚಿಸಿದ) ಮೆರವಣಿಗೆಯನ್ನು ನಡೆಸಲಾಗುತ್ತದೆ. ಉತ್ಸವದ ನಂತರ ಸ್ವಾಮಿಯನ್ನು ಮಂಟಪದಿಂದ ಇಳಿಸಿ ವಿಶೇಷ ಪೂಜೆ ಸಲ್ಲಿಸಿ ಹುರಿದುಂಬಿಸಿ ಗುಡಿದುಂಬಿಸಲಾಗುತ್ತದೆ. ನಂತರ ಪೂಜೆ ಸಲ್ಲಿಸಿ ಪ್ರಸಾದ ವಿತರಣೆ ಮಾಡಲಾಗುತ್ತದೆ.

ಗಂಡ-ಬೇರುಂಢ ವಾಹನೋತ್ಸವ

ಜಾತ್ರೆಯ ಮೂರನೇ ದಿನ ಶ್ರೀಸ್ವಾಮಿಯ ಉತ್ಸವ ಮೂರ್ತಿಯನ್ನು ಪುಷ್ಪಾಲಂಕೃತ ಚಿಕ್ಕ ರಥದಲ್ಲಿ ಗಂಡ-ಬೇರುಂಡದ ಪ್ರಕೃತಿಯ ಮೇಲೆ ಕೂರಿಸಿ ಪೂಜೆ ಸಲ್ಲಿಸಿ ನೂರಾರು ಭಕ್ತರ ಸಮ್ಮುಖದಲ್ಲಿ ಮೇಳ ವಾದ್ಯಗಳೊಂದಿಗೆ ರಾತ್ರಿ ೮ ಗಂಟೆ ಸುಮಾರಿಗೆ ನಿಗಧಿಪಡಿಸಲಾದ ಮಾರ್ಗದಲ್ಲಿ ಮೆರವಣಿಗೆಯನ್ನು ನಡೆಸಲಾಗುತ್ತದೆ.

ಬಸವವಾಹನೋತ್ಸವ (ದೊಡ್ಡಉಚ್ಚಾಯ) ಅಕ್ಕಿ ತಂಬಿಟ್ಟಿನ ಆರತಿ

ಜಾತ್ರೆಯ ಹತ್ತನೇಯ ದಿನ ಅಂದರೆ ಒಂಬತ್ತು ವಾಹನೋತ್ಸವಗಳು ಮುಕ್ತಾಯವಾದ ನಂತರದ ದಿನ ಬಸವ ವಾಹನದ ಉತ್ಸವವನ್ನು ದೊಡ್ಡ ಉಚ್ಚಾಯದ ದಿನವಾಗಿ ಅಕ್ಕಿ ತಂಬಿಟ್ಟಿನ ಆರತಿಯನ್ನು ಮಾಡಿ ಸುಮಂಗಲಿಯರು ಪೂಜೆ ಸಲ್ಲಿಸುವರು. ಅಂದು ರಾತ್ರಿ ೮ ಗಂಟೆಗೆ ವೇಳೆಗೆ ಅಡ್ಡ ಪಲ್ಲಕ್ಕಿಯನ್ನು ಸಿದ್ದಗೊಳಿಸಿ ಅಡ್ಡ ಪಲ್ಲಕ್ಕಿಯಲ್ಲಿ ಶ್ರೀತೇರುಮಲ್ಲೇಶ್ವರ, ಉಮಾಮಹೇಶ್ವರ, ಚಂದ್ರಮೌಳೇಶ್ವರ ಸ್ವಾಮಿಯನ್ನು ಕೂರಿಸಿ ಊರಿನ ಪ್ರಮುಖ ಬೀದಿಗಳಲ್ಲಿ ಮೇಳ ವಾದ್ಯಗಳೊಂದಿಗೆ ಮೆರವಣಿಗೆ ನಡೆಸಲಾಗುತ್ತದೆ. ಈ ಮೆರವಣಿಗೆಯಲ್ಲಿ ಮಡಿವಾಳರು ಪಂಜನ್ನು ಹಿಡಿದು ಮುಂದೆ ನಡೆಯುತ್ತಿದ್ದರೆ ಛಲವಾದಿ ಜನಾಂಗದವರು ಗಂಟೆ ಬಟ್ಟಲನ್ನು ಹಿಡಿದು ಮುಂದೆ ನಡೆಯುತ್ತಿರುತ್ತಾರೆ ಹಾಗೂ ವೀರಗಾಸೆಯವರ ಕುಣಿತ ಆಕರ್ಷಕವಾಗಿರುತ್ತದೆ. ಹೀಗೆ ಸ್ವಾಮಿಯ ಮೆರವಣಿಗೆಯಲ್ಲಿ ಹೋಗುವಾಗ ಮುತ್ತೈದೆಯವರು, ಮಹಿಳೆಯರು ಸ್ವಾಮಿಗೆ ಅಕ್ಕಿ ತಂಬಿಟ್ಟಿನ ಆರತಿಯನ್ನು ಮಾಡಿ ಪೂಜೆ ಸಲ್ಲಿಸುವರು ರಾತ್ರಿ ೯ ಗಂಟೆ ಸುಮಾರಿಗೆ ಶ್ರೀಸ್ವಾಮಿಯ ಪಲ್ಲಕ್ಕಿಯನ್ನು ಪುನಃ ದೇವಾಲಯಕ್ಕೆ ಕರೆತಂದು ವಿಶೇಷ ಪೂಜೆ ಸಲ್ಲಿಸಿ ಹುರಿದುಂಬಿಸಲಾಗುತ್ತದೆ. ನಂತರದ ಈ ಎಲ್ಲಾ ಕಾರ್ಯಕ್ರಮಗಳು ಮುಗಿದ ನಂತರ ಅದೇ ದಿನ ರಾತ್ರಿ ಮೂರು ರಥಗಳನ್ನು ಸಿದ್ಧಪಡಿಸುವರು. ನಂತರ ಬೆಳಿಗ್ಗೆ ಶಿವಧನಸ್ಸಿನ ಪೂಜೆಯ ನಂತರ ಶ್ರೀಸ್ವಾಮಿಯು ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ನಡೆಯುವುದಾಗಿದೆ.

ಮಹಾಭಿಷೇಕ ಶಿವಧನಸ್ಸಿನ ಗಂಗಾಸ್ನಾನ

ಬ್ರಹ್ಮರಥೋತ್ಸವದ ದಿನ ಶ್ರೀತೇರುಮಲ್ಲೇಶ್ವರ ಸ್ವಾಮಿಗೆ ಮಹಾಭಿಷೇಕವಾದ ನಂತರ ಶ್ರೀಸ್ವಾಮಿಯ ದೇವಾಲಯದಲ್ಲಿರುವ ಸುಮಾರು ೪೦ ಅಡಿ ಉದ್ದದ ಕಬ್ಬಿಣದ ಶಿವ ಧನಸ್ಸನ್ನು ಬೆಳಿಗ್ಗೆ ಗಂಗಾಪೂಜೆಗಾಗಿ ವೇದಾವತಿ ನದಿಗೆ ಕೊಂಡೊಯ್ಯಲಾಗುತ್ತದೆ. ಧನಸ್ಸಿಗೆ ವಿಶೇಷ ಪೂಜೆ ಸಲ್ಲಿಸುವ ಮುನ್ನ ಆರ್ಚಕರು ನದಿ ತೀರದ ದಿನ್ನೆಯ ಮೇಲೆ ನಿಂತು ಉತ್ತರಕ್ಕೆ (ಉತ್ತರ ದಿಕ್ಕಿಗೆ) ಮುಖ ಮಾಡಿ ಹರ್ತಿಕೋಟೆ ವೀರಭದ್ರದೇವರ ಅಪ್ಪಣೆ ಕೋರುತ್ತಾರೆ. ಪ್ರತಿಯಾಗಿ ಪೂಜೆಗೆ ಸುಮಾರು ೯ ಮೈಲಿ ದೂರವಿರುವ ಹರ್ತಿಕೋಟೆಯ ವೀರಭದ್ರಸ್ವಾಮಿಯ ದೇವಸ್ಥಾನದ ಘಂಟೆಯ ನಿನಾದ ಕೇಳಿ ಬರುವುದಂತೆ, ನಂತರ ಧನಸ್ಸಿಗೆ ಪೂಜೆ ಸಲ್ಲಿಸಲಾಗುತ್ತದೆ.

ಗಂಗಾ ಪೂಜೆಯ ನಂತರ ಶಿವಧನಸ್ಸನ್ನು ಅದರ ಮೂಲ ಸ್ಥಳಕ್ಕೆ ಸಾಗಿಸುತ್ತಾರೆ. ಶಿವ ಧನಸ್ಸನ್ನು ಹಿಂದಕ್ಕೆ ತರುವಾಗ ಧನಸ್ಸಿಗೆ ಹೆಗಲು ಕೊಟ್ಟರೆ ಮಕ್ಕಳಾಗದವರಿಗೆ ಮಕ್ಕಳಾಗುತ್ತವೆ ಎಂಬ ಪ್ರತೀತಿ ಸ್ಥಳೀಯರಲ್ಲಿದೆ. ಹೀಗೆ ಶಿವಧನಸ್ಸಿನ ಗಂಗಪೂಜೆ, ವೀರಭದ್ರ ದೇವರ ಅಪ್ಪಣೆಯು ಬ್ರಹ್ಮ ರಥೋತ್ಸವಕ್ಕೆ ಅಧಿಕೃತ ಚಾಲನೆ ನೀಡಿದಂತೆ ನಂತರ ೧೨-೦೧ ಗಂಟೆಯ ಸುಮಾರಿಗೆ ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ನಡೆಯುತ್ತದೆ.

ಬ್ರಹ್ಮರಥೋತ್ಸವ

ಮಾಘ ಮಾಸದ ಮಾಘ ನಕ್ಷತ್ರದಲ್ಲಿ ಹಿರಿಯೂರು ತೇರುಮಲ್ಲೇಶ್ವರ ಸ್ವಾಮಿಯ ರಥೋತ್ಸವವು ಬಹು ವಿಜೃಂಭಣೆಯಿಂದ ಸಹಸ್ರಾರು ಜನರ ಸಮ್ಮುಖದಲ್ಲಿ ನಡೆಯುವುದಾಗಿದೆ. ರಥೋತ್ಸವಕ್ಕೆ ಎರಡು ದಿನ ಮುಂಚಿತವಾಗಿಯೇ ರಥದ ಸಿದ್ಧತೆಯಲ್ಲಿ ತೊಡಗಿರುತ್ತಾರೆ. ರಥದ ದಿನ ಅಂತಿಮ ಸಿದ್ಧತೆಯೊಂದಿಗೆ ತೇರಿನ ತುದಿಯ ಭಾಗವನ್ನು ಬಣ್ಣ ಬಣ್ಣದ ಬಟ್ಟೆಗಳಿಂದ ಅಲಂಕರಿಸಿರುತ್ತಾರೆ. ಹಾಗೂ ತೇರಿನ ಮಧ್ಯಭಾಗವನ್ನು ವಿವಿಧ ಪುಷ್ಪಹಾರಗಳಿಂದ ಸಿಂಗರಿಸಿರುತ್ತಾರೆ. ನಂತರ ದೊಡ್ಡಸಿದ್ದವ್ವನಹಳ್ಳಿಯ ಗ್ರಾಮಸ್ಥರು ಹೂವಿನ ಹಾರವನ್ನು ಅರ್ಪಿಸುತ್ತಾರೆ. ಈ ಆಚರಣೆ ಪ್ರತಿವರ್ಷ ನಡೆಯುವುದಾಗಿದೆ.

ಸಾಮೂಹಿಕ ವಿವಾಹ ಮತ್ತು ಅನ್ನ ಸಂತರ್ಪಣೆ

ಜಾತ್ರೆಯ ರಥೋತ್ಸವದ ದಿನ ಬೆಳಿಗ್ಗೆ ದೇವಸ್ಥಾನದ ಸಮಿತಿಯವರು ಸಾಮೂಹಿಕ ವಿವಾಹವನ್ನು ಪ್ರತಿವರ್ಷವೂ ಏರ್ಪಡಿಸುತ್ತಿದ್ದು ನೂರಾರು ಜೋಡಿಗಳು ಶ್ರೀ ಸ್ವಾಮಿಯ ಸಮ್ಮುಖದಲ್ಲಿ ಅರ್ಚಕರ ನೇತೃತ್ವದಲ್ಲಿ ವಿವಾಹವಾಗುವ ಮೂಲಕ ವಿಶಿಷ್ಟ ಆಚರಣೆಯು ಸಮಿತಿಯವರ ನೇತೃತ್ವದಲ್ಲಿ ನಡೆಯುತ್ತದೆ. ಹೀಗೆ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಜಿಲ್ಲೆಯ ನೂರಾರು ಬಡಕುಟುಂಬಗಳ ಜನತೆ ಸಾಮೂಹಿಕ ವಿವಾಹದಲ್ಲಿ ವಿವಾಹವಾಗುವುದರೊಂದಿಗೆ ನವಜೀವನಕ್ಕೆ ಕಾಲಿಡುತ್ತಾರೆ.

ಅನ್ನ ಸಂತರ್ಪಣೆ

ಬ್ರಹ್ಮ ರಥೋತ್ಸವದ ನಂತರ ದೇವಾಲಯದ ಆವರಣದಲ್ಲಿ ಅನ್ನ ಸಂತರ್ಪಣೆ ಅಥವಾ ದಾಸೋಹವನ್ನು ಏರ್ಪಡಿಸಲಾಗುತ್ತದೆ. ಈ ದಾಸೋಹ ಕಾರ್ಯಕ್ರಮದ ಜಾತ್ರೆಯಲ್ಲಿ ನೆರೆದ ಸಹಸ್ರಾರು ಭಕ್ತಾಧಿಗಳು ಭಾಗವಹಿಸಿ ಸ್ವಾಮಿಯ ಪ್ರಸಾಧವನ್ನು ಸ್ವೀಕರಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ. ಜಾತ್ರೆಯ ಎರಡನೇ ದಿನ ವಿಶ್ರಾಂತಿಯ ದಿನವಾಗಿದ್ದು ಯಾವುದೇ ವಿಶೇಷ ಆಚರಣೆಗಳು ನಡೆಯುವುದಿಲ್ಲ.

ದೀಪಸ್ತಂಭದ ಪೂಜೆ ಮತ್ತು ಸುಮಂಗಲಿಯರಿಂದ ಕರ್ಪೂರದಾರತಿ

ಬ್ರಹ್ಮರಥೋತ್ಸವವಾದ ಮೂರನೇ ದಿನದಂದು ಶ್ರೀಸ್ವಾಮಿಯು ರಥವನ್ನು ಪುನಃ ಮೂಲ ಸ್ಥಳಕ್ಕೆ ಎಳೆತಂದ ನಂತರ ರಾತ್ರಿ ೮ ಗಂಟೆ ಸುಮಾರಿಗೆ ದೇವಾಲಯದ ಗರ್ಭಗುಡಿಯ ಎದುರಿಗೆ ಎತ್ತರದ ಜಗತಿಯ ಮೇಲಿರುವ ದೀಪಸ್ತಂಭದ ಪೂಜಾ ಕಾರ್ಯಕ್ರಮ ನಡೆಯುತ್ತದೆ. ದೀಪಸ್ತಂಭಕ್ಕೆ ಸುಮಂಗಲಿಯವರಿಂದ ಆರತಿ ಸಲ್ಲಿಸಿ ವಿಶೇಷ ಪೂಜೆ ನಡೆಸಿ ಕರ್ಪೂರದಾರತಿ ಕಾರ್ಯಕ್ರಮಕ್ಕೆ ದೀಪಸ್ತಂಭವನ್ನು ಸಿದ್ಧಗೊಳಿಸಲಾಗುತ್ತದೆ.

ಮೂರು ರಥಗಳನ್ನು ಮೂಲಸ್ಥಳಕ್ಕೆ ಎಳೆತಂದು ಶ್ರೀತೇರುಮಲ್ಲೇಶ್ವರ, ಉಮಾಮಹೇಶ್ವರ, ಚಂದ್ರಮೌಳೇಶ್ವರ, ಉತ್ಸವ ಮೂರ್ತಿಗಳನ್ನು ದೇವಸ್ಥಾನದ ಸುತ್ತ ಮೇಳವಾದ್ಯಗಳೊಂದಿಗೆ ಪ್ರದಕ್ಷಿಣೆ ಮೂಡಿಸಲಾಗುತ್ತದೆ. ನಂತರ ಏಕಶಿಲಾ ದೀಪಸ್ತಂಭದ ಪೂಜೆಯ ನಂತರ ಕುರುಬ ಸಮುದಾಯದವರು (ಕೈವಾಡಸ್ತರು) ದೀಪಸ್ತಂಭವನ್ನು ಏರಿ ಕರ್ಪೂರ ಹಚ್ಚುತ್ತಾರೆ. ಆ ಮೂಲಕ ಕರ್ಪೂರದಾರತಿ ಕಾರ್ಯಕ್ರಮಕ್ಕೆ ಚಾಲನೆ ಸಿಕ್ಕಂತಾಗುತ್ತದೆ. ನಂತರ ದೇವಾಲಯದ ಆವರಣದಲ್ಲಿ ನೆರೆದ ಸಹಸ್ರಾರು ಸುಮಂಗಲಿಯರು ನಿಗಧಿಪಡಿಸಿದ ಸ್ಥಳದಲ್ಲಿ ಕರ್ಪೂರಗಳನ್ನು ಹಚ್ಚಿ/ಅರ್ಪಿಸಿ ಕೃತಾರ್ತರಾಗುತ್ತಾರೆ.

ಹೀಗೆ ಭಕ್ತಾದಿಗಳು ಕರ್ಪೂರದಾರತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಹರಕೆಗಳನ್ನು ಪೂರೈಸುತ್ತಾರೆ. ಹಾಗೂ ಹೊಸಬೇಡಿಕೆಗಳನ್ನು ಸಲ್ಲಿಸುತ್ತಾರೆ. ಮಕ್ಕಳಾಗದವರಿಗೆ ಮಕ್ಕಳಾಗುತ್ತದೆಂದು ಇತ್ಯಾದಿ ನಂಬಿಕೆಗಳಿಂದಲೂ ಕೂಡಾ ಕರ್ಪೂರದಾರತಿ ಕಾರ್ಯಕ್ರಮದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಜನತೆ ಭಾಗವಹಿಸುತ್ತಾರೆ.

ಕರ್ಪೂರದಾರತಿ ನಂತರ ಸ್ವಾಮಿಗೆ ಗಂಗಾಭೀಷೆಕ ಮತ್ತು ರುದ್ರಾಭಿಷೇಕಗಳನ್ನು ಸಹ ಮಾಡುತ್ತಾರೆ. ಮರುದಿನ ರಾತ್ರಿ ಚುಟಗುಮಲ್ಲೇಶ್ವರ ಸ್ವಾಮಿ ದೇವಾಸ್ಥಾನಕ್ಕೆ ಅಡ್ಡ ಪಲ್ಲಕ್ಕಿಯಲ್ಲಿ ಶ್ರೀತೇರುಮಲ್ಲೇಶ್ವರ ಸ್ವಾಮಿ ಹೋಗಿಬರುತ್ತದೆ. ಈ ಚಿಟುಗು ಮಲ್ಲಪ್ಪ ದೇವಾಲಯಕ್ಕೆ ಹೋಗಿಬರುವುದಕ್ಕೆ ಐತಿಹ್ಯವಿದೆ. ಈ ದೇವಾಲಯ ಹಿಂದೆ ಶ್ರೀತೇರುಮಲ್ಲೇಶ್ವರ ಸ್ವಾಮಿಯ ಸೂಳೆಯ ಮನೆಯಾಗಿದ್ದಿತಂತೆ. ಸ್ವಾಮಿ ಇಲ್ಲಿಗೆ ಹೋಗಿ ಬರುವುದರಿಂದ ಮೈಲಿಗೆಯಾಗಿದೆ ಎಂಬ ನಂಬಿಕೆಯಿಂದ ಸಂಜೆ ವಸಂತೋತ್ಸವ ಓಕಳಿ ಪಾರ್ವತೋತ್ಸವಗಳನ್ನು ನಡೆಸಲಾಗುತ್ತದೆ.

ಓಕಳಿ ಪಾರ್ವತೋತ್ಸವ

ತೇರುಮಲ್ಲೇಶ್ವರ ಸ್ವಾಮಿಗೆ ಬೆಳಿಗ್ಗೆಯಿಂದಲ್ಲೇ ವಸಂತೋತ್ಸವ ಕಾರ್ಯಕ್ರಮ ನಡೆಯುತ್ತಿರುತ್ತದೆ. ನಂತರ ತೇರುಮಲ್ಲೇಶ್ವರಸ್ವಾಮಿ, ಚಂದ್ರಮೌಳೇಶ್ವರ, ಉಮಾಮಹೇಶ್ವರ ಸ್ವಾಮಿಯನ್ನು ಅಡ್ಡಪಲ್ಲಕ್ಕಿಯಲ್ಲಿ ಕರೆತಂದು ದೇವಾಲಯದ ಮುಂಭಾಗದ ಉಯ್ಯಾಲೆ ಕಂಬದಲ್ಲಿ ಕೂರಿಸಿ ಉಯ್ಯಾಲೋತ್ಸವವನ್ನು ನೂರಾರು ಭಕ್ತರ ಸಮ್ಮುಖದಲ್ಲಿ ನಡೆಸಲಾಗುತ್ತದೆ. ನಂತರ ಶ್ರೀತೇರುಮಲ್ಲೇಶ್ವರ ಸ್ವಾಮಿಯನ್ನು

ಆಡ್ಡ ಪಲ್ಲಕ್ಕಿಯಲ್ಲಿ ಮೂಲಸ್ಥಾನವಾದ ಚಿಟುಗು ಮಲ್ಲೇಶ್ವರಸಾಮಿಯ ದೇವಾಲಯಕ್ಕೆ ಕೊಂಡೊಯ್ಯಲಾಗುತ್ತದೆ. ಇದಕ್ಕೆ ಐತಿಹ್ಯವಿದ್ದು ಹಿಂದೆ ತಿಳಿಸಲಾಗಿದೆ. ರಾತ್ರಿ ೯ ಗಂಟೆ ಸುಮಾರಿಗೆ ತೇರುಮಲ್ಲೇಶ್ವರ ಸ್ವಾಮಿಯನ್ನು ದೇವಾಲಯದಿಂದ ತೇರುಮಲ್ಲೇಶ್ವರ ದೇವಾಲಯಕ್ಕೆ ಕರೆತರಲಾಗುತ್ತದೆ. ನಂತರ ದೇವಾಲಯದ ಮುಂಬಾಗದ ಓಕಳಿ ಹೊಂಡದಲ್ಲಿ ಬಣ್ಣ ಬಣ್ಣದ ನೀರನ್ನು ಹಾಕಿರಲಾಗುತ್ತದೆ. ಅ ನೀರನ್ನು ಸ್ವಾಮಿಗೆ ಕೈವಾಡಸ್ತರು, ಇತರೆಯವರು ಎರಚುವ ಮೂಲಕ ಪಾರ್ವತೋತ್ಸವಕ್ಕೆ ಚಾಲನೆ ನೀಡುತ್ತಾರೆ. ನಂತರ ದೇವಾಲಯದ ಮುಂಭಾಗ ಕೈವಾಡಸ್ತರು ಹಾಗೂ ನೆರೆದಿದ್ದ ಭಕ್ತ ಸಮೂಹ ಓಕಳಿ ಉತ್ಸವದಲ್ಲಿ ಭಾಗವಹಿಸಿ ನೆನೆದು ಹರ್ಷಪಡುವುದಲ್ಲದೇ ಪುನೀತರಾಗುತ್ತಾರೆ.

ಕಂಕಣ ವಿಸರ್ಜನೆ

ಓಕಳಿ ಪಾರ್ವತೋತ್ಸವದ ಮರುದಿನ ಸಂಜೆ ವೇಳೆಯಲ್ಲಿ ಕಂಕಣಮಹೋತ್ಸವದಲ್ಲಿ ಭಾಗವಹಿಸಿದ ತಾಲೂಕು ದಂಡಾಧಿಕಾರಿಗಳು, ಕೈವಾಡಸ್ತರು, ಸರ್ವಭಕ್ತರು ಆಗಮಿಸಿ ಅಂದು ಮೂರು ರಥಗಳ ಮುಂಭಾಗದಲ್ಲಿ ಕುಳಿತು ಕಟ್ಟಿಸಿಕೊಂಡಿದ್ದ ಕಂಕಣಗಳನ್ನು ಬಿಚ್ಚಿಡುತ್ತಾರೆ. ಹೀಗೆ ಬಿಚ್ಚಿಟ್ಟ ಕಂಕಣಗಳನ್ನು ದೇವಾಲಯದ ಆರ್ಚಕರು ಗಂಗೆಯಲ್ಲಿ ವಿಸರ್ಜನೆ ಮಾಡುತ್ತಾರೆ. ಹೀಗೆ ಕಂಕಣ ವಿಸರ್ಜಿಸಲಾಗುತ್ತದೆ. ಕಂಕಣ ಕಟ್ಟಿಕೊಂಡವರು ಮತ್ತು ಮಹೋತ್ಸವಕ್ಕೆ ಸಂಬಂಧಿಸಿದ ಒಕ್ಕಲರು ಜಾತ್ರೆ ಮುಗಿಯುವರೆಗೂ ಮನೆಗಳಲ್ಲಿ ಯಾವುದೇ ಶುಭಕಾರ್ಯಗಳನ್ನು (ಮದುವೆ, ನಾಮಕರಣ, ಹೊಸಗೆ) ಮಾಡುವಂತಿಲ್ಲ ಹಾಗೂ ಒಲೆಯ ಮೇಲೆ ಹೆಂಚು, ಬಾಂಡ್ಲಿ ಇಡುವಂತಿಲ್ಲ ಹಾಗೂ ಒಳಕಲ್ಲಿನಲ್ಲಿ ಗುಂಡು ಕಲ್ಲನ್ನು ಇಡುವಂತಿಲ್ಲ ಈ ರೀತಿಯಾಗಿ ಮನೆದೇವರ ಒಕ್ಕಲರಲ್ಲಿ ವಿಶೇಷತೆ ಇರುವುದನ್ನು ಕಾಣಬಹುದು.[೧೩]

ಸಾಂಸ್ಕೃತಿಕ ಕಾರ್ಯಕ್ರಮಗಳು

ಶ್ರೀತೇರುಮಲ್ಲೇಶ್ವರ ಸ್ವಾಮಿಯ ಜಾತ್ರೆಯ ಆರಂಭದಿಂದ ಕರ್ಪೂರದಾರತಿ ನಡೆಯುವ ದಿನದವರೆಗೂ ಪ್ರತಿದಿನ ಸಂಜೆ ತೇರುಮಲ್ಲೇಶ್ವರಸ್ವಾಮಿ ಸಾಂಸ್ಕೃತಿಕ ಸಮಿತಿಯ ವತಿಯಿಂದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಗಿಸಲಾಗಿರುತ್ತದೆ. ಈ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ದೇವಾಲಯದ ಆವರಣದಲ್ಲಿ ವೇದಿಕೆಯೊಂದನ್ನು ನಿರ್ಮಿಸಿದ್ದು ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಪ್ರತಿದಿನ ಸಂಜೆ ಭಕ್ತಿಗೀತೆ ಭಾವಗೀತೆ, ನೃತ್ಯ, ವಚನಗಾಯನ, ರಸಪ್ರಶ್ನೆ, ವೇಷಭೂಷಣ ಸ್ಪರ್ಧೆ, ಚಿತ್ರಕಲಾಸ್ಪರ್ಧೆ, ಭರತನಾಟ್ಯ, ರಂಗೋಲಿ ಸ್ಪರ್ಧೆ, ಇತ್ಯಾಧಿ ಸಾಂಸ್ಕೃತಿಕ ಹಾಗೂ ಕಲಾ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ.

ಹೀಗೆ ತೇರುಮಲ್ಲೇಶ್ವರ ಸ್ವಾಮಿ ಜಾತ್ರೆಯು ಐದಿನೈದು ದಿನಗಳ ಕಾಲ ಹಲವು ವಿಶೇಷ ಹಾಗೂ ಸಾಂಪ್ರದಾಯಿಕ ಮತ್ತು ಐತಿಹಾಸಿಕ ಆಚರಣೆಗಳಿಂದ ವಿಜೃಂಭಣೆಯಿಂದ ನಡೆಯುವುದಾಗಿದ್ದು. ಸುತ್ತಲಿನ ಜನರನ್ನು ಆಕರ್ಷಿಸುವ ಜಾತ್ರಾ ಉತ್ಸವವಾಗಿದೆ.[೧೪]

ಅಡಿ ಟಿಪ್ಪಣಿಗಳು

೧. ರಮೇಶ ಸ.ಚಿ. ೨೦೧೦, ಆಚರಣೆ : ದೇಶಿಜ್ಞಾನ ಪರಂಪರೆ, ಜಾನಪದ ಕರ್ನಾಟಕ ರಮೇಶ, ಸ.ಚಿ. ಪು.ಸಂ.೮.

೨. ವೀರೇಶ ಬಡಿಗೇರ, ೧೯೯೯. ಗುಳ್ಳವ್ವ ಆಚರಣೆ–ವಿಶ್ಲೇಷಣೆ, ಪು.ಸಂ. ೧.

೩. ಮಂಜನಾಥ ಬೇವಿನಕಟ್ಟಿ, ೨೦೧೦, ಪರಿಷೆ ವಿ/ಎಸ್ ಮಾನ್ಯೇವು, ಪು.ಸಂ. ೧೦೫.

೪. ಗಿರಿಜಾ ಟಿ. ೧೯೯೧ ಚಿತ್ರದುರ್ಗ ಜಿಲ್ಲಾದರ್ಶಿನಿ, ಪು.ಸಂ. ೩೪೧.

೫. ಅದೇ, ಪು.ಸಂ. ೨೪೩.

೬. ಅದೇ, ಪು.ಸಂ. ೩೩೪.

೭. ಬಸವರಾಜಯ್ಯ ಎಂ. ಸಿರುಗುಪ್ಪ, ೨೦೧೩, ಮೊಹರಂಗೆ ಭಾವೈಕ್ಯದ ಬೆಸುಗೆ ಪ್ರಜಾವಣಿ

ಕರ್ನಾಟಕ ದರ್ಶನ, ಮಂಗಳವಾರ, ೧೨ ನವಂಬರ್ ಪು.ಸಂ. ೧.

೮. ಚೆನ್ನಣ್ಣವಾಲಿಕಾರ, ೨೦೦೬, ಸಮಗ್ರಜನಪದ ಸಂಬಂಧ, ಪು.ಸಂ. ೨೮.

೯. ಹಂಪ ನಾಗರಾಜಯ್ಯ, ೨೦೦೨ ಕರ್ನಾಟಕದ ಜಾತ್ರೆಗಳು, ಪು.ಸಂ. ೧೩.

೧೦. ಜಗನ್ನಾಥ ಹೆಬ್ಬಾಳ ಜಾತ್ರೆಗಳು, ಪು.ಸಂ. ೨೩.

೧೧. ಚಪ್ಪರಬಂದ, ೨೦೦೬, ಬಿಜಾಪುರ ಜಿಲ್ಲೆಯ ಜಾತ್ರಾ ಉತ್ಸವಗಳು, ಪು.ಸಂ. ೩೪–೩೬.

೧೨. ತಿಪ್ಪೇರುದ್ರಸ್ವಾಮಿ. ಹೆಚ್. ೧೯೭೪, ಕರ್ನಾಟಕ ಸಂಸ್ಕೃತಿ ಸಮೀಕೆ., ಪು.ಸಂ. ೧೨೬–೧೨೮.

೧೩. ಕರ್ನಾಟಕ ಸರ್ಕಾರ, ದಕ್ಷಿಣಕಾಶಿ ಶ್ರೀತೇರುಮಲ್ಲೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಆಹ್ವಾನ ಪತ್ರಿಕೆ.೨೦೧೫, ಪು.ಸಂ. ೧–೨೩.

೧೪. ಕ್ಷೇತ್ರಕಾರ್ಯದ ಮಾಹಿತಿ.

❑❑❑

ಅಧ್ಯಾಯ : ಆರು

ಸಮಾರೋಪ

ಅಧ್ಯಾಯ : ಆರು

ಸಮಾರೋಪ

ಒಂದು ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪುನಃ ರಚಿಸಲು ಆಕರ ಸಾಮಾಗ್ರಿಗಳು ಅವಶ್ಯಕ. ಈ ಅಧ್ಯಯನಕ್ಕೆ ಆಕರಗಳಿಂದ ಶಾಸನ, ಶಿಲ್ಪ, ಸ್ಮಾರಕ, ಕೋಟೆ, ಕೋತ್ತಲ, ಕೆರೆ, ಬಾವಿಗಳನ್ನು ಕ್ಷೇತ್ರಕಾರ್ಯ ಕೈಗೊಳ್ಳುವುದರ ಮೂಲಕ ಅಧ್ಯಯನ ಮಾಡಲಾಗಿದೆ. ಹಿರಿಯೂರು ಪಟ್ಟಣ ಐತಿಹಾಸಿಕ ದೃಷ್ಟಿಯಿಂದ ಮಹತ್ವವಾಗಿದ್ದು ಪ್ರಾಗಿತಿಹಾಸ ಕಾಲದಿಂದ ಇತಿಹಾಸ ರಚನೆಯ ಕಾಲದವರೆಗೂ ತನ್ನ ಚರಿತ್ರೆಯನ್ನು, ಈ ಪ್ರದೇಶದ ಪ್ರಾಚೀನ ಸಂಸ್ಕೃತಿಯ ಬೆಳವಣಿಗೆಯ ರೂಪರೇಷಗಳನ್ನು ತೋರಿಸುವುದಾಗಿದೆ.

ಇತಿಹಾಸ ಪೂರ್ವಕಾಲದಿಂದ ೨೦ನೇ ಶತಮಾನದ ಅಂಚಿನವರೆಗೆ ಇತಿಹಾಸವನ್ನು ಪುನಃ ರಚಿಸಿದ್ದನ್ನು ಕಾಣಬಹುದು. ಅನೇಕ ವೈವಿಧ್ಯಮಯ ಸಂಗತಿಗಳು, ಕಲೆ, ಮತ್ತು ವಾಸ್ತುಶಿಲ್ಪ ಸಾಂಸ್ಕೃತಿಕ ಚರಿತ್ರೆಯ ಪುನರ್ರಚನೆಗೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದ್ದು ಅಂತಹ ನಿದರ್ಶನಗಳನ್ನು ಸೋದಾಹರಣವಾಗಿ ಪ್ರಸ್ತುತ ಪಡಿಸಲಾಗಿದೆ.

ಹಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನದಿಂದ ಮುಖ್ಯವಾದ ನಿರ್ಣಯಗಳನ್ನು ಮತ್ತು ಕೊಡುಗೆಗಳನ್ನು ನಿರೂಪಿಸಲಾಗಿದೆ. ಹಿರಿಯೂರು ಪಟ್ಟಣದಲ್ಲಿ ಹೊಯ್ಸಳರ ಕಾಲದಿಂದ ಹಿಡಿದು ಮೈಸೂರು ಒಡೆಯರ ಕಾಲದವರೆಗೂ ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದು ಶಾಸನ ಶಿಲ್ಪಗಳಿಂದ ದೃಢಪಡುತ್ತದೆ. ವಿವಿಧ ರಾಜಮನೆತನದ ಚಕ್ರವರ್ತಿಗಳು ತಮ್ಮ ಸಾಮಾರ್ಥ್ಯದ ಆಧಾರದ ಮೇಲೆ ಪಟ್ಟಣದ ಭಾಗಗಳನ್ನು ವಶಪಡಿಸಿಕೊಂಡು ಆಳ್ವಿಕೆ ನಡೆಸಿರುವುದನ್ನು ಗಮನಿಸಬಹುದು. ಕೆಲವೊಮ್ಮೆ ಅಂದಿನ ದಂಡನಾಯಕರು ಇಲ್ಲಿ ಆಳ್ವಿಕೆ ನಡೆಸಿ ಈ ಪ್ರದೇಶಕ್ಕೆ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಅವರಲ್ಲಿ ಹೊಯ್ಸಳರು. ವಿಜಯನಗರದ ಅರಸರು, ಹರತಿಪಾಳೆಗಾರರು ಮತ್ತು ಚಿತ್ರದುರ್ಗ ಪಾಳೆಗಾರರು ಹಾಗೂ ಮೈಸೂರು ಒಡೆಯರು ಕಾಲದವರೆಗೂ ನೋಡುತ್ತೇವೆ.

ಪ್ರಮುಖವಾಗಿ ಈ ಪಟ್ಟಣ ಹೊಯ್ಸಳ, ವಿಜಯನಗರದ ಅರಸರು ಹರತಿ ಪಾಳೆಗಾರರು ಮತ್ತು ಚಿತ್ರದುರ್ಗ ಪಾಳೆಗಾರರು ಹಾಗೂ ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿತ್ತು. ಇವರ

ಕಾಲದಲ್ಲಿ ಈ ಪ್ರದೇಶ ವಿಸ್ತೀರ್ಣಗೊಂಡು ರಾಜಕೀಯ ಮಾನ್ಯತೆಯನ್ನು ಪಡೆದಿತ್ತು. ಇವರುಗಳ ಸಂಕ್ಷಿಪ್ತ ರಾಜಕೀಯ ಇತಿಹಾಸವನ್ನು ಅವಲೋಕನ ಮಾಡಲಾಗಿದೆ.

ಇಲ್ಲಿನ ಪಟ್ಟಣದ ಸ್ಥಳನಾಮ ಮತ್ತು ಸ್ಥಳಪುರಾಣಗಳು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿವೆ. ಹಿರಿಯೂರು ಪಟ್ಟಣವು ಪ್ರಾಚೀನ ಕಾಲದಲ್ಲಿ ಯಾವ ಹೆಸರನ್ನು ಪಡೆದಿತ್ತು. ಏಕೆ ಪಡೆದಿತ್ತು. ಇಂದಿನ ಹೆಸರೇನು ಮುಂತಾದ ವಿಷಯಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದು ಜೊತೆಗೆ ಸ್ಥಳಪುರಾಣದಲ್ಲಿ ಈ ಹಿಂದೆ ನಡೆದ ಘಟನೆಗಳು, ದೇವರ ಅವತಾರ ಕಥೆಗಳು, ನಂತರ ಜೀವನ ವೃತ್ತಾಂತ, ಅರಸರ ಜೀವನ ವಂಶಾವಳಿಗಳನ್ನು ಐತಿಹ್ಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಇವೆಲ್ಲವೂ ಇತಿಹಾಸ ರಚನೆಯಲ್ಲಿ ಸಹಾಯಕವಾಗಿವೆ.

ದೇವಾಲಯಗಳಿಗೆ ಸಂಬಂಧಿಸಿದಂತೆ ಅವುಗಳ ಉಗಮ ಮತ್ತು ವಿಕಾಸವನ್ನು ಸಂಕ್ಷೇಪ್ತವಾಗಿ ಹೇಳಿ ಪ್ರಸ್ತುತ ವ್ಯಾಪ್ತಿಯ ಒಳಗೆ ವಿಜಯನಗರ, ಪಾಳೆಯಗಾರ ಕಾಲದ ದೇವಾಲಯಗಳು ಪ್ರಮುಖವೆನಿಸಿವೆ. ಅಲಂಕಾರಿಕವಾಗಿ ವಾಸ್ತುಶೈಲಿಯ ದೃಷ್ಟಿಯಿಂದ ಒರಟಾಗಿ ಕಂಡರೂ ವೈಶಾಲ್ಯತೆಯ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆದಿವೆ. ಗ್ರಾನೈಟ್ ಶಿಲೆಯನ್ನು ಬಳಸಿ ಇವರ ವಾಸ್ತುಕೃತಿಗಳು ನಿರ್ಮಾಣಗೊಂಡಿರುವುದರಿಂದ ಹೆಚ್ಚಿನ ಅಲಂಕಾರಿಕ ಅಂಶಗಳು ಕಂಡುಬರುವುದಿಲ್ಲ. ದೇವಾಲಯಗಳ ಕಂಬಗಳಲ್ಲಿ ಉಬ್ಬುಶಿಲ್ಪಗಳ ಕೆತ್ತನೆಯು ಪ್ರಮುಖವಾಗಿ ಕಾಣುತ್ತದೆ.

ದೇವಾಲಯಗಳಿಗೆ ಹೊಂದಿಕೊಂಡಂತೆ ಶೈವ, ವೈಷ್ಣವ, ಶಾಕ್ತ ಧರ್ಮಕ್ಕೆ ಸಂಬಂಧಿಸಿದ ಮೂರ್ತಿಶಿಲ್ಪಗಳಿವೆ. ಶೈವ ಸಂಪ್ರದಾಯಕ್ಕೆ ಶಿವನ ಸಂಕೇತವಾಗಿ ವಿವಿಧ ಬಗೆಯ ಬ್ರಹ್ಮಸೂತ್ರಗಳನ್ನೊಳಗೊಂಡ ಶಿವಲಿಂಗಗಳು ಮತ್ತು ನಂದಿ, ಗಣೇಶ, ಈಶ್ವರ ವೀರಭದ್ರೇಶ್ವರ ಚುಟುಕಮಲ್ಲಪ ಶ್ರೀತೇರುಮಲ್ಲೇಶ್ವರ ಶಿಲ್ಪಗಳು, ಹಾಗೂ ವೈಷ್ಣವ ಧರ್ಮದ ವಿಷ್ಣುವಿನ ಚತುರ್ವಂಶತಿ ಶಿಲ್ಪಗಳಲ್ಲಿ ಹಿರಿಯೂರು ಪಟ್ಟಣದ ಸಿದ್ಧನಾಯಕ್ಕನ ವೃತ್ತದ ಬಳಿಯ ಆಂಜನೇಯ ಮೂರ್ತಿಯ ಬೃಹತ್ ಗಾತ್ರದ ಶಿಲ್ಪ, ಅದೇ ರೀತಿ ಶಾಕ್ತ ಸಂಪ್ರದಾಯಿಕ ಶಿಲ್ಪಗಳಲ್ಲಿ ದುರ್ಗಾಂಬಿಕಾದೇವಿ, ಬನಶಂಕರಿ, ಕಣಿವೆ ಮಾರಮ್ಮ, ಭಗವತಿ ಅಮ್ಮನ್, ಬಂದನಮ್ಮ, ಕೊಲ್ಲಾಪುರದಮ್ಮ ಮುಂತಾದ ಮೂರ್ತಿ ಶಿಲ್ಪಗಳು ಕಂಡುಬಂದಿವೆ. ಶಿಲ್ಪಗಳು ಪ್ರಾಚೀನವಾದವು ಇವುಗಳಿಂದ ಈ ಪ್ರದೇಶದ ಜನರು ತಮ್ಮದೇ ಆದ ದೈವತ್ವವನ್ನು ಸ್ವೀಕರಿಸಿ ಪೂಜಿಸುತ್ತಿದ್ದರೆಂಬುದಂತೂ ಸ್ಪಷ್ಟ.

ವಿಜಯನಗರ, ಪಾಳೆಗಾರರ ಕಾಲದ ಶಾಸನಗಳು ಲಭ್ಯವಾಗಿವೆ. ಇವೆಲ್ಲವು ದಾನಶಾಸನಗಗಳಾಗಿವೆ. ಸ್ಮಾರಕ ಶಾಸನಗಳಲ್ಲಿ ವೀರಗಲ್ಲುಗಳೇ ಮೊದಲ ಸ್ಥಾನದಲ್ಲಿ ನಿಲ್ಲುತ್ತವೆ. ಈ ಹಿರಿಯೂರು ಪಟ್ಟಣದಲ್ಲಿ ಚಿಕ್ಕೂ ಹೆಚ್ಚು ವೀರಗಲ್ಲು ಮತ್ತು ಒಂದು ಮಾತ್ರ ವೀರಮಾಸ್ತಿಗಲ್ಲು

ದೊರೆತಿದ್ದು, ಅವು ವಿವಿಧ ಹಂತಗಳನ್ನೊಂದಿವೆ. ಹಿರಿಯೂರು ಪಟ್ಟಣದ ಕಲ್ಲಯ್ಯನ ಬಡಾವಣೆಯಲ್ಲಿ ದೊರೆತ ಅಗಲವಾದ (ಆಯತಾಕಾರ) ವೀರಮಾಸ್ತಿಗಲ್ಲು ಇಲ್ಲಿನ ಕಲಾ ವೈಶಿಷ್ಟ್ಯತೆಯನ್ನು ಸಾರುತ್ತದೆ. ವಿಜಯನಗರ ಅರಸರ ವೀರಗಲ್ಲುಗಳಲ್ಲಿ ಕುದುರೆ ಮೇಲೆ ಕುಳಿತ ವೀರನ ಹಾಗೂ ಧ್ವಜ ಹಿಡಿದಿರುವ ಸೈನಿಕನ ಚಿತ್ರಣವನ್ನು ಚಿತ್ರಿಸಲಾಗಿದೆ. ಹಾಗೂ ಹೊಯ್ಸಳರ ಕಾಲದಲ್ಲಿನ ವೀರಗಲ್ಲಿನಲ್ಲಿ ವೀರನು ಹುಲಿಯ ಜೊತೆ ಹೋರಾಡುತ್ತಿರುವ ವೀರಗಲ್ಲನ್ನು ಹಿರಿಯೂರು ಪಟ್ಟಣದ ಕಲ್ಲಯ್ಯನ ಬಡಾವಣೆಯಲ್ಲಿ ಗೋಚರಿಸಿದ್ದು ಅದೊಂದು ವಿಶಿಷ್ಟವಾದ ವೀರಗಲ್ಲು ಎನಿಸಿದೆ.

ನಂಬಿಕೆ ಮತ್ತು ಆಚರಣೆಗಳು ಮತ್ತು ಜಾತ್ರೆಗಳು ಮಾನವ ಸಂಸ್ಕೃತಿಯ ಭಾಗವಾಗಿವೆ. ಮನುಷ್ಯನ ನಡೆನುಡಿ–ಆಚರಣೆಗಳು ಕಾಲದಿಂದ ಕಾಲಕ್ಕೆ ಮೌಖಿಕ ಪರಂಪರೆಯಾಗಿ ಬೆಳೆದುಬಂದಿವೆ. ಹಬ್ಬ ಆಚರಣೆಗೆ ಸಂಬಂಧಿಸಿದ ಐತಿಹ್ಯಗಳು ಈ ಪಟ್ಟಣದಲ್ಲಿ ರಚನೆಗೊಂಡು ಜನರ ಸ್ಮೃತಿಪಟಲದಲ್ಲಿ ಉಳಿದುಕೊಂಡಿವೆ. ಪಾಪ–ಪುಣ್ಯದಲ್ಲಿನ ನಂಬಿಕೆ ಧಾನ–ದತ್ತಿಗಳ ಬೆಳವಣಿಗೆಗೆ ಕಾರಣವಾಗಿವೆ. ಈ ಪಟ್ಟಣದಲ್ಲಿ ಮತಧರ್ಮಗಳಿಗೆ ಸಂಬಂಧಿಸಿದ ಆನೇಕ ಧಾರ್ಮಿಕ ಆಚರಣೆ, ಉತ್ಸವಗಳು ಪ್ರಾಚೀನ ಕಾಲದಿಂದಲೂ ಉಳಿದುಕೊಂಡು ಬಂದಿವೆ. ಜನಪದೀಯ ಹಿನ್ನೆಲೆಯಲ್ಲಿ ಇಲ್ಲಿನ ನಂಬಿಕೆ, ಆಚರಣೆ, ಜಾತ್ರಾ–ಉತ್ಸವಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ಅಧ್ಯಯನ ಕೈಗೊಳ್ಳಲಾಯಿತು.

"ಹಿರಿಯೂರು ಪಟ್ಟಣದ ಚಾರಿತ್ರಿಕ ಅಧ್ಯಯನ"ವನ್ನು ಪುನರ್ರಚಿಸುವಲ್ಲಿ ಪ್ರಾಗಿತಿಹಾಸಕಾಲದ ಅವಶೇಷ, ಸ್ಮಾರಕ ಶಾಸನ, ಸಾಹಿತ್ಯ, ಜಾನಪದ ಮತ್ತು ಮೌಖಿಕ ಆಕಾರಗಳು ಪ್ರಾದೇಶಿಕವಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ ಮುಖಗಳ ಅಧ್ಯಯನಕ್ಕೆ ಅಪಾರವಾದ ಕೊಡುಗೆಗಳನ್ನು ಸಲ್ಲಿಸಿರುವುದು ದೃಢವಾಗುತ್ತದೆ. ಇಷ್ಟೆಲ್ಲ ಮಹತ್ವದ ವಿಷಯಗಳನ್ನು ಹೊರಗೆಡುವುದು ಈ ಅವಶೇಷಗಳು ಇಂದು ವಿನಾಶದ ಅಂಚಿನಲ್ಲಿವೆ. ಕೆಲವು ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಕಾಲಗರ್ಭದಲ್ಲಿ ಲೀನವಾಗುತ್ತಿವೆ. ಇನ್ನು ಕೆಲವು ವಿವಿಧ ಸ್ಥಳೀಯ ಮೂಢನಂಬಿಕೆಗಳಿಗೆ ಆಹುತಿಯಾಗುತ್ತಿವೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು, ಸಂಘಸಂಸ್ಥೆಗಳು, ಜನರು ಇವುಗಳ ಸಂರಕ್ಷಣೆಯೆಡೆಗೆ ಗಮನಹರಿಸುವುದು ಅತ್ಯವಶ್ಯಕ.

❑❑❑

ಅನುಬಂಧಗಳು

ಆಕರ ಗ್ರಂಥಗಳು

ಕೋಷ್ಟಕ

ವಕ್ತೃ ವಿವರ

ತಲವಿನ್ಯಾಸ

ಛಾಯಾಚಿತ್ರಗಳು

ಆಕರ ಗ್ರಂಥಗಳು

ಕನ್ನಡ ಪುಸ್ತಕಗಳು

ಅಣ್ಣಿಗೇರಿ ಎಂ.ಎಂ. ಮತ್ತು ಶೇಷಶಾಸ್ತ್ರಿ ಆರ್.,೨೦೦೭, **ಶಾಸನ ಸಂಗ್ರಹ,** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

ಅ.ನ.ಕೃ ೨೦೦೬, **ಚಿತ್ರಕಲೆ,** ಸಾಗರ್, ಪ್ರಕಾಶನ

ಅನಂತರಂಗಾಚಾರ್ ಎನ್., ೧೯೮೪, **ಭಾರತೀಯ ದೇವಾಲಯಗಳು ಮತ್ತು ಸಂಸ್ಕೃತಿ,** ಸ್ವಚ್ಛಂದ ಪ್ರಕಾಶನ, ಮೈಸೂರು.

ಕಲಬುರ್ಗಿ ಎಂ.ಎಂ. ೧೯೯೯, **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ-೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೃಷ್ಣ ಎಂ.ಎಚ್., ೧೯೫೩, **ಕರ್ನಾಟಕದ ಪೂರ್ವ ಚರಿತ್ರೆ,** ಸಾಧನ ಮುದ್ರಣಾಲಯ, ಧಾರವಾಡ.

ಕೃಷ್ಣ ಎಂ.ಎಚ್. ೨೦೦೯, **ಕನ್ನಡ ನಾಡಿನ ಚರಿತ್ರೆ,** ಕನ್ನಡ ಸಾಯಿತ್ಯ ಪರಿಷತ್, ಬೆಂಗಳೂರು.

ಗಿರಿಜಾ ಟಿ. ೧೯೯೧, **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ.

ಗಿರಿಜಾ ಟಿ. ೨೦೦೭, **ಭಾರತ ನದಿಗಳು,** ನಿಹಾರಿಕಾ ಪ್ರಕಾಶನ, ದಾವಣಗೆರೆ.

ಗೋಪಾಲ್ ಆರ್. (ಸಂ) ೨೦೦೫, **ಚಿತ್ರದುರ್ಗ ಜಿಲ್ಲಾ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

ಚಿದಾನಂದಮೂರ್ತಿ ಎಂ. ೧೯೬೬, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಚಿದಾನಂದಮೂರ್ತಿ ಎಂ. ೧೯೮೯, **ವೀರಗಲ್ಲು ಮತ್ತು ಮಾಸ್ತಿಗಲ್ಲು,** ಐ.ಬಿ.ಎಚ್ ಪ್ರಕಾಶನ, ಬೆಂಗಳೂರು.

ಚೆನ್ನಕ್ಕ ಎಲಿಗಾರ ೧೯೨೨, **ಮಾಸ್ತಿಕಲ್ಲುಗಳು,** ಕರ್ನಾಟಿಕ ವಿಶ್ವವಿದ್ಯಾಲಯ, ಧಾರವಾಡ.

ಚೆನ್ನಕ್ಕ ಎಲಿಗಾರ ೧೯೯೦, **ಶಾಸನಗಳಲ್ಲಿ ಸ್ತ್ರೀ ಸಮಾಜ,** ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ.

ತಿಪ್ಪೇರುದ್ರಸ್ವಾಮಿ ಎಚ್. ೧೯೯೪, **ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ,** ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.

ತಿಪ್ಪೇಸ್ವಾಮಿ ಪಿ.ಆರ್., **ಕರ್ನಾಟಕ ಲಲಿತಕಲಾ ಅಕಾಡೆಮಿ,** ಬೆಂಗಳೂರು.

ನರಸಿಂಹನ್ ಅ.ಲ., ೧೯೯೮, **ಕರ್ನಾಟಕ ಭಿತ್ತಿಚಿತ್ರ ಪರಂಪರೆ,** ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು.

ಪರಮಶಿವಮೂರ್ತಿ ಡಿ.ವಿ., ೧೯೯೯, **ಕನ್ನಡ ಶಾಸನ ಶಿಲ್ಪ,** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಾಡಿಗರ್ ಎಸ್. ವಿ., ೧೯೮೭, **ಪುರಾತತ್ವ ಪರಿಚಯ,** ರಾಮಾಶ್ರಯ ಪಬ್ಲಿಕೇಷನ್ಸ್, ಧಾರವಾಡ.

ಪ್ರಭಾಕರ್ ಎ.ಎಸ್., ೨೦೦೯, **ಮ್ಯಾಸಬೇಡರ ಕಥನಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ್ ಎಂ.ಎನ್., ೨೦೧೧, **ದೇವಾಲಯ ವಾಸ್ತು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಭಟ್‌ಸೂರಿ ಕೆ.ಜಿ., ೨೦೦೫, **ಶಾಸನ ಅಧ್ಯಯನ, ಪ್ರಸಾರಾಂಗ,** ಕನ್ನಡ ವಿಶ್ವವಿದ್ಯಲಯ, ಹಂಪಿ.

ಮೂರ್ತಿ ಕೆ.ಎಲ್.ಎನ್., ೧೯೯೮, **ಕರ್ನಾಟಕ ಕಲೆ ಮತ್ತು ವಾಸ್ತುಶಿಲ್ಪ,** ರಂಜಿತ ಪ್ರಕಾಶನ, ತುಮಕೂರು.

ಮಹಾಂತೇಶ ಎನ್.ಎಸ್., ೨೦೦೮, **ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು,** ರೇಣುಕಾ ಪ್ರಕಾಶನ, ದಾವಣಗೆರೆ.

ಮುಕುಂದರೆಡ್ಡಿ ಮಾ.ನಾ. ೧೯೮೭, **ಹಿರಿಯೂರು ತಾಲೂಕು ದರ್ಶನ,** ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ಯಶೋಧರ ರಾಜಶೇಖರಪ್ಪ, ೧೯೯೨, **ಚಿತ್ರದುರ್ಗ ಜಿಲ್ಲೆಯ ವಿಶಿಷ್ಟ ವೀರಮಾಸ್ತಿಶಿಲ್ಪ,** ಇತಿಹಾಸ ದರ್ಶನ ಸಂ.೭,

ಯಳನಾಡು ಅಂಜನಪ್ಪ, ೧೯೯೮, **ಅರ್ಬನ್ ಬ್ಯಾಂಕಿನ ಸ್ಮರಣ ಸಂಚಿಕೆ,** ಕಿರಣ್ ಆಫ್ ಸೆಟ್ ಪ್ರಿಂಟರ್ಸ್ ಹಿರಿಯೂರು.

ರಂಗಸ್ವಮಿ ಡಿ.ಟಿ. ೨೦೦೯, **ಭಾರತದ ಹಬ್ಬಗಳು,** ಸಮಾಜ ಪುಸ್ತಕಾಲಯ, ಧಾರವಾಡ.

ರಮೇಶ್ ಜಿ.ಜಿ., ೨೦೦೭, **ನಮ್ಮ ಹಬ್ಬಗಳು,** ಚಂದನ ಪ್ರಕಾಶನ, ಬೆಂಗಳೂರು.

ರಂಗಸ್ವಾಮಿ ಡಿ.ಟಿ., ೨೦೦೯, **ಚಿತ್ರದುರ್ಗ ಜಿಲ್ಲಾ ದೇವಾಲಯ ದರ್ಶಿನಿ,** ಗಾಯಿತ್ರಿ ಪ್ರಕಾಶನ, ಚಿತ್ರದುರ್ಗ.

ರಾಜಶೇಖರಪ್ಪ ಬಿ., ೨೦೦೧, **ದುರ್ಗಶೋಧನ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ರಾಮದಾಸರೆಡ್ಡಿ ಎನ್.ಜಿ., ೨೦೦೬, **ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚರಿತ್ರಿಕ ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ರಾಮಚಂದ್ರರಾವ್ ಎಸ್.ಕೆ., ೧೯೭೫, **ಮೂರ್ತಿಶಿಲ್ಪ: ನೆಲೆ ಹಿನ್ನೆಲೆ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಲಯ, ಬೆಂಗಳೂರು.

ಲಕ್ಷ್ಮಣ್ ತೆಲಗಾವಿ., ೧೯೮೭, **ಹರಿತಿಸಿರಿ**, ಅಶ್ವತ್ ಪ್ರಿಂಟರ್ಸ್, ಬೆಂಗಳೂರು.

ಲಕ್ಷ್ಮಣ್ ತೆಲಗಾವಿ., ೨೦೦೪, **ಮೌರ್ಯ ಮತ್ತು ಶಾತವಾಹನ ಯುಗ**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಸು ಎಂ.ವಿ., ೨೦೧೦, **ಕರ್ನಾಟಕ ಆಯ್ದ ವಿಷಯಗಳು**, ದೂರ ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾಶ್ರೀ ಎಸ್.ಹೆಚ್., ೨೦೧೦, **ಹಿರಿಯೂರು ತಾಲೂಕು ದೇವಾಲಯಗಳು ಮತ್ತು ಐತಿಹಾಸಿಕ ಸ್ಥಳಗಳು**, ಶ್ರೀಲಕ್ಷ್ಮಿ ಪ್ರಕಾಶನ, ಹಿರಿಯೂರು.

ಶಿವರಾಮ ಕಾರಂತ. ೧೯೭೫, **ಚಿತ್ರದುರ್ಗ–ವಾಸ್ತುಕಲೆಗಳು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶೇಷಶಾಸ್ತ್ರಿ ಆರ್. ೨೦೦೪, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶ್ಯಾಮಲ ಸಿ.ಆರ್., ೨೦೦೮, **ಪೂರ್ವ ಕರ್ನಾಟಕದ ಪಾಳೆಗಾರರ ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ಸಣ್ಣ ಬಾಳಪ್ಪ ಹೊಸಮನಿ, ೧೯೭೯, **ಐಸಿರಿ ಹಿರಿಯೂರು, ಚೇತನ ಪ್ರಕಾಶನ**, ಹಿರಿಯೂರು.

ಸುರೇಶ್ ಬಿ., ೨೦೦೯, **ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ದೇವಾಲಯಗಳು**, ಸಂಶೋಧನ ಪ್ರಕಾಶನ, ಬಾಲೇನಹಳ್ಳಿ.

ಸುಂದರ ಅ., ೧೯೮೫, **ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ**, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು.

ಸುಂದರ ಅ., ೧೯೮೯, **ವಿಶಿಷ್ಟ ವರ್ಣಚಿಗತ್ರಗಳ ಆಗರ**, ಬಾದಾಮಿ, ಬಾದಮಿ.

ಪಿಎಚ್.ಡಿ. ಸಂಶೋಧನ ಪ್ರಬಂಧಗಳು

ತಿಪ್ಪೇಸ್ವಾಮಿ ಹೆಚ್., ೨೦೦೨, **ದಾವಣಗೆರೆ ಜಿಲ್ಲೆಯ ದೇವಾಲಯಗಳು**, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಂಜುನಾಥ ಜಿ.ವಿ., ೨೦೧೦, **ದಾವಣಗೆರೆ ಜಿಲ್ಲೆಯ ದೇವಾಲಯಗಳ- ಒಂದು ಸಾಂಸ್ಕೃತಿಕ ಅಧ್ಯಯನ**, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಎಂ.ಫಿಲ್. ಸಂಶೋಧನ ಪ್ರಬಂಧಗಳು

ಕಾಂತರಾಜ್ ಹೆಚ್., ೨೦೧೩, **ಐಮಂಗಲ ಹೋಬಳಿ ಪರಿಸರ: ಸಾಂಸ್ಕೃತಿಕ ಅಧ್ಯಯನ** ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗರಾಜಪ್ಪ ಎಸ್. ೨೦೦೮, **ಚಿತ್ರದುರ್ಗ ಪರಿಸರದ ದೇವಾಲಯಗಳು**, ಅಪ್ರಕಟಿತ ಎಂ.ಫಿಲ್, ಪ್ರಬಂಧ, ಕನ್ನಡ ವಿಶ್ವವಿಧ್ಯಲಯ, ಹಂಪಿ.

ಯೋಗೆಶ್ ವೈ., ೨೦೦೮, **ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಅಪ್ರಕಟಿತ**, ಎಂ.ಫಿಲ್. ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲತಾ ಬಿ.ಕೆ., ೨೦೧೪, **ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ**, ಅಪ್ರಕಟಿತ ಎಂ.ಫಿಲ್. ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಶ್ವನಾಥ್ ಪಿ. ೨೦೦೯, **ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು**, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಾಥಮಿಕ ಆಕರಗಳು

Epigraphia Carnatica, Vol. XI

Chitradurga District Gazetteer, 1967

Mysore Archaeological, Annual Report, 1929 and 1977

ಆಂಗ್ಲ ಪುಸ್ತಕಗಳು

Natana Kachinatan, 1978, *Herostones of Tamilnadu,* Arun Publication, Tamil Nadu.

Settar.S (Ed.) 1982, *Memorial Stones,* Institute of Indian Art History, Karnataka University, Dharwad.

❑❑❑

೧. ಕೋಷ್ಟಕ-ದೇವಾಲಯಗಳು

ಕ್ರಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತು ಶೈಲಿ	ಕಾಲ	ಪಂಥ
೧	ಶ್ರೀತೇರುಮಲ್ಲೇಶ್ವರಶ್ರೀ	ಕೆಂಚಪ್ಪ ನಾಯಕನ ಹೆಬ್ಬಾಗಿಲು ಟಿ.ಟಿ ರಸ್ತೆ ಸಮೀಪ	ಗರ್ಭಗೃಹ, ಅಂತರಾಳ, ನವರಂಗ, ಸಭಾಮಂಟಪ	ವಿಜಯನಗರೋತ್ತರ	ಪಾಳೆಗಾರ	ಶೈವ
೨	ಚುಟಕ ಮಲ್ಲಪ್ಪ	ಸಿ.ಎಂ. ಬಡಾವಣೆ	ಗರ್ಭಗೃಹ, ಅಂತರಾಳ, ಸಭಾಮಂಟಪ	ವಿಜಯನಗರೋತ್ತರ	ಪಾಳೆಗಾರ	ಶೈವ
೩	ಮೈಲಾರಲಿಂಗ	ಶ್ರೀ ತೇರುಮಲ್ಲೇಶ್ವರ ದೇವಾಲಯದ ಸಮೀಪ	ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪ	ವಿಜಯನಗರೋತ್ತರ	ಪಾಳೆಗಾರ	ಶೈವ
೪	ಆಂಜನೇಯ	ಸಿದ್ದನಾಯಕನ ವೃತ್ತದ ಸಮೀಪ	ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪ	ವಿಜಯನಗರೋತ್ತರ	ಪಾಳೆಗಾರ	ವೈಷ್ಣವ
೫	ದುರ್ಗಾಪರಮೇಶ್ವರಿ	ಬಸವನಕಟ್ಟೆ ದುರ್ಗಿಗುಡಿ ರಸ್ತೆ ಸಮೀಪ	ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪ	ವಿಜಯನಗರೋತ್ತರ	ಪಾಳೆಗಾರ	ಶಾಕ್ತ
೬	ಬನದಮ್ಮ	ಗೋಪಾಲಪುರ ಬಡಾವಣೆ ಸಮೀಪ	ಗರ್ಭಗೃಹ	ವಿಜಯನಗರೋತ್ತರ	ಪಾಳೆಗಾರ	ಶಾಕ್ತ
೭	ಭಗವತಿ ಅಮ್ಮನ್	ಚುಟುಗ ಮಲ್ಲೇಶ್ವರ ಬಡಾವಣೆ ಮತ್ತು ಮುಖಮಂಟಪ	ಗರ್ಭಗೃಹ ಸಭಾಮಂಟಪ	ವಿಜಯನಗರೋತ್ತರ	ಪಾಳೆಗಾರ	ಶಾಕ್ತ

೮	ಶ್ರೀಕನ್ನಿಕಾ ಪರಮೇಶ್ವರಿ	ಸಿದ್ಧನಾಯಕನ ವೃತ್ತದ ಬಳಿ	ಗರ್ಭಗೃಹ, ಸಭಾಮಂಟಪ, ಮುಖಮಂಟಪ	ವಿಜಯನಗರೋತ್ತರ	ಪಾಳೆಗಾರ	ಶಾಕ್ತ
೯	ಕೊಲ್ಲಾಪುರದಮ್ಮ	ಗೋಪಾಲಪುರ ಬಡಾವಣೆಯಲ್ಲಿ	ಗರ್ಭಗೃಹ	ವಿಜಯನಗರೋತ್ತರ	ಪಾಳೆಗಾರ	ಶಾಕ್ತ
೧೦	ಬನಶಂಕರಿ	ಬಸವನಕಟ್ಟೆ ಸಮೀಪ ದುರ್ಗಿಗುಡಿ ರಸ್ತೆ	ಗರ್ಭಗೃಹ, ಸಭಾಮಂಟಪ, ಮುಖಮಂಟಪ	ವಿಜಯನಗರೋತ್ತರ	ಪಾಳೆಗಾರ	ಶಾಕ್ತ

೨. ಕೋಷ್ಟಕ ಸ್ಮಾರಕ ಶಿಲ್ಪಗಳು

ಕ್ರಸಂ.	ಸ್ಮಾರಕ ಶಿಲ್ಪಗಳು	ದೊರೆತ ಸ್ಥಳ	ಕಾಲಮಾನ
೧	ವೀರಗಲ್ಲು	ಗಾಂಧೀ ವೃತ್ತದ ಬಳಿ	ಸು. ಕ್ರಿಶ ೧೩ನೇ ಶತಮಾನ
೨	ವೀರಗಲ್ಲು	ಸಿದ್ದನಾಯಕನ ವೃತ್ತದ ಹಳೇ ಲೈಬ್ರರಿ ಸಮೀಪ	ಸು. ಕ್ರಿಶ ೧೫ನೇ ಶತಮಾನ
೩	ವೀರಗಲ್ಲು	ಕಲ್ಲಯ್ಯನ ಬಡಾವಣೆ	ಸು. ಕ್ರಿಶ ೧೫ನೇ ಶತಮಾನ
೪	ವೀರಗಲ್ಲು	ಕಲ್ಲಯ್ಯನ ಬಡಾವಣೆ	ಸು. ಕ್ರಿಶ ೧೦ನೇ ಶತಮಾನ
೫	ವೀರಗಲ್ಲು	ಕಲ್ಲಯ್ಯನ ಬಡಾವಣೆ	ಸು. ಕ್ರಿಶ ೧೩ನೇ ಶತಮಾನ
೬	ವೀರಮಾಸ್ತಿಗಲ್ಲು	ಕಲ್ಲಯ್ಯನ ಬಡಾವಣೆ	ಸು. ಕ್ರಿಶ ೧೪ನೇ ಶತಮಾನ


೩. ಕೋಷ್ಟಕ-ಶಾಸನಗಳು

ಕ್ರ.ಸಂ.	ರಾಜ ಮನೆತನ	ಅರಸ	ಶಾಸನ ದೊರೆತ ಸ್ಥಳ	ಶಾಸನ ಕಾಲಮಾನ	ಪ್ರಕಟಣೆ
೧	ಚಿತ್ರದುರ್ಗ ಪಾಳೆಯಗಾರರು	ಕಾಮಗೇತಿ ತಿಮ್ಮಣ್ಣನಾಯಕ	ಹಿರಿಯೂರು ಹಳೆ ಊರಿನಲ್ಲಿರುವ ವೀರಭದ್ರ ದೇವಾಲಯದ ಮುಂಭಾಗದಲ್ಲಿ ನೆಟ್ಟಕಲ್ಲು	ಸು.ಕ್ರಿ.ಶ ೧೩-೧೪ನೇ ಶತಮಾನ	ಎ.ಕ.,ಸಂ.೧೧
೨	ಚಿತ್ರದುರ್ಗ ಪಾಳೆಯಗಾರರು	ಮಲಪ್ಪ ನಾಯಕ	ದೊಡ್ಡಪೇಟೆ ದಳವಾಯಿ ಮನೆ ಜಗಲಿ ಮೇಲೆ ನೆಟ್ಟಕಲ್ಲು	ಸು.ಕ್ರಿ.ಶ ೧೪ನೇ ಶತಮಾನ	ಎ.ಕ.,ಸಂ.೧೧
೩	ಚಿತ್ರದುರ್ಗ ಪಾಳೆಯಗಾರರು	ಕೆಂಚಪ್ಪ ನಾಯಕ	ತೇರುಮಲ್ಲೇಶ್ವರ ದೇವಾಲಯದ ಉತ್ತರಭಾಗದ ಸ್ಥಳದಲ್ಲಿ	ಸು.ಕ್ರಿ.ಶ ೧೪-೧೫ನೇ ಶತಮಾನ	ಎ.ಕ.,ಸಂ.೧೧


ವಕ್ತೃ ವಿವರ

ಕ್ರಸಂ.	ವ್ಯಕ್ತಿಯ ಹೆಸರು	ವಯಸ್ಸು	ವೃತ್ತಿ
೧	ಯಳನಾಡು ಅಂಜಿನಪ್ಪ	೬೬	ಸಾಹಿತಿ
೨	ಜಿ. ಧನಂಜಯ್ ಕುಮಾರ್	೫೬	ಮಾಜಿ ಪುರಸಭಾ ಸದಸ್ಯರು
೩	ಗೋಪಿನಾಥ್	೬೦	ಅರ್ಚಕರು
೪	ನರಸಿಂಹಪ್ಪ	೬೯	ಬ್ಯಾಂಕ್ ಉದ್ಯೋಗಿ
೫	ಮಹಾಲಿಂಗಪ್ಪ	೪೨	ಪ್ಲಂಬರ್
೬	ಮಲ್ಲೇಶ್	೩೫	ಅರ್ಚಕರು
೭	ಎಲೆ ಅಡಿಕೆ ತಿಮ್ಮಣ	೪೦	ಜಾಡಮಾಲಿ
೮	ಶಾಂತಜ್ಜ	೭೦	ದುರ್ಗಾಂಬಿಕ ದೇವಿ ದೇವಾಸ್ಥಾನದ ಸಮಿತಿ ಸದಸ್ಯರು
೯	ಹೊನ್ನೂರಪ್ಪ	೪೬	ಕೂಲಿ
೧೦	ರಾಮಾಂಜನೇಯ	೫೩	ಕೂಲಿ
೧೧	ದೊರೆಸ್ವಾಮಿ	೫೭	ಕೂಲಿ
೧೨	ಓಂಕಾರಪ್ಪ	೪೮	ಕೂಲಿ
೧೩	ದಿವಾಕರ	೩೮	ಕೂಲಿ
೧೪	ಕೆಂಚಪ್ಪ	೬೫	ಕೂಲಿ
೧೫	ಯಜಮಾನ್ ಸಿದ್ದಪ್ಪ	೬೦	ಕೂಲಿ
೧೬	ಪೌಲ್ಡ್ ಡಿಸೋಜ	೫೬	ಚರ್ಚಿನ ಫಾದರ್


ಶ್ರೀತೇರುಮಲ್ಲೇಶ್ವರ ದೇವಾಲಯದ ತಲವಿನ್ಯಾಸ




ಶ್ರೀರಾಜಾದುರ್ಗ ಪರಮೇಶ್ವರಿ ದೇವಾಲಯದ ತಲವಿನ್ಯಾಸ




ಬನಶಂಕರಿ ದೇವಾಲಯದ ತಲವಿನ್ಯಾಸ




ಆಂಜನೇಯ ದೇವಾಲಯದ ತಲವಿನ್ಯಾಸ



ಶ್ರೀ ಮೈಲಾರಲಿಂಗ ದೇವಾಲಯದ ತಲವಿನ್ಯಾಸ



ಚುಟುಗುಮಲ್ಲಪ್ಪ ದೇವಾಲಯದ ತಲವಿನ್ಯಾಸ



ಛಾಯಾಚಿತ್ರಗಳು



ತೇರುಮಲೇಶ್ವರ ದೇವಾಲಯದ ಗೋಪುರ.



ತೇರುಮಲೇಶ್ವರ ದೇವಾಲಯದ ಪಾರ್ಶ್ವನೋಟ.



ತೇರುಮಲೇಶ್ವರ ದೇವಾಲಯದ ಗರ್ಭಗೃಹದ ಮೇಲಿನ ಶಿಖರ.



ತೇರುಮಲೇಶ್ವರ ದೇವಾಲಯದ ಮುಂಭಾಗದ ದೀಪ ಕಂಬ.



ಚುಟುಗ ಮಲ್ಲೇಶ್ವರ ದೇವಾಲಯದ ಪಾರ್ಶ್ವನೋಟ.



ಚುಟುಗ ಮಲ್ಲೇಶ್ವರ ದೇವಾಲಯದ ಮುನ್ನೋಟ.



ಆಂಜನೇಯ ದೇವಾಲಯದ ಮುನ್ನೋಟ.



ಆಂಜನೇಯ ದೇವಾಲಯದ ಗರ್ಭಗೃಹದ ಮೇಲಿನ ಶಿಖರ.



ಮೈಲಾರಲಿಂಗ ದೇವಾಲಯ.



ಬನಶಂಕರಿ ದೇವಾಲಯದ ಮುನ್ನೋಟ.



ಭಗವತಿ ಅಮ್ಮನ್ ದೇವಾಲಯದ ಮುನ್ನೋಟ.



ಭಗವತಿ ಅಮ್ಮನ್ ದೇವಾಲಯದ ಗರ್ಭಗೃಹದ ಮೇಲಿನ ಶಿಖರ.




ರಾಜಾ ದುರ್ಗಾಪರಮೇಶ್ವರ ದೇವಾಲಯದ ಪಾರ್ಶ್ವನೋಟ.



ಕನ್ನಿಕ ಪರಮೇಶ್ವರ ದೇವಾಲಯದ ದ್ವಾರ ಗೋಪುರ.



ಪಸುರಾಂಭ ಮತ್ತು ಜೀರಲಿಂಗೇಶ್ವರ ದೇವಾಲಯದ ಗರ್ಭಗೃಹ.



ಬನದಮ್ಮ ದೇವಾಲಯದ ಗರ್ಭಗೃಹ.



ಜೈನ ಬಸದಿ.



ಸ್ವರ್ಗ ಸ್ವೀಕೃತ ಮಾತೆಯ ದೇವಾಲಯ (ಚರ್ಚ್).



ಸ್ವರ್ಗ ಸ್ವೀಕೃತ ಮಾತೆಯ ದೇವಾಲಯ (ಚರ್ಚ್)ನ ಪ್ರಾರ್ಥನ ಮಂದಿರ.



ಜಾಮೀಯಾ ಮಸೀದಿ.



ತೇರುಮಲೇಶ್ವರ ದೇವಾಲಯದ ಗರ್ಭಗೃಹದಲ್ಲಿನ ಮೂರ್ತಿ.



ಬನದಮ್ಮ ದೇವಾಲಯದ ಗರ್ಭಗೃಹದಲ್ಲಿನ ಮೂರ್ತಿ.



ವಸುರಾಂಭ ಮತ್ತು ಜೀರಲಿಂಗೇಶ್ವರ ದೇವಾಲಯದ
ಗರ್ಭಗೃಹದ ಮೂರ್ತಿಗಳು.



ದುರ್ಗಾಪರಮೇಶ್ವರ ದೇವಾಲಯದ ಗರ್ಭಗೃಹದಲ್ಲಿನ ಮೂರ್ತಿ.



ಆಂಜನೇಯನ ಮೂರ್ತಿ.



ತೇರುಮಲೇಶ್ವರ ದೇವಾಲಯದ ತೇರು.





ಬೀರಲಿಂಗೇಶ್ವರ ಮತ್ತು ತೇರುಮಲ್ಲೇಶ್ವ ದೇವಾಲಯದ ಬಳಿಯಿರುವ ಪಾಳೆಗಾರರ ಕಾಲದ ಶಾಸನಗಳು

ವೀರಗಲ್ಲುಗಳು ಮತ್ತು ಮಾಸ್ತಿಗಲ್ಲು : ಕಲ್ಲಯ್ಯನ ಬಡವಾಣೆ











ವೀರಗಲ್ಲು : ಬೀರಲಿಂಗೇಶ್ವರ ದೇವಾಲಯ ಸಮೀಪ.




ವೀರ ಮಾಸ್ತಿಗಲ್ಲು : ಗಾಂಧಿ ವೃತ್ತ ಸಮೀಪ.

ಶ್ರೀ ತೇರುಮಲ್ಲೇಶ್ವರ ದೇವಾಲಯದಲ್ಲಿನ ಭಿತ್ತಿ ಚಿತ್ರಗಳು.












ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ